RNI:KARKAN/2021/85750 KPL/L/RNP/02/24-26

# ಕರುನಾಡ ಕಂದ

Volume 4 ಸಂಪುಟ 4 | Issue 14 ಸಂಚಿಕೆ 14 | Date 16-05-2025 | Page 16 ಪುಟ 16 | ಬೆಲೆ: 20/-
FORTNIGHTLY ಪಾಕ್ಷಿಕ ಪತ್ರಿಕೆ

ಸಂಪಾದಕರು: ಬಸವರಾಜ ಬಳಿಗಾರ
ಮೋ.ನಂ: 9986366909

## ಬಿ-ಖಾತೆ ಹೆಸರಿನಲ್ಲಿ ಅಧಿಕಾರಿಗಳ ಭರ್ಜರಿ ಲಂಚಾವತಾರ



### ಕರುನಾಡ ಕಂದ ವರದಿಯ ಫಲಶೃತಿ

## ವೈದ್ಯಕೀಯ ಶಿಕ್ಷಣ ಸಚಿವರ ಜಿಲ್ಲೆಯಲ್ಲಿ ಹಗಲಲ್ಲೇ ಆಸ್ಪತ್ರೆಗೆ ಬೀಗ: ಆಸ್ಪತ್ರೆಗೆ ಭೇಟಿ ನೀಡಿದ ತಾಲೂಕ ಆರೋಗ್ಯ ಅಧಿಕಾರಿಗಳು



ತುಮಕೂರು

## ಮನವಿ ಸಹಿತ, ಎಚ್ಚರಿಕೆಯ ಬಹಿರಂಗ ಪತ್ರ...

### ಪ್ರಿಯ ಸ್ಥಳೀಯ ಜನಪ್ರತಿನಿಧಿಗಳೇ/ ಸರ್ಕಾರಿ ನೌಕರರೇ...

## ನಮ್ಮೂರ ಸ್ಥಿತಿಗತಿ: ಎತ್ತಿಗೆ ಜ್ವರ ಬಂದ್ರೆ ಎಮ್ಮೆಗೆ ಬರೆ ಹಾಕಿದಂಗೆ



## ಮರ್ಕಟಗಳ ಕಾಟ, ಅಧಿಕಾರಿಗಳ ಜೂಟಾಟ ರೈತರಿಗೆ ಪ್ರಾಣ ಸಂಕಟ ...!?

### ಕರುನಾಡ ಕಂದ ವರದಿಯ ಫಲಶೃತಿ

## ಎಚ್ಚೆತ್ತ ಜೆಸ್ಕಾಂ ,ಗ್ರಾಮ ಪಂಚಾಯತಿ: ಸಾರ್ವಜನಿಕರ ಮೆಚ್ಚುಗೆ



## ಗಾಂಧಿ ಮತ್ತು ಅಂಬೇಡ್ಕರ್- ಜಿ.ಎಲ್.ನಾಗೇಶ್



## ಸಾಮಾಜಿಕ ಜಾಲತಾಣ ಬಳಕೆದಾರರೇ... ಎಚ್ಚರ!

## ಆಪರೇಷನ್ ಸಿಂಧೂರ: ನೊಂದ ಹೆಣ್ಣುಮಕ್ಕಳಿಗೆ ಸಿಕ್ಕ ಗೌರವ




## ಎಲ್ಲಾ ವ್ಯವಹಾರಗಳನ್ನು ಕುಟುಂಬದೊಂದಿಗೆ ಹಂಚಿಕೊಳ್ಳಿ, ಇಲ್ಲವಾದಲ್ಲಿ ಆಗುವುದು ನಷ್ಟ



ಕರುನಾಡ ಕಂದ
ಸಂಪುಟ 04 । ಸಂಚಿಕೆ 14
ದಿನಾಂಕ: 16-05-2025 ಪುಟಗಳು:16

## ಕರುನಾಡ ಕಂದ ವರದಿಯ ಫಲಶೃತಿ

# "ಅಧಿಕಾರಿಗಳ ಬೇಜವಾಬ್ದಾರಿ ರೋಗಗಳಿಗೆ ರಹದಾರಿ"






ಶೀರ್ಷಿಕೆಯಡಿಯಲ್ಲಿ ಕಳೆದ ಮೇ 6 ರಂದು ಕರುನಾಡ ಕಂದ ನ್ಯೂಸ್ ಪೋರ್ಟಲ್ ನಲ್ಲಿ ವರದಿ ಮಾಡಲಾಗಿತ್ತು, ವರದಿಗೆ ಎಚ್ಚೆತ್ತ ಚಂಡರಕಿ ಗ್ರಾಮ ಪಂಚಾಯಿತಿ ಅಧಿಕಾರಿಗಳಿಂದಾಗಿ ಬಹು ದಿನಗಳಿಂದ ಸ್ವಚ್ಛತೆಗೆ ದೂರವಾಗಿದ್ದ ಗ್ರಾಮದ ನೀರಿನ ಟ್ಯಾಂಕ್ ಪ್ರಾಂಗಣ ಕೊನೆಗೂ ಸ್ವಚ್ಛತೆ ಕಂಡಿದೆ.

ಈ ಕಾರ್ಯದ ಎಲ್ಲಾ ಶ್ರೇಯಸ್ಸು ಗುರುಮಠಕಲ್ ತಾಲೂಕ ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ಅಂಬರೀಷ್ ಪಾಟೀಲ್ ಅವರಿಗೆ ಸಲ್ಲುತ್ತದೆ, ವರದಿ ಪ್ರಕಟವಾದ ಬಳಿಕ ಚಂಡರಿಕಿ ಗ್ರಾಮ ಪಂಚಾಯತಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಗೀತಮ್ಮ ಅವರಿಗೆ ಈಗಾಗಲೇ ಉತ್ತರ ಕೇಳಿ ಎರಡು ಸೂಚನೆ ಜಾರಿ ಮಾಡಿದ್ದಾರೆ, ಅವರ ಉತ್ತರ ಬಳಿಕ ಮುಂದಿನ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.

ಕರುನಾಡ ಕಂದ ಪತ್ರಿಕೆ ಸಮಾಜ ಮುಖಿ ಕೆಲಸ ಮಾಡುತ್ತಿರುವುದು, ವರದಿಗಳ ಮೂಲಕ ಅಧಿಕಾರಿಗಳ ಜವಾಬ್ದಾರಿ ಹೆಚ್ಚಿಸುತ್ತಿದ್ದು ಸಾರ್ವಜನಿಕರ ಸಮಸ್ಯೆ ಪರಿಹರಿಸುವಲ್ಲಿ ಸಹಾಯವಾಗಿದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಗ್ರಾಮದ ನೀರಿನ ಟ್ಯಾಂಕ್ ಕೆಳಗೆ ಸ್ವಚ್ಛತೆ ಕಾರ್ಯ ಮಾಡಲಾಗಿದೆ, ನೀರಿನ ಸರಬರಾಜು ಮಾಡುವ ಪೈಪ್ ವಾಲ್ ಸುತ್ತ ಮುತ್ತ ಕಸ, ಪ್ಲಾಸ್ಟಿಕ್ ಮದ್ಯ ಬಾಟಲಿಗಳನ್ನು ತೆಗೆದು ಸ್ವಚ್ಛತೆ ಮಾಡಲಾಗಿದೆ, ನೀರಿನ ಟ್ಯಾಂಕ್ ಹಾಗೂ ಸುತ್ತ ಮುತ್ತಲಿನ ಆವರಣ ಸ್ವಚ್ಛತೆಗೊಳಿಸಿ ಕುಡಿಯಲು ಯೋಗ್ಯ ನೀರನ್ನು ಸಾರ್ವಜನಿಕರಿಗೆ ನೀಡಲು ತಕ್ಷಣಕ್ಕೆ ಸ್ಪಂದಿಸಿ ಕಾರ್ಯರೂಪಕ್ಕೆ ತರಲು ಮುಂದಾದ ಗುರುಮಠಕಲ್ ತಾಲೂಕ ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ಅಂಬರೀಷ್ ಪಾಟೀಲ್ ಅವರಿಗೆ ಸಾರ್ವಜನಿಕರು ಹಾಗೂ ಕರುನಾಡ ಕಂದ ಪತ್ರಿಕೆ ವತಿಯಿಂದ ತುಂಬು ಹೃದಯದ ಧನ್ಯವಾದಗಳು.

**ವರದಿ: ಜಗದೀಶ್ ಕುಮಾರ್ ಭೂಮಾ**

## ಕರುನಾಡ ಕಂದ ವರದಿಯ ಫಲಶೃತಿ

# ಪಂಪಿಂಗ್ ಯಂತ್ರದ ಮೂಲಕ ಬಗೆಹರಿಸಿ ಸಮಸ್ಯೆಗೆ ತಾತ್ಕಾಲಿಕ ಪರಿಷ್ಕರಣೆ ನೀಡಿದ ಪುರಸಭೆ

**" ಯುಜಿಡಿ ಅವಾಂತರ, ಸಂಚಾರ ಸಂಚಕಾರ : ಯು.ಜಿ.ಡಿ ನಿರ್ವಹಣೆ ವೈಫಲ್ಯ- ಪುರಸಭೆ ಕಾರ್ಯಾಲಯದಿಂದ ಪ್ರತಿಬಾರಿ ಅದೇ ರಾಗ ಅದೇ ತಾಳ " ತಲೆ ಬರಹದ ಅಡಿಯಲ್ಲಿ 4-5-2025 ರ ಭಾನುವಾರ ಕರುನಾಡ ಕಂದ ನ್ಯೂಸ್ ಪೋರ್ಟಲ್ ನಲ್ಲಿ ವರದಿ ಪ್ರಕಟವಾಗಿತ್ತು.**




**ಯಾದಗಿರಿ/ ಗುರುಮಠಕಲ್:** ಪಟ್ಟಣದ ಒಳ ಚರಂಡಿ ವ್ಯವಸ್ಥೆ ದುರಸ್ತಿ ಕುರಿತಾದ ಸುದ್ದಿ ಬಿತ್ತರಿಸಿದ ಹಿನ್ನಲೆಯಲ್ಲಿ ಗುರುಮಠಕಲ್ ಪುರಸಭೆ ಕಾರ್ಯಾಲಯದಿಂದ ಪಟ್ಟಣದ ಹಲವು ಕಡೆ ಮುಚ್ಚಳ ಸೋರಿಕೆಯಾಗಿ ತ್ಯಾಜ್ಯ ಸೋರಿಕೆಯಾಗುತ್ತಿರುವ ವಾರ್ಡ್ ಸಂಖ್ಯೆ 5ರಲ್ಲಿರುವ ಯು. ಜಿ. ಡಿ ಸೋರಿಕೆಯನ್ನು ಭಾರೀ ಪ್ರಮಾಣದ ಪಂಪಿಂಗ್ ಯಂತ್ರದ ಮೂಲಕ ಬಗೆಹರಿಸಿ ಸಮಸ್ಯೆಗೆ ತಾತ್ಕಾಲಿಕ ಪರಿಷ್ಕರಣೆ ಮಾಡಿದ್ದಾರೆ.

ಸಮಸ್ಯೆ ಬಗೆಹರಿಸಿ, ದುರ್ನಾತ ತಪ್ಪಿಸಿದ ಪುರಸಭೆ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಮುಂದೆಯೂ ಸಹ ವಿಳಂಬ ತೋರದೆ ತ್ವರಿತ ಗತಿಯಲ್ಲಿ ಇದೇ ರೀತಿ ಕಾರ್ಯಚಾರಣೆ ಮಾಡಲಿ ಎಂದು ಆಶಿಸುವೆವು ಎಂದು ಮಲ್ಲಿಕಾರ್ಜುನ ಹಿರೇಮಠ್ ಸಾರ್ವಜನಿಕರ ಪರವಾಗಿ ತಮ್ಮ ಅಭಿಪ್ರಾಯ ತಿಳಿಸಿದರು.

**ವರದಿ: ಜಗದೀಶ್ ಕುಮಾರ್ ಭೂಮಾ**

# ತಾಲೂಕಿನಾದ್ಯಂತ ಸ್ತ್ರೀ ಕುಲದ ಆದರ್ಶ, ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನವರ 603 ನೇಯ ಜಯಂತಿ ಆಚರಣೆ



**ಯಾದಗಿರಿ :** ಗುರುಮಠಕಲ್ ತಾಲೂಕಿನ ವಿವಿಧೆಡೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನವರ 603 ನೆಯ ಜಯಂತಿಯನ್ನು ಅತ್ಯಂತ ಸರಳವಾಗಿ ಹಾಗೂ ಭಕ್ತಿ ಪೂರ್ವಕವಾಗಿ ಆಚರಿಸಲಾಯಿತು.

ಗುರುಮಠಕಲ್ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಬಸ್ ಘಟಕದ ಅಧಿಕಾರಿಗಳು ಮತ್ತು ಸಿಬ್ಬಂದಿ ಜಯಂತಿ ಆಚರಣೆ ಮಾಡಿದರು.ಶ್ರೀ ಲಕ್ಷ್ಮೀ ವೆಂಕಟೇಶ್ವರ ಪಬ್ಲಿಕ್ ಶಾಲೆ ಮುಖ್ಯ ಗುರುಗಳು ಹಾಗೂ ಮಕ್ಕಳೊಂದಿಗೆ ಆಚರಿಸಿದರು.

ಮಿನಾಸಪೂರ್ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರು, ಸಿಬ್ಬಂದಿ ಸೇರಿದಂತೆ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸುವಾದರ ಮುಖಾಂತರ ಜಯಂತಿ ಆಚರಣೆ ಮಾಡಲಾಯಿತು.

ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನವರು ಶ್ರೀಶೈಲ ಮಲ್ಲಿಕಾರ್ಜುನನನ್ನು ತನ್ನ ಆರಾಧ್ಯ ದೈವವಾಗಿ ಆರಾಧಿಸಿ, ಸಾಕ್ಷಾತ್ಕರಿಸಿಕೊಂಡ ಹೇಮರೆಡ್ಡಿ ಮಲ್ಲಮ್ಮ ಮೋಕ್ಷ ಪಡೆಯಲು ಲೌಕಿಕ ಪ್ರಪಂಚವನ್ನು ತ್ಯಾಗ ಮಾಡದೇ ಸಂಸಾರದಲ್ಲಿದ್ದುಕೊಂಡೇ ಸದ್ಗತಿ ಹೊಂದಿದರು. ತಾನು ಎಷ್ಟೇ ಕಷ್ಟ ಅನುಭವಿಸಿದರೂ ಅದಕ್ಕೆ ನೊಂದುಕೊಳ್ಳದೇ, ಮಲ್ಲಿಕಾರ್ಜುನನನ್ನು ಪೂಜಿಸಿ, ಧ್ಯಾನಿಸಿ ಮುಕ್ತಿ ಪಡೆದರು ಅವರ ಜೀವನ ನಮಗೆ ಆದರ್ಶವಾಗಲಿ ಎನ್ನುವುದೇ ನಮ್ಮ ಆಶಯ.

**ವರದಿ: ಜಗದೀಶ್ ಕುಮಾರ್ ಭೂಮಾ**

## ಕರುನಾಡ ಕಂದ ವರದಿಯ ಫಲಶೃತಿ

# ವೈದ್ಯಕೀಯ ಶಿಕ್ಷಣ ಸಚಿವರ ಜಿಲ್ಲೆಯಲ್ಲಿ ಹಗಲಲ್ಲೇ ಆಸ್ಪತ್ರೆಗೆ ಬೀಗ

## ಆಸ್ಪತ್ರೆಗೆ ಭೇಟಿ ನೀಡಿದ ತಾಲೂಕ ಆರೋಗ್ಯ ಅಧಿಕಾರಿಗಳು



ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಇಟ್ಕಲ ಗ್ರಾಮದ ಸರಕಾರಿ ಆಸ್ಪತ್ರೆಯ ಕುರಿತಾದ "ವೈದ್ಯಕೀಯ ಶಿಕ್ಷಣ ಸಚಿವರ ಜಿಲ್ಲೆಯಲ್ಲಿ ಹಗಲಲ್ಲೇ ಆಸ್ಪತ್ರೆಗೆ ಬೀಗ" ತಲೆ ಬರಹದ ಸುದ್ದಿಯಲ್ಲಿ ಈ ಆಸ್ಪತ್ರೆಯ ಕುರಿತು ವಿವರವಾಗಿ ವರದಿಯನ್ನು ಕರುನಾಡ ಕಂದ. ಕಾಮ್ ಸುದ್ದಿ ಪೋರ್ಟಲ್ ನಲ್ಲಿ ಪ್ರಕಟಿಸಲಾಗಿತ್ತು ಈ ಸುದ್ದಿಯನ್ನು ನೋಡಿ ಆಸ್ಪತ್ರೆಗೆ ಭೇಟಿ ನೀಡಿದ ತಾಲೂಕು ಆರೋಗ್ಯಾಧಿಕಾರಿಗಳಾದ ಡಾ. ಸಂಜೀವ ಪಾಟೀಲ್ ಆಸ್ಪತ್ರೆ ಸಿಬ್ಬಂದಿಗೆ ತರಾಟೆಗೆ ತೆಗೆದುಕೊಂಡರು, ಈ ರೀತಿ ಸಾರ್ವಜನಿಕರಿಗೆ ತೊಂದರೆ ಮುಂದುವರೆದರೆ ಎಲ್ಲಾ ಸಿಬ್ಬಂದಿಗಳ ಮೇಲೆ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದರು.

**ವರದಿ: ಜಗದೀಶ್ ಕುಮಾರ್ ಭೂಮಾ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 14
ದಿನಾಂಕ: 16-05-2025 ಪುಟಗಳು:16

# ನಮ್ಮೂರ ಸ್ಥಿತಿಗತಿ : ಎತ್ತಿಗೆ ಜ್ವರ ಬಂದ್ರೆ ಎಮ್ಮೆಗೆ ಬರೆ ಹಾಕಿದಂಗೆ

## ಅವೈಜ್ಞಾನಿಕ ರಸ್ತೆ ನಿರ್ಮಾಣ : ಚರಂಡಿ ನಿರ್ಮಾಣ ಮಾಡುವುದು ಮರೆತ ಅಭಿವೃದ್ಧಿ ಅಧಿಕಾರಿಗಳು

**ಯಾದಗಿರಿ/ ಗುರುಮಠಕಲ್ :** ಪುರಸಭೆ ಸದಸ್ಯರ ಚುನಾವಣೆ ಇನ್ನೂ ಕೆಲವೇ ತಿಂಗಳುಗಳು ಉಳಿದಿವೆ, ಪಟ್ಟಣದಲ್ಲಿ ಅಭಿವೃದ್ಧಿ ಪರ ಕೆಲಸಗಳು ಹಗಲಿರುಳು ನಡೆಯುತ್ತಿವೆ.

ಒಂದು ಕಡೆ ಪಟ್ಟಣದಿಂದ ನೆರೆ ತೆಲಂಗಾಣದ ನಾರಾಯಣಪೇಟೆ ಹೋಗುವ ಮುಖ್ಯ ರಸ್ತೆ ನಿರ್ಮಾಣ ಜರುಗುತ್ತಿದ್ದು, ಇದೇ ಸಮಯದಲ್ಲಿ ನಿರ್ಮಿತಿ ಕೇಂದ್ರದಿಂದ ಬಡಾವಣೆಗಳಲ್ಲಿ ರಸ್ತೆಗಳ ನಿರ್ಮಾಣವಾಗುತ್ತಿದ್ದು ನಾಗರಿಕರಿಗೆ ಸಂಚಾರಿಸಲು ಕಷ್ಟವಾಗುತ್ತಿದ್ದು ವಾಹನ ಸವಾರರ ಗೋಳು ಕೇಳತೀರದು.

ವರದಿ: ಜಗದೀಶ್ ಕುಮಾರ್ ಭೂಮಾ



**ಅವೈಜ್ಞಾನಿಕ ರೀತಿಯಲ್ಲಿ ರಸ್ತೆ ನಿರ್ಮಾಣ ಮಾಡುತ್ತಿದ್ದು ಚರಂಡಿ ದುರಸ್ಥಿ ಮಾಡದ ಪರಿಣಾಮವಾಗಿ ಬೀದಿ ಬದಿಯಿರುವ ಅಂಗಡಿಯೊಳಗೆ ಹಾಗೂ ಮನೆಗಳಗೆ ಮಳೆ ಬಂದಾಗ ಚರಂಡಿ ನೀರು ಒಳ ಹೊಕ್ಕು ಅಪಾರ ಪ್ರಮಾಣದ ನಷ್ಟ ಉಂಟಾಗುತ್ತಿದೆ.**
■ **ಶ್ರೀಕಾಂತ್ ತಲಾರಿ**
ತಾಲೂಕಾಧ್ಯಕ್ಷರು, ಅಂಬೇಡ್ಕರ್ ಯುವ ಸೇನೆ, ಗುರುಮಠಕಲ್.

**ಮಳೆ ಬಂದರೆ ಸಾಕು ನಮಗೆ ನೀರು ಎಲ್ಲಿ ಒಳ ನುಗ್ಗುತ್ತದೆ ಎಂದು ಭಯದ ವಾತಾವರಣ ಸೃಷ್ಟಿಯಾಗಿದೆ.**
■ **ಚಂದ್ರಕಾಂತ್ ಸುಬ್ಬಿ**, ವ್ಯಾಪಾರಸ್ಥರು.

**ವ್ಯಾಪಾರಸ್ಥರಿಗೆ ಪರವಾನಿಗೆ ತೆಗೆದುಕೊಳ್ಳಲು ಪುರಸಭೆ ತೋ-ರಿಸುವ ಉತ್ಸಾಹ ಸಮಸ್ಯೆ ಪರಿಹರಿಸಲು ತೋರಿಸಿದಾಗ ಮಾತ್ರ ಇನ್ನೂ ಮುಂದೆ ಈ ರೀತಿ ಆಗುವುದಿಲ್ಲ.**
■ **ರವೀಂದ್ರರೆಡ್ಡಿ ಪೋತುಲು,**
ಭಾ. ಜ. ಪ ಯುವ ಮುಖಂಡರು.

**ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಳೆದ ಹಾಗಾಗಿದೆ, ಮುಂದಾಲೋಚನೆ ಇಲ್ಲದೆ ಹಳೆ ರಸ್ತೆ ತೆಗೆದು ಚರಂಡಿ ದುರಸ್ಥಿ ಮಾಡಿ ಹೊಸ ರಸ್ತೆ ನಿರ್ಮಾಣ ಮಾಡಿದ್ದರೆ ವ್ಯಾಪಾರಸ್ಥರಿಗೆ ತೊಂದರೆ ಆಗುತ್ತಿರಲಿಲ್ಲ.**
■ **ಸಂಜೀವ ಕುಮಾರ್ ಚಂದಾಪುರ್**
ಹಿರಿಯ ಕಾಂಗ್ರೆಸ್ ಮುಖಂಡರು

**ರಸ್ತೆ ಮೇಲೆ ರಸ್ತೆ ಪ್ರತಿ ಬಾರಿ ಹಾಕುವುದರಿಂದ ರಸ್ತೆಯ ಅಕ್ಕ ಪಕ್ಕದ ಹಳೆ ಚರಂಡಿ ದುರಸ್ಥಿ ಮಾಡದೆ ಇರುವದರಿಂದ ಖುದ್ದಾಗಿ ತಾವೇ ಚರಂಡಿ ದುರಸ್ಥಿ ನಿರ್ಮಾಣ ಮಾಡಿಕೊಳ್ಳುತ್ತಿರುವ ವ್ಯಾಪಾರಿಗಳ ಸ್ಥಿತಿ ಹೇಳತೀರದು.**
■ **ತಿರುಮಲೇಶ್**, ತರಕಾರಿ ವ್ಯಾಪಾರಸ್ಥರು.

# ಕರುನಾಡ ಕಂದ ವರದಿಯ ಫಲಶ್ರುತಿ

## ಶುದ್ಧ ಕುಡಿಯುವ ನೀರಿನ ಘಟಕ ದುರಸ್ತಿ ಪಡಿಸಿ ಸಾರ್ವಜನಿಕರ ಮೆಚ್ಚುಗೆ ಪಡೆದ ಅಧಿಕಾರಿಗಳು




**ಯಾದಗಿರಿ /ಗುರುಮಠಕಲ್ :** ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುರುಮಠಕಲ್ ಉಪ ಮಾರುಕಟ್ಟೆಯ ಪ್ರಾಂಗಣದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕ ದುರಸ್ತಿ ಕು-ರಿತಾಗಿ ಕಳೆದ ಏಪ್ರಿಲ್ 16 ರ ಕರುನಾಡ ಕಂದ ಸಂಚಿಕೆಯಲ್ಲಿ ವಿಸ್ತೃತ ವರದಿ ಪ್ರಕಟವಾಗಿತ್ತು. ಈ ವರದಿಯನ್ನು ಸ್ಥಳೀಯ ಹೋರಾಟಗಾರರು ತಮ್ಮ  ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಶೇರ್ ಮಾಡುವ ಮೂಲಕ ವೈರಲ್ ಕೂಡಾ ಮಾಡಿ ಪತ್ರಿಕೆಯ ವರದಿಗೆ ಮೆಚ್ಚುಗೆಯ ಜೊತೆ ಜೊತೆಗೆ ಸ್ಥಳೀಯ ಅಧಿಕಾರಿಗಳ, ಜನಪ್ರತಿನಿಧಿಗಳ ಗಮನಕ್ಕೆ ತಂದಿದ್ದರು.

ಈ ವರದಿಗೆ ಎಚ್ಚೆತ್ತು ಕಳೆದ ವಾರದಿಂದ ಕುಡಿಯುವ ನೀರಿನ ಘಟಕವನ್ನು ದುರಸ್ತಿ ಪಡಿಸಿ , ಇಲ್ಲಿಗೆ ಬರುವ ರೈತರಿಗೆ ನೀರಿನ ಸೌಲಭ್ಯ ಸಿಗುವಂತಾಗಿದೆ.

ಈ ಕುರಿತು ಕಾರ್ಯದರ್ಶಿಗಳಾದ ಶಿವಕುಮಾರ ದೇಸಾಯಿ ಮಾತನಾಡಿ ತಮ್ಮ ಮೂಲಕ ನಮಗೆ ಸಮಸ್ಯೆ ಕುರಿತು ಅರಿವಾಗಿದೆ, ಪ್ರತಿ ಬಾರಿ ಸಮಸ್ಯೆ ಆದಾಗ ತಾತ್ಕಾಲಿಕವಾಗಿ ಪರಿಹಾರ ಕಂಡುಕೊಳ್ಳದೆ, ಈ ಬಾರಿ ಆದ ಮತ್ತೆ ಸಮಸ್ಯೆ ಬಾರದಂತೆ ಮುಂದೆ ನೋಡಿ ಕೊಳ್ಳಲಾಗುತ್ತದೆ ಎಂದು ಪತ್ರಿಕೆಗೆ ತಿಳಿಸಿದ್ದಾರೆ. ನಿರ್ವಾಹಕರಾದ ಜಗದೀಶ್ ಅವರು ಶುದ್ಧ ನೀರಿನ ಘಟಕ ಪ್ರಾರಂಭವಾಗಿರುವುದು ಸಂತಸ ತಂದಿದೆ ಎಂದು ಹರ್ಷ ವ್ಯಕ್ತ ಪಡಿಸಿದರು.

ವರದಿ: ಜಗದೀಶ್ ಕುಮಾರ್ ಭೂಮಾ




ಬೈಲಹೊಂಗಲ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ಎ. ಎನ್. ಪ್ಯಾಟಿ ಅವರೊಂದಿಗೆ ಕರುನಾಡ ಕಂದ ಪತ್ರಿಕೆ.

**ಕರುನಾಡ ಕಂದ ಪತ್ರಿಕೆಯ ವಾರ್ಷಿಕ ಚಂದಾ ವಿವರ**

ವಾರ್ಷಿಕ ಚಂದಾ =500/- ರೂಪಾಯಿಗಳು ಮಾತ್ರ (ಅಂಚೆ ವೆಚ್ಚ ಸೇರಿ)

ಫೋನ್ ಪೇ,ಗೂಗಲ್ ಪೇ ಅಥವಾ ಕ್ಯೂ ಆರ್ ಕೋಡ್ ಮೂಲಕ ಹಣ ಪಾವತಿಸಿ ನಿಮ್ಮ ಸಂಪೂರ್ಣ ವಿಳಾಸವನ್ನು ವಾಟ್ಸ್ ಆಪ್ ಮಾಡಿ.

KARUNADA KANDA

-ಬಸವರಾಜ ಬಳಿಗಾರ, ಸಂಪಾದಕರು
9742776385



ಮಾನ್ಯ ಶ್ರೀ ಹನುಮನಗೌಡ ಪೋಲಿಸ್ ಪಾಟೀಲ್, ಬಳ್ಳಾರಿ ಜಿಲ್ಲಾ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಧಿಕಾರಿಗಳು ಇವರೊಂದಿಗೆ ಕರುನಾಡ ಕಂದ ಪತ್ರಿಕೆ.

ಕರುನಾಡ ಕಂದ
ಸಂಪುಟ 04 । ಸಂಚಿಕೆ 14
ದಿನಾಂಕ: 16-05-2025 ಪುಟಗಳು:16

# ಕಾರ್ಮಿಕ ದಿನಾಚರಣೆ ಅಂಗವಾಗಿ ಪೌರ ಕಾರ್ಮಿಕರಿಗೆ ಸನ್ಮಾನ



**ಚಾಮರಾಜನಗರ/ ಗುಂಡ್ಲುಪೇಟೆ :** ಕರ್ನಾಟಕ ಕಾವಲು ಪಡೆಯ ವತಿಯಿಂದ ಸಿಹಿ ವಿತರಿಸುವ ಮೂಲಕ ಕಾರ್ಮಿಕ ದಿನಾಚರಣೆ ಆಚರಿಸಲಾಯಿತು. ಇದೇ ಸಮಯದಲ್ಲಿ ಗುಂಡ್ಲುಪೇಟೆ ಪಟ್ಟಣದ ಪುರಸಭೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿರಿಯ ಪೌರ ಕಾರ್ಮಿಕರಾದ ಮುತ್ತಮ್ಮ ರವರಿಗೆ ಸನ್ಮಾನಿಸಿ ಗೌರವಿಸಲಾಯಿತು.


ಈ ಸಂದರ್ಭದಲ್ಲಿ ತಾಲ್ಲೂಕು ಅಧ್ಯಕ್ಷರಾದ ಎ. ಅಬ್ದುಲ್ ಮಾಲಿಕ್ ಮಾತನಾಡಿ ಪೌರ ಕಾರ್ಮಿಕರ ದಿನಾಚರಣೆಯೆಂದು ಇಂತಹ ಹಿರಿಯ ಪೌರ ಕಾರ್ಮಿಕರಿಗೆ ಗೌರವಿಸುತ್ತಿರುವುದು ಸಂತಸದ ಸಂಗತಿ, ಇಂತಹ ಹಿರಿಯರನ್ನು ಪ್ರತಿಯೊಬ್ಬರೂ ಗುರುತಿಸಿ ಗೌರವಿಸಬೇಕೆಂದು ತಿಳಿಸಿದರು. ಇದೇ ವೇಳೆ ಕನ್ನಡಪರ, ಹಿರಿಯ ಹೋರಾಟಗಾರರಾದ ಬ್ರಹ್ಮಾನಂದ್ ಮಾತನಾಡಿ ಕಾವಲು ಪಡೆಯ ಕಾರ್ಯವೈಖರಿಯನ್ನು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದ ನಿರೂಪಣೆಯನ್ನು ಕಾರ್ಯದರ್ಶಿ ಎಸ್. ಮುಬಾರಕ್ ನೆರವೇರಿಸಿದರು. ಜಿಲ್ಲಾ ಕಾರ್ಯಾಧ್ಯಕ್ಷರಾದ ಅಬ್ದುಲ್ ರಷೀದ್, ತಾಲ್ಲೂಕು ಗೌರವಾಧ್ಯಕ್ಷರಾದ ರಾಮೇಗೌಡ, ತಾಲ್ಲೂಕು ಸಂಚಾಲಕರಾದ ಮಾಸ್ಟರ್ ಮಲ್ಲಯ್ಯ, ತಾಲ್ಲೂಕು ಘಟಕದ ಬೆಂಡರವಾಡಿ ಚಿನ್ನಸ್ವಾಮಿ, ಟೌನ್ ಉಪಾಧ್ಯಕ್ಷರಾದ ಸಾಧಿಕ್ ಪಾಷಾ, ಟೌನ್ ಗೌರವಾಧ್ಯಕ್ಷರಾದ ಶಕೀಲ್, ಟೌನ್ ಯುವ ಘಟಕದ ಅಧ್ಯಕ್ಷರಾದ ಅಬ್ದುಲ್ ಜಬ್ಬಾರ್, ಟೌನ್ ಸಂಚಾಲಕರಾದ ಮಿಮಿಕ್ರಿರಾಜು, ಪವನ್ ಡ್ಯಾನ್ಸರ್, ರಾಜೇಶ್, ಜೀವಿಕ ಶಿವು, ಅಬ್ದುಲ್ ರಾಜಿಕ್, ಮೂರ್ತಿ ಸೇರಿದಂತೆ ಪುರಸಭೆಯ ಸಿಬ್ಬಂದಿ ವರ್ಗದವರು ಹಾಗೂ ಪೌರ ಕಾರ್ಮಿಕರು ಹಾಜರಿದ್ದರು.

**ವರದಿ ಗುಂಡ್ಲುಪೇಟೆ ಕುಮಾರ್**

# ಬೆಂಗಳೂರಿನ ವಿಧಾನಸೌಧಕ್ಕೆ ಹೊಸ ಮೆರುಗು

**ಬೆಂಗಳೂರು :** ವಿಶ್ವ ವಿಖ್ಯಾತ ವಿಧಾನಸೌಧಕ್ಕೆ ಶ್ರೀ ಯು ಟಿ ಖಾದರ್ ಅವರು ಅಧ್ಯಕ್ಷರಾದ ಮೇಲೆ ದಿನಕ್ಕೊಂದು ಆಕರ್ಷಣೆಯ ವೈಭವ ಕಾಣಿಸಿಕೊಳ್ಳುತ್ತಿದ್ದು ಕವಿಗಳಿಗೆ, ಓದುಗರಿಗೆ ಮತ್ತು ಲೇಖಕರಿಗೆ ಅಪ್ಯಾಯಮಾನವಾದ ಪುಸ್ತಕ ಪ್ರದರ್ಶನ ಮತ್ತು ಪ್ರವಾಸಿಗರಿಗೆ ವಿಧಾನಸೌಧಕ್ಕೆ ವಿವಿಧ ಬಣ್ಣಗಳ ದೀಪಾಲಂಕಾರಗಳನ್ನು ಪ್ರತಿ ಶನಿವಾರ ಮತ್ತು ಭಾನುವಾರಗಳಂದು ಜಗ ಜಗಿಸುವಂತಹ ವ್ಯವಸ್ಥೆ ಮಾಡಿಸಿರುವುದಲ್ಲದೆ ವಿಧಾನಸೌಧಕ್ಕೆ ಆನ್ ಲೈನ್ ಮೂಲಕ ಪ್ರವೇಶಕ್ಕೆ ಬುಕಿಂಗ್ ಸೌಲಭ್ಯಗಳನ್ನು ಏರ್ಪಡಿಸುವ ಮೂಲಕ ಜನ ಮಾನಸದಲ್ಲಿ ಅಚ್ಚ ಹಸಿರಾಗಿ ಬೆಳಗಿದ್ದಾರೆ.



ವಿಧಾನಸೌಧ ಎದುರು ಇಂದು ಯಾರು ಬೇಕಾದರೂ ಸಂಭ್ರಮಿಸಬಹುದಾದ ಕ್ಷಣಗಳನ್ನು ಸೃಷ್ಟಿಸಿದ ಆ ಅಗೋಚರ ಬ್ರಹ್ಮರಿಗೆ ಒಂದು ಸೆಲ್ಯೂಟ್

# ಶ್ರೀ ವೀರಭದ್ರೇಶ್ವರ ಜಾತ್ರೆ ನಿಮಿತ್ತವಾಗಿ ಚಪಾತಿ, ಸೀಕರಣೆ ಪ್ರಸಾದ

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಬೆಳವಡಿ ಗ್ರಾಮದ ಶ್ರೀ ವೀರಭದ್ರೇಶ್ವರ ಜಾತ್ರೆ ನಿಮಿತ್ತವಾಗಿ ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ಶ್ರೀ ಸುನೀಲ ಮಂಜುನಾಥ ವರ್ಣೇಕರ ಹಾಗೂ ಬ್ರದರ್ಸ್ ವಿದ್ಯಾವತಿ ಗಣೇಶ್ ವರ್ಣೇಕರ್ ಜ್ಯೂವೆಲರ್ಸ ವತಿಯಿಂದ ಬಾಳೆಹಣ್ಣು ಹಾಗೂ ಮಾವಿನ ಹಣ್ಣಿನ ಸೀಕರಣೆ ಜೊತೆಗೆ ಚಪಾತಿಯ ಸವಿರುಚಿಯ ಒಂದು ದಿನದ ಪ್ರಸಾದ ಸೇವೆ ಅದ್ದೂರಿಯಾಗಿ ನೆರವೇರಿತು. ಇದೇ ಸಂದರ್ಭದಲ್ಲಿ ನಯಾನಗರ ಗ್ರಾಮದ ಶ್ರೀ ಅಭಿನವ ಸಿದ್ದಲಿಂಗ ಮಹಾಸ್ವಾಮಿಗಳು





ಹಾಗೂ ಬೆಳವಡಿ ಗ್ರಾಮದ ಗುರುಹಿರಿಯರು ಶ್ರೀ ಸುನೀಲ್ ವರ್ಣೇಕರ ಅವರನ್ನು ಸನ್ಮಾನಿಸಿ ಆಶೀರ್ವದಿಸಿದರು.


**ವರದಿ ಮಂಜು .ಎಮ್.ಚಿಕ್ಕಣ್ಣವರ**

# ಜೆ.ಜೆ.ಎಂ. ಕಳಪೆ ಕಾಮಗಾರಿ

## ಅಪೂರ್ಣಗೊಳ್ಳದ ಕಾಮಗಾರಿ ಗ್ರಾ.ಪಂ.ಗೆ ಹಸ್ತಾಂತರ

## ತನಿಖೆ ನಡೆಸಿ ಭ್ರಷ್ಟ ಪಿ.ಡಿ.ಓ ಅಮಾನತು ಮಾಡುವಂತೆ ಶರಣಬಸಪ್ಪ ಎಲ್ಹೇರಿ ಆಗ್ರಹ






**ಯಾದಗಿರಿ/ ಗುರುಮಠಕಲ್:** ತಾಲ್ಲೂಕಿನ ಯಲ್ಹೇರಿ ಗ್ರಾಮದಲ್ಲಿ ಜೆ.ಜೆ.ಎಂ. ಯೋಜನೆಯಡಿ ನಡೆದಿರುವ ಕಾಮಗಾರಿ ಸಂಪೂರ್ಣ ಕಳಪೆ ಪ್ರಮಾಣದಲ್ಲಿದ್ದು, ಕಾಮಗಾರಿ ಪೂರ್ಣಗೊಳ್ಳದೇ ಪಿಡಿಓ ರವರು ಈ ಕಾಮಗಾರಿಯನ್ನು ಗ್ರಾ.ಪಂ. ಗೆ ಹಸ್ತಾಂತರ ಮಾಡಿಕೊಂಡಿದ್ದು, ತನಿಖೆ ನಡೆಸಿ, ಕ್ರಮ ಕೈಗೊಳ್ಳಬೇಕು ಎಂದು ಶರಣಬಸಪ್ಪ ಎಲ್ಹೇರಿ ಕ.ರ.ವೇ ತಾಲೂಕು ಘಟಕದ ಅಧ್ಯಕ್ಷರು ತಾ.ಪಂ. ಕಾರ್ಯ ನಿರ್ವಹಣಾ ಅಧಿಕಾರಿಗಳಾದ ಅಂಬರೀಷ ಪಾಟೀಲರವರಿಗೆ ದೂರು ಸಲ್ಲಿಸಿದ್ದಾರೆ.

ಗುರುಮಠಕಲ್ ತಾಲ್ಲೂಕಿನ ಯಲ್ಹೇರಿ ಗ್ರಾಮದಲ್ಲಿ ಜೆ.ಜೆ.ಎಂ. ಯೋಜನೆಯಡಿ ನಡೆದಿರುವ ಕಾಮಗಾರಿ ಅಂದಾಜು ಪತ್ರಿಕೆ ಪ್ರಕಾರ ಮಾಡದೇ, ಬೇಕಾಬಿಟ್ಟಿ ಕಾಮಗಾರಿ ಮಾಡಿದ್ದು, ಯಲ್ಹೇರಿ ಗ್ರಾಮದ 1162 ಮನೆಗಳಿಗೆ ನಳಗಳ ಸಂಪರ್ಕ ಕಲ್ಪಿಸುವ ಕಾಮಗಾರಿ ಅಂದಾಜು ಮೊತ್ತ 174.30 ಲಕ್ಷ, ಕರಾರು ಮೊತ್ತ ರೂ. 170.22 ಲಕ್ಷ ಇದ್ದು, ಕಾಮಗಾರಿ ಪ್ರಾರಂಭವಾಗಿ ಸುಮಾರು 4 ವರ್ಷಗಳ ಕಾಲ ಕಳೆದರೂ, ಪ್ರಗತಿಯಲ್ಲಿದೆ ಎಂದು ತೋರಿಕೆಗೆ ತೋರಿಸಿ, ಕಾಮಗಾರಿ ಪ್ರಗತಿ ಹಂತದಲ್ಲಿರುವಾಗಲೇ ತರಾತುರಿಯಲ್ಲಿ ಗ್ರಾ. ಪಂ ಸದಸ್ಯರ ಸಭೆ ಕರೆಯದೆ ಅವರ ಗಮನಕ್ಕೂ ತರದೆ ಹಸ್ತಾಂತರ ಮಾಡಿಕೊಂಡಿರುತ್ತಾರೆ.

ಯಲ್ಹೇರಿ ಗ್ರಾ. ಪಂ ಅಧಿಕಾರಿಗಳಾದ ಶೋಭಾ ಪಾಟೀಲ್ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ ಹಾಗಾಗಿ ಹಸ್ತಾಂತರ ಮಾಡಿಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದಾರೆ. ಪ್ರಸ್ತುತ ಕಾಮಗಾರಿ ಕಳಪೆ ಹಂತದಲ್ಲಿದ್ದು,ತನಿಖಾ ತಂಡದವರು ಕೂಡಾ ಸುಳ್ಳು ವರದಿ ನೀಡಿದ್ದಾರೆ. ಕಾಮಗಾರಿಯ ತನಿಖೆ ನಡೆಸಿ ಮತ್ತು ಪಿಡಿಓ ರವರು ಗುತ್ತಿಗೆದಾರರ ಜೊತೆ ಸೇರಿ ಹಣವನ್ನು ಲೂಟಿ ಮಾಡಿರುತ್ತಾರೆಂದು ಅನುಮಾನವಿದೆ. ಸಂಪೂರ್ಣ ತನಿಖೆ ಮಾಡಿ, ತನಿಖಾ ತಂಡವನ್ನು ರೂಪಿಸಿ 1162 ಮನೆಗಳ ನಳಗಳ ವೀಕ್ಷಣೆ ಮಾಡಿ ಭ್ರಷ್ಟ ಪಿ. ಡಿ. ಓ ಮತ್ತು ಗುತ್ತೆಗೆದಾರರ ವಿರುದ್ಧ ಕ್ರಮ ತೆಗೆದುಕೊಳ್ಳಲು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಕ .ರ. ವೇ ತಾಲೂಕು ಪದಾಧಿಕಾರಿಗಳಾದ ಕಾಶಿನಾಥ್ ಚಂಡರಿಕಿ, ಚೆನ್ನಪ್ಪ ಕಾಕಲವರ್, ಸಾಯಬಣ್ಣ ಸಿದ್ದಾಪೂರ, ಭೀಮು ಬೂದೂರ್, ನರಸಿಂಹ ಸೇರಿದಂತೆ ಇನ್ನೂ ಹಲವಾರು ಕಾರ್ಯಕರ್ತರು ಉಪಸ್ಥಿತರಿದ್ದರು.

**ವರದಿ: ಜಗದೀಶ್ ಕುಮಾರ್ ಭೂಮಾ**

# ಕಾಲು ಬಾಯಿರೋಗ ಮುಕ್ತಗೊಳಿಸುವ ಅಭಿಯಾನದ ಸದುಪಯೋಗಪಡಿಸಿಕೊಳ್ಳಿ : ಡಾ. ಶ್ರೀಕಾಂತ ಮಹಾಲಿಂಗಯ್ಯಗಾಂವಿ

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನಲ್ಲಿರುವ ತಾಲೂಕ ಪಶುಪಾಲನಾ ಮತ್ತು ಪಶು ವೈದ್ಯಕೀಯ ಇಲಾಖೆಯಿಂದ ತಾಲೂಕ ಮುಖ್ಯ ಪಶು ವೈದ್ಯಾಧಿಕಾರಿಗಳಾದ ಡಾ. ಶ್ರೀಕಾಂತ ಮಹಾಲಿಂಗಯ್ಯಗಾಂವಿ ಏಳನೇ ಸುತ್ತಿನ ಕಾಲು ಬಾಯಿರೋಗ ಮುಕ್ತಗೊಳಿಸುವ ಅಭಿಯಾನದ ಪ್ರಾರಂಭವಾಗಿದೆ ತಪ್ಪದೇ ನಿಮ್ಮ ಜಾನುವಾರುಗಳಿಗೆ ಸಮೀಪವಿರುವ ಪಶು



ವೈದ್ಯಕೀಯ ಕೇಂದ್ರದಿಂದ ಕಾಲುಬಾಯಿ ರೋಗ ಬರದಂತೆ ಲಸಿಕೆಯನ್ನು ತಮ್ಮ ತಮ್ಮ ಜಾನುವಾರುಗಳಿಗೆ ಹಾಕಿಸಲಾಗುತ್ತಿದ್ದು ಇನ್ನುಳಿದ ಪ್ರದೇಶಗಳ ಜನರು ಇತರ ಸದುಪಯೋಗ ಪಡೆದುಕೊಳ್ಳಬೇಕೆಂದು ಹೇಳಿದರು.

**ವರದಿ ಮಂಜು .ಎಮ್.ಚಿಕ್ಕಣ್ಣವರ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 14
ದಿನಾಂಕ: 16–05–2025 ಪುಟಗಳು:16

# ಬಿ–ಖಾತೆ ಹೆಸರಿನಲ್ಲಿ ಅಧಿಕಾರಿಗಳ ಭರ್ಜರಿ ಲಂಚಾವತಾರ

**ರಾಜ್ಯದಲ್ಲಿನ 40 ರಿಂದ 45 ಲಕ್ಷ ಅನಧಿಕೃತ ಆಸ್ತಿಗಳಿಗೆ ದುಪ್ಪಟ್ಟು ತೆರಿಗೆ ಪಾವತಿಸಿಕೊಂಡು ಒಂದು ಬಾರಿ ಬಿ ಖಾತೆ ನೀಡುವ ಮಹತ್ವದ ಯೋಜನೆ ಸರಕಾರದ ಬೊಕ್ಕಸಕ್ಕಿಂತ ಅಧಿಕಾರಿಗಳು/ಸಿಬ್ಬಂದಿಗಳು ಜೇಬು ಹೆಚ್ಚು ತುಂಬಿಕೊಳ್ಳುತ್ತಿದ್ದಾರೆ.**

ಕರ್ನಾಟಕ ಸರಕಾರ ಬಿ ಖಾತೆಗೆ ಮೂರು ತಿಂಗಳು (ಫೆಬ್ರವರಿ 10 ರಿಂದ ಮೇ 10) ರ ವರೆಗೆ ಗಡುವು ನೀಡಿತ್ತು, ಈಗ ಗಡುವು ಮುಕ್ತಾಯಗೊಳ್ಳುವ ಹೊತ್ತಿನಲ್ಲಿ ಅನಧಿಕೃತ ಬಡಾವಣೆಗಳಲ್ಲಿ ನಿವೇಶನ ಕರೆಯಿಸಿ ಮನೆ ಕಟ್ಟಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದು ಅಧಿಕಾರಿಗಳು ರಕ್ತ ಪಿಶಾಚಿಗಳಾಗಿ ಬಡ, ಮಾಧ್ಯಮ, ಮುಗ್ಧ ಜನರ ಹತ್ತಿರ ಬಿ ಖಾತೆ ಮಾಡಿಕೊಡಲು ನಾನಾ ಕಾರಣ ಕೊಟ್ಟು ಜನರನ್ನು ಗೊಂದಲಕ್ಕೆ ಗುರಿ ಮಾಡಿ ಹೆಚ್ಚು ಹಣ ವಸೂಲಿ ಮಾಡುತ್ತಿದ್ದಾರೆ.

ಸರಕಾರದ ಸೂಚನೆಯಂತೆ 1992 ರ ನಂತರ ಭೂ ಪರಿವರ್ತನೆಯಾಗಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದಿರುವ ಆಸ್ತಿಗಳು, ರಿಜಿಸ್ಟರ್ ಆಗಿರುವ ರೆವಿನ್ಯೂ ನಿವೇಶನಗಳು, ಸಕ್ಷಮ ಪ್ರಾಧಿಕಾರಗಳಿಂದ ಲೇಸೆನ್ಸ್ ಪಡೆಯದೆ ನಿರ್ಮಿಸಿಕೊಂಡಿರುವ ಆಸ್ತಿಗಳು, 2024 ರ ಸೆಪ್ಟೆಂಬರ್ 25 ರ ಹಿಂದಿನ ನೋಂದಣಿಯಾಗಿರುವ ಆಸ್ತಿಗಳು ಬಿ ಖಾತೆ ಪಡೆಯಲು ಅರ್ಹವಾಗಿವೆ, ಈಗಾಗಲೇ ಸಾಕಷ್ಟು ಅರ್ಜಿಗಳು ಸ್ವೀಕೃತಗೊಂಡಿವೆ.

**ಲಂಚ ಕೊಟ್ಟರೆ ಮಾತ್ರ ನೋಂದಣಿ ಇಲ್ಲವಾದರೆ ಆಚೆ ನಡಿ**

ರಾಜ್ಯ ಸರಕಾರದಿಂದ ನಗರ ಪ್ರದೇಶ ವ್ಯಾಪ್ತಿಯಲ್ಲಿ ಅನಧಿಕೃತ ಸ್ವಯಂ ಆಸ್ತಿಗಳಿಗೆ ಬಿ–ಖಾತಾ ಪಡೆಯಲು ಅವಕಾಶ ನೀಡಿದರೆ, ನಗರ ವ್ಯಾಪ್ತಿಯಲ್ಲಿ ನೋಂದಣಿಗೆ ತೆರಿಗೆ ಪಾವತಿಯೊಂದಿಗೆ ಪ್ರತ್ಯೇಕವಾಗಿ ಹಣ ನೀಡಿದರೆ ಮಾತ್ರ ಸುಲಭವಾಗಿ ನೋಂದಣಿ ಕಾರ್ಯ ಆಗಲಿದೆ ಎಂಬ



ಆರೋಪಗಳು ಸಾರ್ವಜನಿಕ ವಲಯದಿಂದ ಕೇಳಿ ಬರುತ್ತಿವೆ. ನೋಂದಣಿಗೆ ಬರುವ ಜನ ಹೆಚ್ಚುವರಿಯಾಗಿ ಹಣ ನೀಡುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಹಣ ನೀಡಿದರೆ ಮಾತ್ರ ಕಾರ್ಯ ಸುಲಭ ಎಂಬ ಅನಿವಾರ್ಯತೆ ಎದುರಾಗಿದೆ ಎನ್ನುತ್ತಾರೆ ಜನ.

**ಗಮನಿಸಬೇಕಾದ ವಿಷಯಗಳು**

ನಿರ್ದಿಷ್ಟ ಆಸ್ತಿಯ ಅಥವಾ ಕಟ್ಟಡದ ಕನ್ವರ್ಷನ್ ಪ್ರಕ್ರಿಯೆಯಲ್ಲಿ, ನಿರ್ಮಾಣದಲ್ಲಿ ಅಥವಾ ಇತರ ಯಾವುದೇ ಪ್ರಕ್ರಿಯೆಯಲ್ಲಿ ನಿಯಮಗಳ ಉಲ್ಲಂಘನೆಯಾಗಿದ್ದರೆ ಬಿ ಖಾತಾ ನೀಡಲಾಗುತ್ತದೆ. ಸರಳವಾಗಿ ಹೇಳುವುದಾದರೆ, ನಾಗರಿಕ ಶುಲ್ಕಗಳು ಮತ್ತು ತೆರಿಗೆಗಳ ಪಾವತಿಯ ಹೊರತಾಗಿಯೂ ಸಂಪೂರ್ಣವಾಗಿ ಕಾನೂನು ಬದ್ಧವಲ್ಲದ ಆಸ್ತಿಯೇ ಬಿ ಖಾತಾ.

2014 ರ ಡಿಸೆಂಬರ್‌ನಲ್ಲಿ ಕರ್ನಾಟಕ ಹೈಕೋರ್ಟ್ ನೀಡಿದ ತೀರ್ಪಿನ ಪ್ರಕಾರ, ಬಿ ಖಾತಾ ಆಸ್ತಿಗಳಿಗೆ ಸಂಪೂರ್ಣವಾದ ಕಾನೂನು ಮಾನ್ಯತೆ ಇಲ್ಲ. ಹಾಗೆಂದು ಅವುಗಳಿಗೂ ತೆರಿಗೆಗಳು ಅಥವಾ ನಾಗರಿಕ ಶುಲ್ಕಗಳ ಪಾವತಿ ಮಾಡಬೇಕಾಗುತ್ತದೆ. ಹೀಗೆ ಪಾವತಿಸುವುದರಿಂದ ಬಿ ಖಾತಾ ಆಸ್ತಿಯನ್ನು ಕಾನೂನುಬದ್ಧಗೊಳಿಸಿದಂತೆ ಆಗುವುದಿಲ್ಲ ಎಂಬುದನ್ನು ಗಮನಿಸಬೇಕಿದೆ.

ಕರ್ನಾಟಕ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ, ಕಳೆದ ಎರಡು ವರ್ಷಗಳಲ್ಲಿ ವಿದ್ಯುತ್, ವಾಹನ ನೋಂದಣಿ ಶುಲ್ಕದಲ್ಲಿ ಹೆಚ್ಚಳ, ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮಾರಾಟ ತೆರಿಗೆ, ಹಾಗೆಯೇ ಮೆಟ್ರೋ ದರಗಳಲ್ಲಿ ಇತ್ತೀಚಿನ ಹೆಚ್ಚಳ, ಬಸ್ ದರಗಳು, ಕಸ ಸಂಗ್ರಹ ಶುಲ್ಕಗಳು ಮತ್ತು ವಿದ್ಯುತ್ ಸುಂಕಗಳು ಸೇರಿದಂತೆ ಹಲವಾರು ದರ ಮತ್ತು ತೆರಿಗೆ ಹೆಚ್ಚಳ ಮಾಡಿದ್ದು ಇನ್ನೂ ಯಾವ ತೆರಿಗೆ ಹೆಚ್ಚಾಗುತ್ತದೆ ಅನ್ನೋ ಭಯದಲ್ಲಿರುವ ಸಮಯದಲ್ಲಿ ಕರ್ನಾಟಕದಾದ್ಯಂತ ಬಿ ಖಾತೆ ಹೆಸರಿನಲ್ಲಿ ಸರಕಾರಕ್ಕೆ ದುಪ್ಪಟ್ಟು ತೆರಿಗೆ ಕಟ್ಟಿಸಿಕೊಂಡು ಹಾಗೆಯೇ ತಮ್ಮ ಜೇಬು ತುಂಬಿಕೊಳ್ಳುತ್ತಿರುವ ಅಧಿಕಾರಿಗಳು ಅವರಿಗೆ ಸಾಥ್ ನೀಡುತ್ತಿರುವ ಚುನಾಯಿತ ಸದಸ್ಯರು, ಮಧ್ಯವರ್ತಿಗಳು ಜನರ ಸಮಸ್ಯೆಗಳಿಗೆ ಇನ್ನಷ್ಟು ಹೊರೆ ಆಗಿದ್ದಂತೂ ನಿಜ.

ಸಾರ್ವಜನಿಕರ ವಲಯದಲ್ಲಿ ಒಂದು ಖಾತಾ ಮಾಡಿಸಲು ಈಗಾಗಲೇ ಸರಕಾರಕ್ಕೆ ತೆರಿಗೆ ರೂಪದಲ್ಲಿ ಹಣ ಪಾವತಿ ಮಾಡಿದ ಮೇಲೂ ಅಧಿಕಾರಿಗಳಿಗೆ ಹೆಚ್ಚು ಕಡಿಮೆ 30,000 ರೂ. ಹಣ ನೀಡಲಾಗುತ್ತಿದೆ ಎಂದು ಅಲ್ಲಲ್ಲಿ ಮಾತು ಜೋರಾಗಿ ಕೇಳಿ ಬರುತ್ತಿದೆ.

ಇದಕ್ಕೆ ಕಡಿವಾಣ ಹಾಕುವುದು ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವುದು ಒಂದೇ ಅನ್ನುವ ಹಾಗಾಗಿದೆ, ಡಿ ಗ್ರೂಪ್ ನೌಕರರಿಂದ ಹಿಡಿದು, ಸ್ಥಳೀಯ ಸದಸ್ಯರು, ಅಧಿಕಾರಿಗಳು ಎಲ್ಲರೂ ಲಂಚಕ್ಕೆ ಮಾರು ಹೋಗಿರುವಾಗ ಸಾಮಾನ್ಯರು ಈ ಕುರಿತಾಗಿ ಎಲ್ಲೂ ಹೇಳದ ಪರಿಸ್ಥಿತಿ ಎದುರಾಗಿದೆ.

**– ಜಗದೀಶ್ ಕುಮಾರ್ ಭೂಮಾ**

# ಗೀತಾ ಗಾಯನ ಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನ ಪಡೆದ ಕಂಪ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು

**ಬಳ್ಳಾರಿ / ಕಂಪ್ಲಿ :** ಬಳ್ಳಾರಿಯಲ್ಲಿ ಇತ್ತೀಚೆಗೆ ನಡೆದ ಗೀತಾ ಗಾಯನ ಸ್ಪರ್ಧೆಗಳಲ್ಲಿ ಕಂಪ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಪ್ರಥಮ ಸ್ಥಾನದೊಂದಿಗೆ ಪ್ರಶಸ್ತಿ ತಮ್ಮದಾಗಿಸಿಕೊಂಡು, ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಬಳ್ಳಾರಿ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಮ್ಯಾನೇಜ್ಮೆಂಟ್ (ಬಿಐಟಿಎಂ) ವತಿಯಿಂದ “ಅಭಿವೃದ್ಧಿ 2025” ಶೀರ್ಷಿಕೆಯ ಅಡಿಯಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳಿಗೆ ಹಲವಾರು ಸ್ಪರ್ಧೆಗಳನ್ನು ಇತ್ತೀಚೆಗೆ ಏರ್ಪಡಿಸಲಾಗಿತ್ತು. ಈ ಎಲ್ಲಾ ಸ್ಪರ್ಧೆಗಳಲ್ಲಿ 32



ಮಹಾವಿದ್ಯಾಲಯಗಳಿಂದ 500 ಕ್ಕಿಂತಲೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ಕಂಪ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು 3 ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದು, ಸಾಂಸ್ಕೃತಿಕ ಕಾರ್ಯಕ್ರಮದ “ಗೀತಾ ಗಾಯನ” ಸ್ಪರ್ಧೆಯಲ್ಲಿ ದೀಪಿಕಾ, ಭೂಮಿಕಾ, ಮಾನಸ ಮತ್ತು ಅನಿತಾ ಇವರು ಭಾಗವಹಿಸಿ, ಪ್ರಥಮ ಬಹುಮಾನ ಪಡೆದು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. ವಿಜೇತ ವಿದ್ಯಾರ್ಥಿಗಳಿಗೆ ಮಹಾವಿದ್ಯಾಲಯದ ಪ್ರಾಂಶುಪಾಲರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿದ್ದಾರೆ.

**ವರದಿ : ಜಿಲಾನಸಾಬ್ ಬಡಿಗೇರ್**



**ಬೆಳಗಾವಿ ಜಿಲ್ಲೆಯ ಯರಗಟ್ಟಿ ತಾಲೂಕ ಕಂದಾಯ ನಿರೀಕ್ಷಕರು ಶ್ರೀ ವೈ ಎಫ್ ಮೂರ್ತೆನ್ನವರ ಅವರೊಂದಿಗೆ ಕರುನಾಡ ಕಂದ.**



**ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ನೂತನ ಪೊಲೀಸ್ ಉಪ ಅಧೀಕ್ಷಕರು ಶ್ರೀ ಡಾ. ವೀರಯ್ಯ ಹಿರೇಮಠ ಕೆ. ಎಸ್. ಪಿ. ಎಸ್. ಅವರೊಂದಿಗೆ ಕರುನಾಡ ಕಂದ.**



**ಬೈಲಹೊಂಗಲ ಅಬಕಾರಿ ನಿರೀಕ್ಷಕರಾದ ಶ್ರೀ ಶ್ರೀಶೈಲ್ ಅಕ್ಕಿ ಅವರೊಂದಿಗೆ ಕರುನಾಡ ಕಂದ ಪತ್ರಿಕೆ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 14
ದಿನಾಂಕ: 16-05-2025 ಪುಟಗಳು:16

# ಪಿಂಜಾರ್ ಅಭಿವೃದ್ಧಿ ನಿಗಮಕ್ಕೆ ಅನುದಾನ ಬಿಡುಗಡೆಯ ಭರವಸೆ ನೀಡಿದ ಶಾಸಕ ಜೆ.ಎನ್.ಗಣೇಶ

**ಬಳ್ಳಾರಿ / ಕಂಪ್ಲಿ :** ಪಿಂಜಾರ್ ನದಾಫ್ ಸಮುದಾಯವು ಬಹಳಷ್ಟು ಹಿಂದುಳಿದ್ದು, ಅಭಿವೃದ್ಧಿಗಾಗಿ ಸಿ.ಎಂ ಗಮನಕ್ಕೆ ತಂದು, ಪಿಂಜಾರ್ ನದಾಫ್ ಅಭಿವೃದ್ಧಿ ನಿಗಮಕ್ಕೆ ಅನುದಾನ ಬಿಡುಗಡೆ ಮಾಡಿಸಲಾಗುವುದು ಎಂದು ಶಾಸಕ ಜೆ.ಎನ್. ಗಣೇಶ ಭರವಸೆ ನೀಡಿದರು.

ಕರ್ನಾಟಕ ರಾಜ್ಯ ಪಿಂಜಾರ್ ನದಾಫ್ ಸಂಘದ ಕಂಪ್ಲಿ ತಾಲೂಕು ಘಟಕದಿಂದ ಅಂಜುಮನ್ ಖಿದ್ಮತೆ ಎ ಇಸ್ಲಾಂ ಸಮಿತಿ ಹಾಗೂ ಜೆಸಿಐ ಕಂಪ್ಲಿ ಸೋನಾ ವತಿಯಿಂದ ಹೊಸಪೇಟೆ ಬೈಪಾಸ್ ರಸ್ತೆಯ ಹಿಂದೂಸ್ತಾನ ಗಾರ್ಡನ್ ಪೈಲ್ವಾನ್ ರಂಜಾನ್ ಸಾಬ್ ವೇದಿಕೆಯಲ್ಲಿ ಆಯೋಜಿಸಿದ್ದ ಉಚಿತ ಮುಸ್ಲಿಂ ಸಾಮೂಹಿಕ ವಿವಾಹದಲ್ಲಿ ಸಹಯೋಗದಲ್ಲಿ ಇತ್ತೀಚಿಗೆ ಪಟ್ಟಣದ ಹೊಸಪೇಟೆ ಬೈಪಾಸ್ ರಸ್ತೆಯ ಪೈಲ್ವಾನ್ ರಂಜಾನ್ ಸಾಬ್ ವೇದಿಕೆಯಲ್ಲಿ ಆಯೋಜಿಸಿದ್ದ ಉಚಿತ ಮುಸ್ಲಿಂ ಸಾಮೂಹಿಕ ವಿವಾಹದಲ್ಲಿ ಮುಸ್ಲಿಂ ಧರ್ಮಗುರು ಸೈಯದ್ ಷಾ ಅಬುಲ್ ಹಸನ್ ಸಜ್ಜಾದೆ ನಸೀನ್ ಖಾದ್ರಿ ಅವರ ದಿವ್ಯ ಸಾನಿಧ್ಯದಲ್ಲಿ ನವ ವಸಂತಕ್ಕೆ ಕಾಲಿಟ್ಟ ಐದು ಜೋಡಿಗಳಿಗೆ ಆಶೀರ್ವದಿಸಿ ಮತ್ತು ವೇದಿಕೆ ಸಮಾರಂಭ ಉದ್ಘಾಟಿಸಿ ಮಾತನಾಡಿ, ಕಂಪ್ಲಿ, ಕುರುಗೋಡು, ಎಮ್ಮಿಗನೂರು ಸೇರಿದಂತೆ ನಾನಾ ಕಡೆಗಳಲ್ಲಿ ಶಾದಿ ಮಹಾಲ್ ನಿರ್ಮಾಣ-ಕ್ಕೆ ಅತೀ ಶೀಘ್ರದಲ್ಲಿ ಶಂಕುಸ್ಥಾಪನೆ ನೆರವೇರಿಸಲಾಗುವುದು, ಪಿಂಜಾರ್ ನದಾಫ್ ಸಮುದಾಯ ಹಿಂದುಳಿದಿದ್ದು, ಅಭಿವೃದ್ಧಿಗೆ ಎಲ್ಲಾ ರೀತಿಯಲ್ಲಿ ಸಹಕರಿಸಲಾಗುವುದು. ಸಿ.



ಎಂ. ಗಮನಕ್ಕೆ ತಂದು ಅಭಿವೃದ್ಧಿ ನಿಗಮಕ್ಕೆ ಹೆಚ್ಚಿನ ಅನುದಾನ ಮೀಸಲಿರಿಸಲಾಗುವುದು, ಸಮಾಜದ ಬದಲಾವಣೆಗೆ ಶಿಕ್ಷಣ ಅತಿ ಮುಖ್ಯವಾಗಿದೆ, ಒಳ್ಳೆಯ ಶಿಕ್ಷಣದೊಂದಿಗೆ ಸಮಾಜವನ್ನುಅಭಿವೃದ್ಧಿಯತ್ತ ಕೊಂಡೊಯ್ಯಬೇಕು ಹೊಸ ಜೀವನಕ್ಕೆ ಕಾಲಿಟ್ಟ ಜೋಡಿಗಳು, ಅತ್ತೆ, ಮಾವ, ತಂದೆ, ತಾಯಿಯನ್ನು ಚೆನ್ನಾಗಿ ನೋಡಿಕೊಂಡು, ಹೊಂದಾಣಿಕೆ ಮೂಲಕ ಸುಂದರ ಬದುಕು ನಡೆಸಿಕೊಂಡು ಹೋಗುವ ಜವಾಬ್ದಾರಿ ತಮ್ಮದಾಗಿದೆ. ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿ, ಭವಿಷ್ಯದ ಉತ್ತಮ ಪ್ರಜೆಯನ್ನಾಗಿ ರೂಪಿಸಬೇಕು ಎಂದರು.

ಪಿಂಜಾರ್ ನದಾಫ್ ಸಂಘದ ತಾಲೂಕು ಅಧ್ಯಕ್ಷ ಒ. ಎಸ್. ದಾದಾಸಾಬ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಇದೇ ಮೊದಲ ಬಾರಿಗೆ ಪ್ರತಿಯೊಬ್ಬರ ಸಹಕಾರದಿಂದ ಉಚಿತ ಮುಸ್ಲಿಂ ಸಾಮೂಹಿಕ ಮದುವೆ ಕಾರ್ಯಕ್ರಮ ಯಶಸ್ವಿ ಮಾಡಲಾಗಿದೆ. ಇದೇ ತೆರನಾಗಿ ಮುಂದಿನ ಸಮಾಜ ಸೇವಾ ಕಾರ್ಯ ಮತ್ತು ಸಮಾಜದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದರು.

ಈ ಸಂದರ್ಭದಲ್ಲಿ ಮುಸ್ಲಿಂ ಧರ್ಮಗುರುಗಳಾದ ಸೈಯದ್ ಷಾ ಖಾಜಾ ಮುಹಿನುದ್ದಿನ್ ಖಾದರಿ ಸೈಯದ್ ನೂರು ಖಾದರಿ ರೈಸ್ ಸಾಹೇಬ್, ನೂರ್ ಸಾಹೇಬ್, ಎಪಿಎಂಸಿ ಅಧ್ಯಕ್ಷ ಹಬೀಬ್ ರೆಹಮಾನ್, ಪುರಸಭೆ ಸದಸ್ಯರಾದ ಸಿ. ಆರ್. ಹನುಮಂತ, ಲೊಡ್ಡು ಹೊನ್ನೂರವಲಿ, ಪಿಂಜಾರ್ ನದಾಫ್ ಸಂಘದ ರಾಜ್ಯಾಧ್ಯಕ್ಷ ಹೆಚ್. ಜಲೀಲ್ ಸಾಬ್, ಉಪಾಧ್ಯಕ್ಷರಾದ ಹಾಜಿ ಜಿ. ಡಿ. ನದಾಫ್, ಮೌಲಾಸಾಬ್, ಪ್ರಧಾನ ಕಾರ್ಯದರ್ಶಿ ರಿಯಾಜ್ ಸಲೀಮ ನಾಗ್ಗೆ, ಅಂಜುಮನ್ ಖಿದ್ಮತೆ ಎ ಇಸ್ಲಾಂ ಸಮಿತಿ ಅಧ್ಯಕ್ಷ ಪೆಂಟರ್ ಮಸ್ತಾನ್, ಅಬ್ದುಲ್ ಕಲಾಂ ಟ್ರಸ್ಟ್ ಅಧ್ಯಕ್ಷ ಅಕ್ಕಿ ಜಿಲಾನ್, ಜೆಸಿಐ ಸೋನಾ ಅಧ್ಯಕ್ಷ ಬಿ. ರಸೂಲ್, ಪಿಂಜಾರ್ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಕೆ.ರಾಜಾವಲಿ, ಮುಖಂಡರಾದ ಬಿ. ನಾರಾಯಣಪ್ಪ, ಕೆ. ಷಣ್ಮುಖಪ್ಪ, ವಾಹೀದ್, ಮೆಹಮೂದ್ ಬಾವಿಕಟ್ಟೆ ಮೆಹಬೂಬ್ ಸೇ-ರಿದಂತೆ ಅನೇಕರಿದ್ದರು.

**ವರದಿ : ಜಿಲಾನಸಾಬ್ ಬಡಿಗೇರ್**

# ವಿವಿಧ ಅಭಿವೃದ್ಧಿ ಕಾಮಗಾರಿಗಳ ಭೂಮಿ ಪೂಜೆ

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಪುರಸಭೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ನಗರೋತ್ಥಾನ ಹಂತ - 4 ರ ಯೋಜನೆಯಡಿ ಸುರಕ್ಷಾ ಸಾಮಗ್ರಿಗಳನ್ನು ಎಲ್ಲಾ ಪೌರಕಾರ್ಮಿಕರಿಗೆ ಮತ್ತು ಎಸ್ ಎಫ್ ಸಿ ಯೋಜನೆಯಡಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ನಿಲಯಕ್ಕೆ ಅವಶ್ಯಕವಿರುವ ಸಾಮಗ್ರಿಗಳನ್ನು ಮತ್ತು ವಾಲ್ಮೀಕಿ ಸಮುದಾಯ ಭವನಕ್ಕೆ ಅವಶ್ಯವಿರುವ ಸಾಮಗ್ರಿಗಳನ್ನು ವಿತರಿಸಿ ಹಾಗೂ ಬೈಲಹೊಂಗಲ ಪುರಸಭೆ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂಬರ್ 22,3,6, ಹಾಗೂ 27 ರಲ್ಲಿ 60 ಲಕ್ಷಗಳ ವೆಚ್ಚದ ಪುರಸಭೆ ಸಾಮಾನ್ಯ ನಿಧಿಯಲ್ಲಿ ಅಭಿವೃದ್ಧಿ ಕಾಮಗಾರಿಗಳ ಭೂಮಿ ಪೂಜೆಯನ್ನು ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಬೈಲಹೊಂಗಲ ಮತ ಕ್ಷೇತ್ರದ ಶಾಸಕರಾದ ಶ್ರೀ ಮಹಾಂತೇಶ್ ಎಸ್ ಕೌಜಲಗಿ, ಪುರಸಭೆಯ ಅಧ್ಯಕ್ಷರಾದ ಶ್ರೀ ವಿಜಯ್ ಶ್ರೀಶೈಲ್ ಬೋಳಣ್ಣವರ,



ಉಪಾಧ್ಯಕ್ಷರಾದ ಬುಡೇಸಾಬ ಶಿರಸಂಗಿ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರಾದ ಶ್ರೀ ಬಸವರಾಜ (ರಾಜು) ಜನ್ಮಟ್ಟಿ, ಸ್ಥಾಯಿ ಸಮಿತಿಯ ಚೇರಮನ್ನರಾದ ಶ್ರೀಮತಿ ಹೇಮಲತಾ ಎಂ ಹಿರೇಮಠ, ಸದಸ್ಯರಾದ ಶ್ರೀಮತಿ ಲಕ್ಷ್ಮಿ ಎ ಬಡ್ಲಿ, ಶ್ರೀಮತಿ ಶ್ರೀದೇವಿ ಎಫ್ ದೇವಲಾಪುರ, ಶ್ರೀಮತಿ ದಿಲ್ ಶ್ಯಾದ ಎಮ ನದಾಫ್, ಶ್ರೀಮತಿ ಲತೀಪಾಬೇಗಂ ಕೆ ಮುಲ್ಲಾ,



ಪುರಸಭೆಯ ಮುಖ್ಯಾಧಿಕಾರಿಯಾದ ಶ್ರೀ ವಿರೇಶ್ ಸಿ ಹಸಬಿ, ಕಿರಿಯ ಅಭಿಯಂತರಕರಾದ ಶ್ರೀ ಗೌರಿಶಂಕರ ಮಹಾಳಂಕ, ಶ್ರೀ ಬಸನಗೌಡ ಪಾಟೀಲ, ಕಿರಿಯ ಆರೋಗ್ಯ ನಿರೀಕ್ಷರಾದ ಶೀ ಎಸ್ ಎನ್ ಪಾಟೀಲ, ಗುತ್ತಿಗೆದಾರರಾದ ಶ್ರೀ ಲತೀಫ ಹುದ್ದಾರ ಎನ್ ಬಿ ಕುರಿ ಹಾಗೂ ರಮೇಶ ಹಂಚಿನಮನಿ ಉಪಸ್ಥಿತರಿದ್ದರು.

**ವರದಿ ಮಂಜು .ಎಮ್. ಚಿಕ್ಕಣ್ಣವರ**

# ಅದ್ದೂರಿಯಾಗಿ ಜರುಗಿದ ಬಿಕ್ಕಿ ಮರಡಿ ದುರುಗಮ್ಮದೇವಿ ರಥೋತ್ಸವ

ವಿಜಯನಗರ ಜಿಲ್ಲೆಯ ಕೊಟ್ಟೂರಿನ ಕೆರೆಯ ಏರಿಯ ಮೇಲೆ ಇರುವ ಬಿಕ್ಕಿ ಮರಡಿ ದುರುಗಮ್ಮ ದೇವಿ ರಥೋತ್ಸವಕ್ಕೆ ಜೀವಂತ ಕೋಳಿಗಳನ್ನು ತೂರುವ ಏಕೈಕ ಸಂಪ್ರದಾಯ ಕೊಟ್ಟೂರಿನ ಬಿಕ್ಕಿ ಮರಡಿ ದುರುಗಮ್ಮ ದೇವಿಯ ಜಾತ್ರೆ ಕೊಟ್ಟೂರಿನ ಬಿಕ್ಕಿಮರಡಿ ದುರುಗಮ್ಮ ದೇವಿಯ ರಥೋತ್ಸವ ಸೋಮವಾರ ಸಂಜೆ ಜರುಗುತ್ತಿದ್ದಂತೆ ನೆರೆದಿದ್ದ ಸಾವಿರಾರು ಭಕ್ತರ ಪೈಕಿ ಕೆಲವರು ಹರಕೆ ಹೊತ್ತು ಜೀವಂತ ಕೋಳಿಗಳನ್ನು ತೂರಿ ಭಕ್ತಿ ಸಮರ್ಪಿಸಿದರು.

ವಿಶಿಷ್ಟಾಚರಣೆಯ ಇಲ್ಲಿನ ಬಿಕ್ಕಿಮರಡಿ ದುರುಗಮ್ಮ ದೇವಿಯ ರಥೋತ್ಸವವು ಬೌದ್ಧ ಪೂರ್ಣಿಮೆಯ ದಿನವಾದ ಸೋಮವಾರ ಸಂಜೆ 6 ಗಂಟೆಗೆ ಸಾವಿರಾರು ಭಕ್ತರ ಸಡಗರ ಸಂಭ್ರಮಗಳೊಂದಿಗೆ ಜರುಗಿತು. ರಥಕ್ಕೆ ಚಾಲನೆ ದೊರಕುತ್ತಿದ್ದಂತೆ ದುರುಗಮ್ಮ ದೇವಿಗೆ ಹರಕೆ ಹೊತ್ತ ಕೆಲ ಭಕ್ತರು ಜೀವಂತ ಕೋಳಿಗಳನ್ನು ತೂರಿ ತಮ್ಮ ಭಕ್ತಿ ಸಮರ್ಪಿಸಿದರು.

ಜೀವಂತ ಕೋಳಿಗಳನ್ನು ರಥಕ್ಕೆ ತೂರುವ ಏಕೈಕ ಸಂಪ್ರದಾಯ ಕೊಟ್ಟೂರಿನ ಬಿಕ್ಕಿಮರಡಿ ದುರುಗಮ್ಮ ದೇವಿಯ ರಥೋತ್ಸವದ್ದಾಗಿದ್ದು ಇದನ್ನು ಕಣ್ತುಂಬಿಕೊಳ್ಳಲು ಭಕ್ತರು ದಂಡು ದಂಡಾಗಿ ಮಧ್ಯಾಹ್ನದಿಂದಲೇ ಇಲ್ಲಿನ ಕೆರೆಯ ದಂಡೆಯ ಮೇಲಿರುವ ದೇವಿಯ ಗುಡಿಯ ಬಳಿ ಜಮಾಯಿಸತೊಡಗಿದರು.



ಈ ಪೈಕಿ ಹೊಸದಾಗಿ ಮದುವೆಯಾದ ದಂಪತಿಗಳ ಸಂಖ್ಯೆ ಹೆಚ್ಚಾಗಿದ್ದು, ರಥೋತ್ಸವಕ್ಕೂ ಮೊದಲು ಗುಡಿಯಿಂದ ದುರುಗಮ್ಮ ದೇವಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿ ಮೆರವಣಿಗೆಯೊಂದಿಗೆ ರಥದ ಬಳಿ ತರಲಾಯಿತು. ರಥ-ದ ಸುತ್ತಲೂ ಮೂರು ಸುತ್ತು ಪಲ್ಲಕ್ಕಿ ಮೆರವಣಿಗೆ ಪ್ರದಕ್ಷಿಣೆ ನಡೆಯಿತು. ನಂತರ ದೇವಿಯನ್ನು ಪಲ್ಲಕ್ಕಿಯಿಂದ ರಥ-ದಲ್ಲಿ ಕೂರಿಸಲಾಯಿತು. ನಂತರ ದೇವಿಯ ಪಟಾಕ್ಷಿ ಹರಾಜು ಪ್ರಕ್ರಿಯೆಯಲ್ಲಿ ಎ ಹರೀಶ್ ರಾಂಪುರ 55,501/- ಸಾವಿರ ರೂ. ಗಳಿಗೆ ಕೂಗಿ ತಮ್ಮದಾಗಿಸುವ ಮೂಲಕ ಭಕ್ತಿಯನ್ನು ಸಮರ್ಪಿಸಿದರು.

ಈ ಪ್ರಕ್ರಿಯೆ ಮುಗಿಯುತ್ತಿದ್ದಂತೆಯೇ ಭಕ್ತರು ಜೀವಂತ ಕೋಳಿಗಳನ್ನು ತೂರಿದರು, ಕೋಳಿಗಳನ್ನು ತೂರುತ್ತಿದ್ದಂತೆ ರಾಶಿಯೋಪಾದಿಯಲ್ಲಿ ಬಾಳೆಹಣ್ಣುಗಳನ್ನು ಭಕ್ತರು ತೂರಿ ಭಕ್ತಿ ಸರ್ಮಪಿಸಿದರು. ರಥೋತ್ಸವ ಸುಮಾರು 150 ಮೀಟ-ರ್ ದೂರವಿರುವ ಆಂಜನೇಯ ದೇವಸ್ಥಾನದ ಬಳಿ ಸಾಗಿ ವಾಪಸ್ ಮರಳಿ ಬಂದು ದುರುಗಮ್ಮ ಗುಡಿಯ ಮುಂಭಾಗದ ಬಳಿ ನಿಲುಗಡೆಗೊಂಡಿತು.

ರಥೋತ್ಸವಕ್ಕೆ ಆಗಮಿಸಿದ ಎಲ್ಲಾ ಭಕ್ತಾದಿಗಳು ತಮ್ಮ ಕುಟುಂಬದ ಜೊತೆ ಸಂತೋಷವಾಗಿ ರಥೋತ್ಸವವನ್ನು ಆಚರಿಸಿದರು.

**ವರದಿಗಾರರು- ಎನ್. ಚಂದ್ರಗೌಡ**


ಕರುನಾಡ ಕಂದ
ಸಂಪುಟ 04 । ಸಂಚಿಕೆ 14
ದಿನಾಂಕ: 16-05-2025 ಪುಟಗಳು:16

# ಕಾರ್ಡಿನಲ್ ರಾಬರ್ಟ್ ಫ್ರಾನ್ಸಿಸ್ ಪ್ರೆವೋಸ್ಟ್ ಹೊಸ ಪೋಪ್ 'ಲಿಯೋ XIV' ಆಗಿ ಆಯ್ಕೆ

**ವ್ಯಾಟಿಕನ್ :** ಯುಗಕ್ಕೆ ಮಿಷನರಿ ನಾಯಕ, ಕ್ಯಾಥೋಲಿಕ್ ಚರ್ಚ್‌ಗೆ ಐತಿಹಾಸಿಕ ಮತ್ತು ಸಂತೋಷದಾಯಕ ಕ್ಷಣದಲ್ಲಿ, ಚಿಕಾಗೋದಲ್ಲಿ ಜನಿಸಿದ, ಮಿಷನ್ ಮತ್ತು ಸೇವೆಗೆ ಆಳವಾದ ಬದ್ಧತೆಯನ್ನು ಹೊಂದಿರುವ 69 ವರ್ಷ ವಯಸ್ಸಿನ ಕಾರ್ಡಿನಲ್ ರಾಬರ್ಟ್ ಫ್ರಾನ್ಸಿಸ್ ಪ್ರೆವೋಸ್ಟ್, ಪೋಪ್ ಫ್ರಾನ್ಸಿಸ್ ಅವರ ನಂತರ ಹೊಸ ಪೋಪ್ ಆಗಿ ಆಯ್ಕೆಯಾಗಿದ್ದಾರೆ.

ಅವರು ಪೋಪ್ ಲಿಯೋ XIV ಎಂಬ ಹೆಸರನ್ನು ಪಡೆದುಕೊಂಡಿದ್ದಾರೆ. ಕಾರ್ಡಿನಲ್ ಪ್ರೊಟೊಡೀಕಾನ್, ಡೊಮಿನಿಕ್ ಮಾಂಬರ್ಟಿ, "ಹ್ಯಾಬೆಮಸ್ ಪಾಪಮ್!" ಎಂದು ಘೋಷಿಸಲು ಸೇಂಟ್ ಪೀಟರ್ಸ್ ಬೆಸಿಲಿಕಾದ ಮಧ್ಯದ ಬಾಲ್ಕನಿಯಲ್ಲಿ ಹೆಜ್ಜೆ ಹಾಕಿ ಹೊಸ ಪೋಪ್ ಆಗಿ ಹೊರಹೊಮ್ಮಿದರು, ಕೈ ಬೀಸಿ ಭಕ್ತರಿಗೆ ತಮ್ಮ ಮೊದಲ ಆಶೀರ್ವಾದವನ್ನು ನೀಡಿದರು. ಹೊಸ ಪೋಪ್ ಹೊರ ಹೊಮ್ಮುತ್ತಿದ್ದಂತೆ ನಗುತ್ತಾ ಜನರನ್ನು ಆಶೀರ್ವದಿಸಿದರು. ಅಗಾಧ ಸಂತೋಷದಿಂದ ಸ್ವಾಗತಿಸುತ್ತಿದ್ದಂತೆ ಸಂಗೀತ, ಕಣ್ಣೀರು ಮತ್ತು ಪ್ರಾರ್ಥನೆಗಳು ಮೊಳಗಿದವು.

ಚರ್ಚ್‌ನ ಪಾದ್ರಿಯ ಧ್ಯೇಯಕ್ಕೆ, ವಿಶೇಷವಾಗಿ ಬಡವರು ಮತ್ತು ವಲಸಿಗರೊಂದಿಗಿನ ಅವರ ಕೆಲಸಕ್ಕೆ ಮತ್ತು ಆಗಸ್ಟಿನಿಯನ್ ಕ್ರಮದಲ್ಲಿ ಅವರ ಮಹತ್ವದ ನಾಯಕತ್ವದ ಪಾತ್ರಗಳಿಗೆ ಹೆಸರುವಾಸಿಯಾದ ಕಾರ್ಡಿನಲ್ ಪ್ರೆವೋಸ್ಟ್, ನಮ್ರತೆ, ಆಧ್ಯಾತ್ಮಿಕ ಆಳವನ್ನು ಹೊಂದಿದವರಾಗಿದ್ದಾರೆ.




## ಹಿನ್ನೆಲೆ ಮತ್ತು ರಚನೆ

ಸೆಪ್ಟೆಂಬರ್ 14, 1955 ರಂದು ಇಲಿನಾಯ್ಸ್‌ನ ಚಿಕಾಗೋದಲ್ಲಿ ಜನಿಸಿದ ಕಾರ್ಡಿನಲ್ ಪ್ರೆವೋಸ್ಟ್ 1977 ರಲ್ಲಿ ಆರ್ಡರ್ ಆಫ್ ಸೇಂಟ್ ಆಗಸ್ಟೀನ್ (OSA) ಅನ್ನು ಪ್ರವೇಶಿಸಿದರು ಮತ್ತು 1981 ರಲ್ಲಿ ತಮ್ಮ ಗಂಭೀರ ಪ್ರತಿಜ್ಞೆಗಳನ್ನು ಮಾಡಿದವರು. ಅವರ ಶೈಕ್ಷಣಿಕ ಪ್ರಯಾಣದಲ್ಲಿ ವಿಲ್ಲನೋವಾ ವಿಶ್ವವಿದ್ಯಾಲಯದಿಂದ ಗಣಿತಶಾಸ್ತ್ರದಲ್ಲಿ ಬ್ಯಾಚುಲರ್ ಆಫ್ ಸೈನ್ಸ್, ಚಿಕಾಗೋದ ಕ್ಯಾಥೋಲಿಕ್ ಥಿಯೋಲಾಜಿಕಲ್ ಯೂನಿಯನ್‌ನಿಂದ ಮಾಸ್ಟರ್ ಆಫ್ ಡಿವಿನಿಟಿ ಮತ್ತು ರೋಮ್‌ನ ಸೇಂಟ್ ಥಾಮಸ್ ಅಕ್ವಿನಾಸ್‌ನ ಪಾಂಟಿಫಿಕಲ್ ಕಾಲೇಜಿನಿಂದ ಕ್ಯಾನನ್ ಕಾನೂನಿನಲ್ಲಿ ಉನ್ನತ ಪದವಿಗಳನ್ನು ಒಳಗೊಂಡಿದೆ. ಅವರ ಡಾಕ್ಟರೇಟ್ ಪ್ರಬಂಧವು ಆರ್ಡರ್ ಆಫ್ ಸೇಂಟ್ ಆಗಸ್ಟೀನ್‌ನಲ್ಲಿ ಸ್ಥಳೀಯ ಪೂರ್ವಾಧಿಕಾರಿಯ ಪಾತ್ರದ ಮೇಲೆ ಕೇಂದ್ರೀಕರಿಸಿದೆ, ಇದು ಚರ್ಚ್ ಆಡಳಿತದ ಬಗ್ಗೆ ಅವರ ಆಳವಾದ ತಿಳುವಳಿಕೆಯನ್ನು ಪ್ರತಿಬಿಂಬಿಸುತ್ತದೆ.

## ಪೆರುವಿನಲ್ಲಿ ಮಿಷನರಿ ಕೆಲಸ ಮತ್ತು ನಾಯಕತ್ವ

ಪೆರುವಿನಲ್ಲಿ ಕಾರ್ಡಿನಲ್ ಪ್ರೆವೋಸ್ಟ್ ಅವರ ಮಿಷನರಿ ಸೇವೆಯು ಅವರ ಆರಂಭಿಕ ಸಚಿವಾಲಯದ ನಿರ್ಣಾಯಕ ಅಂಶವಾಗಿತ್ತು. 1982 ರಲ್ಲಿ ಅವರ ದೀಕ್ಷೆಯ ನಂತರ, ಅವರು ಪೆರುವಿನ ಚುಲುಕಾನಾಸ್‌ನಲ್ಲಿರುವ ಆಗಸ್ಟೀನಿಯನ್ ಮಿಷನ್‌ಗೆ ಸೇರಿದರು, ಅಲ್ಲಿ ಅವರು ಪ್ರಾದೇಶಿಕ ಪ್ರಿಲೇಚರ್‌ನ ಕುಲಪತಿಯಾಗಿ ಸೇವೆ ಸಲ್ಲಿಸಿದರು ಮತ್ತು ನಂತರ ಟ್ರುಜಿಲ್ಲೊದಲ್ಲಿ ಆಗಸ್ಟೀನಿಯನ್ ಸೆಮಿನರಿಯ ಮುಖ್ಯಸ್ಥರಾಗಿ ಸೇರಿದಂತೆ ವಿವಿಧ ಪಾದ್ರಿ ಮತ್ತು ಶೈಕ್ಷಣಿಕ ಪಾತ್ರಗಳನ್ನು ವಹಿಸಿಕೊಂಡರು. ಪೆರುವಿನಲ್ಲಿ ಅವರ ಕೆಲಸವು ಅವರ ಪಾದ್ರಿಯ ವಿಧಾನವನ್ನು ರೂಪಿಸಿದ್ದಲ್ಲದೆ, ಸಂಕೀರ್ಣ ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳನ್ನು, ವಿಶೇಷವಾಗಿ ಅಂಚಿನಲ್ಲಿರುವವರ ಮೇಲೆ ಪರಿಣಾಮ ಬೀರುವ ಸಮಸ್ಯೆಗಳನ್ನು ನಿಭಾಯಿಸುವಲ್ಲಿ ಅವರಿಗೆ ನೇರ ಅನುಭವವನ್ನು ನೀಡಿದೆ.

## ಆಗಸ್ಟೀನಿಯನ್ ಆದೇಶದೊಳಗಿನ ನಾಯಕತ್ವ

1999 ರಲ್ಲಿ, ಕಾರ್ಡಿನಲ್ ಪ್ರೆವೋಸ್ಟ್ "ಮದರ್ ಆಫ್ ಗುಡ್ ಕೌನ್ಸೆಲ್" ಪ್ರಾಂತ್ಯದ ಪ್ರಾಂತೀಯ ಪ್ರಿವೋಸ್ಟ್ ಆಗಿ ಸೇವೆ ಸಲ್ಲಿಸಲು ಚಿಕಾಗೋಗೆ ಮರಳಿದರು. ಅವರ ನಾಯಕತ್ವದ ಗುಣಗಳು ಆಗಸ್ಟೀನಿಯನ್ ಆದೇಶದ ಪ್ರಿಯೋರ್ ಜನರಲ್ ಆಗಿ ಆಯ್ಕೆಯಾಗಲು ಕಾರಣವಾಯಿತು, ಅಲ್ಲಿ ಅವರು 2001 ರಿಂದ 2013 ರವರೆಗೆ ಎರಡು ಅವಧಿಗೆ ಸೇವೆ ಸಲ್ಲಿಸಿದರು. ಅವರ ಮಾರ್ಗದರ್ಶನದಲ್ಲಿ, ಆರ್ಡರ್ ತನ್ನ ಜಾಗತಿಕ ವ್ಯಾಪ್ತಿಯನ್ನು, ವಿಶೇಷವಾಗಿ ಲ್ಯಾಟಿನ್ ಅಮೆರಿಕಾದಲ್ಲಿ ವಿಸ್ತರಿಸಿತು ಮತ್ತು ಸಾಮಾಜಿಕ ನ್ಯಾಯ, ಶಿಕ್ಷಣ ಮತ್ತು ಪಾದ್ರಿಯ ಆರೈಕೆಗೆ ತನ್ನ ಬದ್ಧತೆಯನ್ನು ಹೆಚ್ಚಿಸಿತು.

## ಚಿಕ್ಲಾಯೊ ಬಿಷಪ್ ಮತ್ತು ಪೆರುವಿಯನ್ ಚರ್ಚ್‌ಗೆ ಸೇವೆ

ಪೋಪ್ ಫ್ರಾನ್ಸಿಸ್ ಅವರು 2015 ರಲ್ಲಿ ಕಾರ್ಡಿನಲ್ ಪ್ರೆವೋಸ್ಟ್ ಅವರನ್ನು ಚಿಕ್ಲಾಯೊ ಬಿಷಪ್ ಆಗಿ ನೇಮಿಸಿದ್ದು ಅವರ ಪಾದ್ರಿ ಸೇವೆಯಲ್ಲಿ ಮಹತ್ವದ ಅಧ್ಯಾಯವನ್ನು ಗುರುತಿಸಿದೆ. ಅವರ ಅಧಿಕಾರಾವಧಿಯಲ್ಲಿ, ಅವರು ಪೆರುವಿಯನ್ ಬಿಷಪ್‌ಗಳ ಸಮ್ಮೇಳನದಲ್ಲಿ ಪ್ರಮುಖ ಪಾತ್ರ ವಹಿಸಿದರು, ದೇಶದ ರಾಜಕೀಯ ಪ್ರಕ್ಷುಬ್ಧತೆಯ ನಡುವೆ ಚರ್ಚ್‌ನ ಸ್ಥಿರತೆಗೆ ಕೊಡುಗೆ ನೀಡಿದರು. ರಾಜಕೀಯ ಏರಿಳಿತಗಳ ನಡುವೆಯೂ ಚರ್ಚ್ ಏಕತೆ ಮತ್ತು ಶಾಂತಿಗಾಗಿ ಧ್ವನಿಯಾಗಿದೆ.

## ಬಿಷಪ್‌ಗಳು ಮತ್ತು ಕಾರ್ಡಿನಲ್‌ಗಳಿಗಾಗಿ ಡಿಕ್ಯಾಸ್ಟರಿಯ ಪ್ರಿಫೆಕ್ಟ್

2023 ರಲ್ಲಿ, ಕಾರ್ಡಿನಲ್ ಪ್ರೆವೋಸ್ಟ್ ಅವರನ್ನು ಪೋಪ್ ಫ್ರಾನ್ಸಿಸ್ ಅವರು ಬಿಷಪ್‌ಗಳಿಗಾಗಿ ಡಿಕ್ಯಾಸ್ಟರಿಯ ಪ್ರಿಫೆಕ್ಟ್ ಆಗಿ ನೇಮಿಸಿದರು, ಈ ಪಾತ್ರವು ವಿಶ್ವಾದ್ಯಂತ ಬಿಷಪ್‌ಗಳ ಆಯ್ಕೆಯನ್ನು ಮಾರ್ಗದರ್ಶನ ಮಾಡುವ ವ್ಯಾಟಿಕನ್‌ನ ಪ್ರಯತ್ನಗಳ ಹೃದಯಭಾಗದಲ್ಲಿ ಅವರನ್ನು ಇರಿಸಿತು. ಅವರ ವಿವೇಚನೆ ಮತ್ತು ಆಳವಾಗಿ ಕೇಳುವ ಸಾಮರ್ಥ್ಯಕ್ಕೆ ಹೆಸರುವಾಸಿಯಾದ ಕಾರ್ಡಿನಲ್ ಪ್ರೆವೋಸ್ಟ್ ಅವರು ನಾಯಕತ್ವಕ್ಕೆ ತಮ್ಮ ಚಿಂತನಶೀಲ ಮತ್ತು ಅಳತೆಯ ವಿಧಾನಕ್ಕಾಗಿ ಚರ್ಚ್‌ನಲ್ಲಿ ಅನೇಕರ ಗೌರವವನ್ನು ಗಳಿಸಿದರು. ಸೆಪ್ಟೆಂಬರ್ 2023 ರಲ್ಲಿ ಕಾರ್ಡಿನಲ್ ಆಗಿ ಅವರ ನೇಮಕಾತಿ ಕ್ಯಾಥೋಲಿಕ್ ಶ್ರೇಣಿಯಲ್ಲಿ ಪ್ರಮುಖ ವ್ಯಕ್ತಿಯಾಗಿ ಅವರ ಪಾತ್ರವನ್ನು ಮತ್ತಷ್ಟು ಗಟ್ಟಿಗೊಳಿಸಿದೆ.

"ಬಿಷಪ್ ತನ್ನ ರಾಜ್ಯದಲ್ಲಿ ಕುಳಿತಿರುವ ಪುಟ್ಟ ರಾಜಕುಮಾರನಾಗಿರಬಾರದು" ಎಂಬ ಅವರ ನಂಬಿಕೆಯು ಬಿಷಪ್ ಮತ್ತು ಈಗ ಪೋಪ್ ಪಾತ್ರವು ದೇವರ ಜನರಿಗೆ ಸೇವೆ ಸಲ್ಲಿಸುವ ಪಾತ್ರವಾಗಿದೆ ಎಂಬ ಅವರ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ.

## ಚರ್ಚ್‌ಗೆ ಹೊಸ ಅಧ್ಯಾಯ

ಹೊಸದಾಗಿ ಆಯ್ಕೆಯಾದ ಪೋಪ್ ಆಗಿ, ಕಾರ್ಡಿನಲ್ ಪ್ರೆವೋಸ್ಟ್ ಅವರ ನಾಯಕತ್ವವು ನಿಸ್ಸಂದೇಹವಾಗಿ ಮಿಷನ್ ಮತ್ತು ಆಡಳಿತದಲ್ಲಿ ಅವರ ವರ್ಷಗಳ ಸೇವೆಯನ್ನು ಪ್ರತಿಬಿಂಬಿಸುತ್ತದೆ. ಏಕತೆ, ಸಂವಾದ ಮತ್ತು ಶಾಂತಿಯ ಮೇಲೆ ಅವರ ಗಮನ, ವಿಶೇಷವಾಗಿ ಅಪಾರ ಸವಾಲುಗಳನ್ನು ಎದುರಿಸುತ್ತಿರುವ ಜಗತ್ತಿನಲ್ಲಿ, ಚರ್ಚ್ ಅನ್ನು ಬುದ್ಧಿವಂತಿಕೆ ಮತ್ತು ಸಹಾನುಭೂತಿಯಿಂದ ಮಾರ್ಗದರ್ಶನ ಮಾಡುವ ಭರವಸೆ ನೀಡುತ್ತದೆ. 13 ನೇ ಶತಮಾನದಲ್ಲಿ ಪೋಪ್ ಅಲೆಕ್ಸಾಂಡರ್ IV ರ ನಂತರ, ಪೋಪ್ ಹುದ್ದೆಗೆ ಏರಿದ ಎರಡನೇ ಆಗಸ್ಟಿನಿಯನ್ ಆಗಿ, ಕಾರ್ಡಿನಲ್ ಪ್ರೆವೋಸ್ಟ್ ಸೇವೆ ಮತ್ತು ನಮ್ರತೆಯ ಶ್ರೀಮಂತ ಸಂಪ್ರದಾಯವನ್ನು ಮುಂದುವರೆಸಿದ್ದಾರೆ, ಭವಿಷ್ಯದ ಕಡೆಗೆ ಚರ್ಚ್‌ನ ಪ್ರಯಾಣದಲ್ಲಿ ಅವರು ಪ್ರಮುಖ ವ್ಯಕ್ತಿಯಾಗಿದ್ದಾರೆ ಎಂದು ಕ್ಯಾಥೋಲಿಕ್ ಕನೆಕ್ಟ್ ಅವರಿಂದ ಮಾಹಿತಿ ದೊರೆತಿದೆ.

**ವರದಿ : ಜಿಲಾನಸಾಬ್ ಬಡಿಗೇರ್**



ಶ್ರೀಮತಿ ಗೀತಾ ಪ್ರೇಮ್ ಕುಮಾರ್ ಅಧ್ಯಕ್ಷರು, ಗ್ರಾಮ ಪಂಚಾಯತ್ ಕೋಡ್ಲಿ ಇವರಿಗೆ ಕರುನಾಡ ಕಂದ ಪತ್ರಿಕೆ ಪರಿಚಯಿಸಿದ ಸಂದರ್ಭ.
ಜಿ. ಕಲಬುರಗಿ ತಾ.ಕಾಳಗಿ



ಶ್ರೀ ವಿಜಯ ಶ್ರೀಶೈಲ ಬೋಳನ್ನವರ ಬೈಲಹೊಂಗಲ ಪುರಸಭೆ ಅಧ್ಯಕ್ಷರು ಅವರೊಂದಿಗೆ ಕರುನಾಡ ಕಂದ ಪತ್ರಿಕೆ




ಬೆಳಗಾವಿ ಜಿಲ್ಲೆಯ ಯರಗಟ್ಟಿ ತಾಲೂಕು ಶಿರಸ್ತೇದಾರ ಶ್ರೀ ಸಂತೋಷ್ ಎಸ್. ಜಾಧವ ಅವರೊಂದಿಗೆ ಕರುನಾಡ ಕಂದ.

ಕರುನಾಡ ಕಂದ
ಸಂಪುಟ 04 । ಸಂಚಿಕೆ 14
ದಿನಾಂಕ: 16-05-2025 ಪುಟಗಳು:16

# ಬಿ-ಖಾತೆ ಅಕ್ರಮ ಕಂಡು ಬಂದಲ್ಲಿ ನಿರ್ಧಾಕ್ಷಿಣ್ಯ ಕ್ರಮ ಜರುಗುವುದು: ಸಚಿವ ಶ್ರೀ ರಹೀಂ ಖಾನ್

## ಹೊಸಪೇಟೆಯಲ್ಲಿ ಜರುಗುವ ಬೃಹತ್ ಸಾಧನಾ ಸಮಾವೇಶಕ್ಕೆ ಆಹ್ವಾನ

**ಯಾದಗಿರಿ/ ಗುರುಮಠಕಲ್ :** ಸಾರ್ವಜನಿಕರಿಗೆ ಉಪಯೋಗವಾಗಲೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಮಹತ್ವದ ಬಿ ಖಾತೆ ಜಾರಿಗೊಳಿಸಿದ್ದು ಅಧಿಕಾರಿಗಳು ಲೋಪವೆಸಗಿದಲ್ಲಿ ಹಾಗೂ ಅಕ್ರಮ ಲಂಚ ಬೇಡಿಕೆಯಿಟ್ಟರೆ ನಿರ್ಧಾಕ್ಷಿಣ್ಯವಾಗಿ ಅಂಥವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಪೌರಾಡಳಿತ ಮತ್ತು ಹಜ್ ಸಚಿವ ಶ್ರೀ ರಹೀಂ ಖಾನ್ ಹೇಳಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರದ ಮೂಲಕ ಕಳೆದ 2 ವರ್ಷಗಳಲ್ಲಿ ಪಂಚ ಗ್ಯಾರಂಟಿ ಯೋಜನೆಗಳಿಗಾಗಿ ಮೊದಲ ವರ್ಷ 56 ಸಾವಿರ ಮತ್ತು ಪ್ರಸಕ್ತ ವರ್ಷ 60 ಸಾವಿರ ಕೋಟಿ ಒಟ್ಟಾರೆಯಾಗಿ 1.20 ಲಕ್ಷ ಕೋಟಿ ರೂಪಾಯಿಗಳನ್ನು ಫಲಾನುಭವಿಗಳಿಗೆ ಜಮೆ ಮಾಡುವ ಮೂಲಕ ರಾಜ್ಯ ಸರ್ಕಾರ ಜನತೆಗೆ ನೀಡಿದ ಭರವಸೆಯನ್ನು ನೂರಕ್ಕೆ ನೂರರಷ್ಟು ಈಡೇರಿಸಿದೆ. ನಮ್ಮ ಸರ್ಕಾರ ಪ್ರತಿ ಜಿಲ್ಲೆಗೆ ಕನಿಷ್ಠ 500 ಕೋಟಿ ರೂಪಾಯಿಗಳನ್ನು ಒದಗಿಸಿ ಅಭಿವೃದ್ಧಿಗೆ ವಿಶೇಷ ಒತ್ತು ನೀಡಿದೆ ಎಂದು ಹೇಳಿದರು.

ಕಾಂಗ್ರೆಸ್ ಸರಕಾರ ಜಾರಿಗೆ ಬಂದು ಎರಡು ವರ್ಷಗಳಲ್ಲಿ ಯಶಸ್ವಿ ಪಂಚ ಯೋಜನೆಗಳನ್ನು ಜಾರಿಗೊಳಿಸಿ ಜನಮನ ಗೆದ್ದಿದೆ. ಮೇ.20ರಂದು ಹೊಸಪೇಟೆಯಲ್ಲಿ ಬೃಹತ್ ಸಾಧನಾ ಸಮಾವೇಶವನ್ನು ಹಮ್ಮಿಕೊಂಡಿದ್ದು, ಈ ಸಭೆಗೆ ಪಕ್ಷದ ಕಾರ್ಯಕರ್ತರು, ಪದಾಧಿಕಾರಿಗಳು ಕರ್ನಾಟಕದ ಮೂಲೆ ಮೂಲೆಗಳಿಂದ ಕಾಂಗ್ರೆಸ್ ಪಕ್ಷದ ಪಂಚ ಯೋಜನೆಗಳ ಫಲಾನುಭವಿಗಳು ಸರಿ ಸುಮಾರು ಐದು ಲಕ್ಷ ಜನ ಸೇರುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಇದೇ ವೇಳೆ ಸುದ್ದಿಗೋಷ್ಠಿ ನಡೆಸಿ ಪತ್ರಕರ್ತರು ಬಿ ಖಾತಾ ಲಂಚಾವತಾರ ಕುರಿತಾಗಿ ಕೇಳಿದ ಪ್ರಶ್ನೆಗೆ



**" ಕಾಂಗ್ರೆಸ್ ಪಕ್ಷದ ಮಾಜಿ ಶಾಸಕರು ಸಪ್ತ ಖಾತೆ ಸಚಿವರಾದ ಬಾಬುರಾವ್ ಚಿಂಚನಸೂರ್ ಅವರನ್ನು ಅಪಪ್ರಚಾರದ ಮೂಲಕ ಚುನಾವಣೆಯಲ್ಲಿ ಸೋಲಿಸಿರಬಹುದು ಆದರೆ ಅವರು ಯಾವುದೇ ಮಂತ್ರಿಗೂ ಕಡಿಮೆ ಇಲ್ಲ ಅವರ ವರ್ಚಸ್ಸು ಮುಖ್ಯಮಂತ್ರಿ ಪ್ರಧಾನ ಮಂತ್ರಿಗಳವರೆಗೂ ಇದೆ, ಅವರು ಸದ್ಯ ನಮ್ಮ ಮಂತ್ರಿ ಇದ್ದ ಹಾಗೆ ".**

**■ಪೌರಾಡಳಿತ ಮತ್ತು ಹಜ್ ಸಚಿವ ಶ್ರೀ ರಹೀಂ ಖಾನ್**

ಉತ್ತರಿಸಿದ ಅವರು, ಇಡೀ ಕರ್ನಾಟಕದಾದ್ಯಂತ ಮುಖ್ಯಮಂತ್ರಿಗಳ ಮಹತ್ವಾಕಾಂಕ್ಷೆಯ ಯೋಜನೆಯಾಗಿರುವ ಬಿ ಖಾತೆ ಹಂಚಿಕೆಗೆ ಈಗಾಗಲೇ ಮೂರು ತಿಂಗಳ ಗಡುವು ವಿಸ್ತರಣೆಯಾಗಿದ್ದು ನಗರಸಭೆ ಮಹಾನಗರ ಪಾಲಿಕೆ ಅಥವಾ ಯಾವುದೇ ಇಲಾಖೆಯಲ್ಲಾಗಲಿ ಅವ್ಯವಹಾರ ಕಂಡು ಬಂದಲ್ಲಿ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ ಈಗಾಗಲೇ ಅವರ ಮೇಲೆ ಇಸಿ ಮಾನಿಟರ್ ಮಾಡುತ್ತಿದ್ದೇವೆ ಅಂತಹ ಪ್ರಕರಣ ಕಂಡು ಬಂದಲ್ಲಿ ಕ್ರಿಮಿನಲ್ ಕೇಸ್ ದಾಖಲಿಸುತ್ತೇವೆ ಎಂದು ಅಧಿಕಾರಿಗಳಿಗೆ ಎಚ್ಚರಿಕೆಯ ಬಿಸಿ ಮುಟ್ಟಿಸಿದರು.

ಪುರಸಭೆ ವ್ಯಾಪ್ತಿಯಲ್ಲಿರುವ ಒಳಚರಂಡಿ ವ್ಯವಸ್ಥೆ ನಿರ್ವಹಣೆ ಹದಗೆಟ್ಟಿರುವ ಬಗ್ಗೆ, 30 ವರ್ಷಗಳಿಂದ ಟೆಂಡರ್ ಕರೆಯದ ವಾಣಿಜ್ಯ ಮಳಿಗೆಗಳು, ಮಾಂಸ ಮಳಿಗೆಗಳ ಸ್ಥಳಾಂತರ ಕುರಿತಾಗಿ ಪ್ರತಿಕ್ರಿಯೆ ನೀಡಿದ ಅವರು ಪುರಸಭೆ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸುವುದಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಪುರಸಭೆಗೆ ಭೇಟಿ ನೀಡಿದ ಸಚಿವರಿಗೆ ಸದಸ್ಯರು ಸ್ವಾಗತಿಸಿ ಹೆಚ್ಚುವರಿ ಅನುದಾನದ ಕುರಿತಾಗಿ ಮನವಿ ನೀಡಿದರು. ಗುರುಮಠಕಲ್ ತಾಲೂಕ ವಿಕಲಚೇತನರ ಸಂಘದ ತಾಲೂಕ ಅಧ್ಯಕ್ಷ ಸಿದ್ದನಗೌಡ, ಅಂಬೇಡ್ಕರ್ ಯುವ ಸೇನೆ ಅಧ್ಯಕ್ಷ ಶ್ರೀಕಾಂತ್ ತಲಾರಿ, ಭಾಜಪ ಮಂಡಲ ಉಪಾಧ್ಯಕ್ಷ ಜಗದೀಶ್ ಮ[illegible]ಗ್ಗಿ, ದಲಿತ ಸಂಘಟನೆಗಳು ಮನವಿ ಸಲ್ಲಿಸಿ ಪಟ್ಟಣದ ಸಮಗ್ರ ಅಭಿವೃದ್ಧಿಗೆ ವಿಶೇಷ ಕಾಳಜಿ ವಹಿಸುವಂತೆ ಹಾಗೂ ಅನುದಾನ ನೀಡುವಂತೆ ವಿನಂತಿಸಿದರು.

ಇದಕ್ಕೂ ಮುಂಚೆ ಪಟ್ಟಣದ ಡಾ. ಬಿ. ಆರ್. ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನ್ ರಾಮ್ ಅವರ ಪುತ್ಥಳಿಗಳಿಗೆ ಮಾಲಾರ್ಪಣೆ ಮಾಡಿ ಗೌರವ ಸೂಚಿಸಿದರು.

ಸಚಿವರ ಭೇಟಿಯ ಹಿನ್ನೆಲೆಯಲ್ಲಿ ಗುರುಮಠಕಲ್ ಬ್ಲಾಕ್ ಕಾಂಗ್ರೆಸ್ ಹಾಗೂ ಸೈದಾಪುರ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೃಷ್ಣ ಚಪೆಟ್ಲಾ, ನಿರಂಜನ್ ರೆಡ್ಡಿ, ಕಾಂಗ್ರೆಸ್ ನ ಕೆಪಿಸಿಸಿ ಕಾರ್ಯದರ್ಶಿಗಳಾದ ರಾಜಗೋಪಾಲ್ ರೆಡ್ಡಿ, ನಿತ್ಯಾನಂದ ಬಾಲಪ್ಪ ನಿರೇಟಿ ರವೀಂದ್ರ ರೆಡ್ಡಿ ಸೇರಿ ಬಾಬು ತಲಾರಿ ಗುರುಮಠಕಲ್ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಸಂಜು ಕುಮಾರ್ ಚಂದಾಪುರ್ ಪುರಸಭೆಯ ಅಧ್ಯಕ್ಷರು ಉಪಾಧ್ಯಕ್ಷರು ಸರ್ವ ಸದಸ್ಯರು ಮುಖ್ಯ ಅಧಿಕಾರಿಗಳು ಸಿಬ್ಬಂದಿ ಮತ್ತು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ವಿವಿಧ ಸಂಘಟನೆಗಳ ಅಧ್ಯಕ್ಷರು ಭಾಗವಹಿಸಿದ್ದರು.

**ವರದಿ: ಜಗದೀಶ್ ಕುಮಾರ್ ಭೂಮಾ.**

# ಕೆರೆಯ ಅಚ್ಚುಕಟ್ಟುದಾರರ ವೇದಿಕೆಯಿಂದ ಸುದ್ದಿ ಗೋಷ್ಠಿ

**ಚಿಕ್ಕಬಳ್ಳಾಪುರ/ ಗೌರಿಬಿದನೂರು :** ವಾಟದಹೊಸಹಳ್ಳಿ ಕೆರೆ ಅಚ್ಚುಕಟ್ಟುದಾರರ ವೇದಿಕೆಯಿಂದ ನಗರದ ಸುಮಂಗಳಿ ಕಲ್ಯಾಣ ಮಂಟಪದಲ್ಲಿ ಇತ್ತೀಚಿಗೆ ಮಾಧ್ಯಮ ಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಮುಖಂಡ ಮಾಳಪ್ಪ ಮಾತನಾಡಿ, ವಾಟದಹೊಸಹಳ್ಳಿ ಅಮಾನಿ ಬೈರಸಾಗರ ಕೆರೆ ನೀರನ್ನು ನಗರಕ್ಕೆ ಹರಿಸಲು ನಗರಸಭೆಯಲ್ಲಿ ಎಲ್ಲಾ ಸದಸ್ಯರು ಶಾಸಕರಿಗೆ ಮನವಿ ಮಾಡಿದ್ದಾರೆ, ವಾಟದಹೊಸಹಳ್ಳಿ ಕೆರೆಯು ಮಳೆಯಾಧಾರಿತ ವಾಗಿದ್ದು, ಗುಡಿಬಂಡೆ ಕೆರೆ ತುಂಬಿ ಕೋಡಿ ಹೋದರೆ ಮಾತ್ರ ಬೇಗ ತುಂಬುತ್ತದೆ ಹಾಗೂ ಈ ಭಾಗದ ಬಹುತೇಕ ರೈತರು ವ್ಯವಸಾಯವನ್ನು ನಂಬಿಕೊಂಡು ಜೀವನ ನಡೆಸುತ್ತಿದ್ದಾರೆ, ಈ ಬಗ್ಗೆ ಶಾಸಕರು ಇಲ್ಲಿನ ರೈತರೊಂದಿಗೆ ಇಲ್ಲಿನ ಸಾಧಕ ಬಾಧಕಗಳನ್ನು ಚರ್ಚಿಸದೆ ಏಕ ಪಕ್ಷೀಯ ನಿರ್ಧಾರ ಕೈಗೊಂಡಿರುತ್ತಾರೆ, ನಗರದಲ್ಲಿ ಇತ್ತೀಚಿಗೆ ನೀರಿಗಾಗಿ ನಡೆದ ಜಾಥಾದಲ್ಲಿ ನಗರಸಭೆ ನಾಮ ನಿರ್ದೇಶಿತ ಸದಸ್ಯರು ಅಲ್ಲಿ ರೈತರಿಲ್ಲ, ಕೆಲವರಿಂದ ಹಣ ಪಡೆದು ಹೋರಾಟವನ್ನು ಮಾಡಿದ್ದಾರೆ, ಇದರ ಹಿಂದೆ ಕಾಣದ ಕೈಗಳ ಕೆಲಸವಿದೆ, ಅವರು ಬಂದು ವಿಧುರಾಶ್ವತ ದೇವಸ್ಥಾನದಲ್ಲಿ ಪ್ರಮಾಣ ಮಾಡಲಿ ಎಂದು ಜನರನ್ನು ರೊಚ್ಚಿಗೆಬ್ಬಿಸುವ ಮಾತುಗಳನ್ನಾಡಿ, ತಮ್ಮ ನಾಲಿಗೆಯನ್ನು ಹರಿಬಿಟ್ಟಿದ್ದಾರೆ, ಚುನಾವಣೆಯಲ್ಲಿ ಹಣ ನೀಡದೆ ಮತ ಪಡೆದಿದ್ದೇವೆ ಎಂದು ಅವರೇ ಬಂದು ವಿಧುರಾಶ್ವತದಲ್ಲಿ ಪ್ರಮಾಣ ಮಾಡಲಿ ಇಂತಹ



ಮಾತುಗಳು ಅವರಿಗೆ ಶೋಭೆ ತರುವುದಿಲ್ಲ, ರೈತನಾಗಲು ಇರುವ ಮಾನದಂಡವಾದರೂ ಏನು ಎಂದು ಪ್ರಶ್ನಿಸಿದ ಅವರು, ಈ ಹೇಳಿಕೆಯನ್ನು ವಾಪಾಸ್ ಪಡೆಯಬೇಕು ಹಾಗೂ ವಾಟದಹೊಸಹಳ್ಳಿ ರೈತರಿಗೆ ಬಹಿರಂಗ ಕ್ಷಮೆ ಕೇಳಬೇಕು ಇಲ್ಲವಾದಲ್ಲಿ ಅವರ ಮನೆ ಮುಂದೆ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದ ಅವರು ಈ ತಿಂಗಳಿನಲ್ಲಿ ವಾಟದಹೊಸಹಳ್ಳಿಯ ಗ್ರಾಮ ಪಂಚಾಯತ್ ಅವರಣದಿಂದ ನಗರಸಭೆವರೆಗೆ ಜಾಥಾ ನಡೆಸಲು ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ರೈತ ಮುಖಂಡ ಹರ್ಷವರ್ಧನ್ ರೆಡ್ಡಿ ಮಾತನಾಡಿ, ನಮ್ಮ ಹೋರಾಟ ಹಲವು ದಿನಗಳಿಂದ ನಡೆಯುತ್ತಿದೆ, ಶಾಸಕರು ಮತ್ತು ಸದಸ್ಯರು ಎತ್ತಿನ ಹೊಳೆ ನೀರನ್ನು ವಾಟದಹೊಸಹಳ್ಳಿ ಕೆರೆಗೆ ಹರಿಸಿ ಇಲ್ಲಿನ ನೀರನ್ನು ತೆಗೆದುಕೊಂಡು ಹೋಗುವುದಾಗಿ ತಿಳಿಸುತ್ತಿದ್ದಾರೆ, ಆದರೆ ವಾಟದಹೊಸಹಳ್ಳಿ ಕೆರೆಯು ನೀರಿನ ಶೇಖರಣಾ ಸಾಮರ್ಥ್ಯ ಕಳೆದುಕೊಂಡಿದೆ ಎಂದು ಸಣ್ಣ ನೀರಾವರಿ ಇಲಾಖೆಯವರೇ ತಿಳಿಸುತ್ತಿದ್ದಾರೆ ಹಾಗೂ ಎತ್ತಿನ ಹೊಳೆ ನೀರು ಈವರೆಗೂ ಒಂದು ಕೆರೆಗೂ ಹರಿದಿರುವುದಿಲ್ಲ, ಮತ್ತು ಈಗ ಈ ಯೋಜನೆ ಬೇರೆ ಬೇರೆ ಜಿಲ್ಲೆಗಳಿಗೂ ವ್ಯಾಪಿಸಿದೆ. ಇದು ನಗರಸಭೆ ಚುನಾವಣೆಗೆ ನಡೆಯುತ್ತಿರುವ ಗಿಮಿಕ್ ಆಗಿದೆ ಇದರಿಂದ ವಾಟದಹೊಸಹಳ್ಳಿ ಮತ್ತು ನಗರ ಭಾಗದ ಜನತೆಗೆ ಮಾಡುತ್ತಿರುವ ಮೋಸವಾಗಿದೆ, ನಗರ ಭಾಗದಲ್ಲಿರುವ ಕೆರೆಗಳನ್ನು ಮೇಲ್ದರ್ಜೆಗೇರಿಸಿ ಪರ್ಯಾಯ ಯೋಜನೆಯನ್ನು ರೂಪಿಸಿಕೊಳ್ಳಬೇಕು, ಇಲ್ಲವಾದಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ, ಬಂಡಪಲ್ಲಿ ಮೂರ್ತಿ, ನಾಗರಾಜು, ಚಿನ್ನಪ್ಪ, ಗಂಗಾಧರ್, ಕೃಷ್ಣಮೂರ್ತಿ, ಪ್ರಭಾಕರ್ ರೆಡ್ಡಿ, ರಾಜು, ವಿ ಎಂ ಸಿ ಮಂಜುನಾಥ್, ಕೆಂಪ ರಂಗಪ್ಪ, ಶಂಕರ್ ರೆಡ್ಡಿ ಮುಂತಾದವರು ಉಪಸ್ಥಿತರಿದ್ದರು.

**ವರದಿ ತುಳಸಿ ನಾಯ್ಕ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 14
ದಿನಾಂಕ: 16-05-2025 ಪುಟಗಳು:16

# ಮನವಿ ಸಹಿತ, ಎಚ್ಚರಿಕೆಯ ಬಹಿರಂಗ ಪತ್ರ...

## ಪ್ರಿಯ ಸ್ಥಳೀಯ ಜನಪ್ರತಿನಿಧಿಗಳೇ/ ಸರ್ಕಾರಿ ನೌಕರರೇ...



ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಹಿರೇಮೂಳಕೂರಿನ ಮಲಪ್ರಭಾ ನದಿ ದಡದಲ್ಲಿ ಎಲ್ಲಾ ಕಡೆ ಕಸ ಹಾಗೂ ಪ್ಲಾಸ್ಟಿಕ್ ತುಂಬಿಕೊಂಡಿದ್ದು ಜಿಲ್ಲೆಯ ಬಹುತೇಕ ಪಾಲು ಕುಡಿಯುವ ನೀರಿನ ಆಸರೆಯಾದ ನದಿಯ ಬಗ್ಗೆ ಸ್ಥಳೀಯ ಆಡಳಿತವಾಗಲಿ , ಶಾಸಕರಾಗಲೀ ಗಮನ ಹರಿಸದಿರುವುದು ವಿಪರ್ಯಾಸ.

ಸ್ಥಳೀಯ ಸಂಘ ಸಂಸ್ಥೆಗಳು, ಹೋರಾಟಗಾರರು, ಸಾಮಾಜಿಕ ಕಾರ್ಯಕರ್ತರು ಈ ಬಗ್ಗೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಗಮನಕ್ಕೆ ತಂದಿದ್ದರೂ ಸಹ ಕಟ್ಟುವುದು –ಕೆಡುವುದನ್ನೇ ಅಭಿವೃದ್ಧಿ ಎಂದುಕೊಂಡ ಅವರುಗಳಿಗೆ ನದಿಯ ಕಡೆ ಗಮನ ಹರಿಸಲು ಸಮಯವೇ ಸಿಗುತ್ತಿಲ್ಲ ಅನಿಸುತ್ತದೆ.

ಇನ್ನಾದರೂ ಈ ಕಡೆ ಒಮ್ಮೆ ಬಿಡುವು ಮಾಡಿಕೊಂಡು ಬಂದು ಯಾವುದಾದರೂ ಅನುದಾನದಲ್ಲಾಗಲೀ ಅಥವಾ ಸ್ಥಳೀಯ ಸಂಸ್ಥೆಗಳ ನೆರವಿನೊಂದಿಗೆ ಆದರೂ ಆಗಲಿ ಸ್ವಚ್ಛಗೊಳಿಸಿ, ಇಂದಲ್ಲ ನಾಳೆ ನೀವೇನೋ ಮಾಡಿ ಬಿಡುತ್ತೀರಾ ಎಂದು ಕಾಯುವ ಸಾರ್ವಜನಿಕರ ನಂಬಿಕೆ ಉಳಿಸಿ.

ಇದುವರೆಗೆ ಜನ ಜಾನುವಾರುಗಳ ಜೀವಜಲವಾದ ಮಲಪ್ರಭಾ ನದಿಯನ್ನು ಸ್ವಚ್ಛಗೊಳಿಸಿ ಎಂದು ಕೇಳಲು ಬಂದವರನ್ನು ದಾರಿ ತಪ್ಪಿಸಲು ಯತ್ನಿಸಿದ್ದು ಸಾಕು ಇನ್ನಾದರೂ ಸ್ವಲ್ಪವೇ ಸ್ವಲ್ಪ ಇಚ್ಛಾ ಶಕ್ತಿಯಿಂದ ದೊಡ್ಡ ಮನಸ್ಸು ಮಾಡಿ ಈ ಜನೋಪಕಾರಿ ಕೆಲಸ ಮಾಡಲು ತಮ್ಮ ಶಕ್ತಿ, ಯುಕ್ತಿಯನ್ನು ಬಳಸಿ ಸರ್ಕಾರದ ಹಣದಲ್ಲಿ ಇದೊಂದು ಪುಣ್ಯದ ಕೆಲಸ ಮಾಡಿ ನಿಮ್ಮನ್ನು ನಂಬಿರುವ ಜನತೆಯ ನಂಬಿಕೆ ಉಳಿಸಿಕೊಳ್ಳಿ. ಇಲ್ಲವಾದರೆ ಇದ್ಯಾವುದೂ ಆಗುವುದಿಲ್ಲ, ಈ ಕೆಲಸ ಮಾಡಲು ಸಮಯವೂ ಇಲ್ಲ ,ಈ ನದಿ ನಿಮಗೆ ಸಂಬಂಧ ಪಡುವುದಿಲ್ಲ ಎನ್ನುವುದಾದರೆ ಈ ಮೊದಲು ನೀವೇ ಗುಂಡಿ ತೋಡಿ ನೆಟ್ಟ ಯಾವುದಾದರೂ ಒಂದು ಅರ್ಥಕ್ಕೆ ನಿಂತ ಕಾಮಗಾರಿಯ ಬೋರ್ಡ್ ಒಂದನ್ನು ಕಿತ್ತುಕೊಂಡು ತಂದು ನದಿಯ ಈ ಭಾಗದಲ್ಲಿ ಎಲ್ಲಿಯಾದರೂ ಒಂದು ಕಡೆ ನೆಟ್ಟು ಈ ನದಿಯ ಸ್ವಚ್ಛತೆ ನಮ್ಮ ಜವಾಬ್ದಾರಿ ಅಲ್ಲ ಎಂದು ತಮ್ಮ ಮುದ್ದಾದ, ಮುಗ್ಧ ಮುಖ ಹೊಂದಿರುವ ಒಂದು ಫೋಟೋ ಜೊತೆಗೆ ತಮ್ಮ ಹೆಸರು, ಜನ ಕೊಟ್ಟ ಅಥವಾ ನೀವು ಗಿಟ್ಟಿಸಿಕೊಂಡ ಹುದ್ದೆಯನ್ನು ಈ ಬೋರ್ಡ್ ನಲ್ಲಿ ಕೆತ್ತಿ ಬಿಡಿ ನಿಮ್ಮನ್ನು ಗೆಲ್ಲಿಸಿ ನಾಯಕನ ಪಟ್ಟ ಅಥವಾ ಸಂಬಳ ಕೊಟ್ಟು ಕೆಲಸಕ್ಕೆ ಇಟ್ಟ "ಆ" ಹಾಗೂ ಇದನ್ನು ಓದುತ್ತಿರುವ "ಈ" ಅಸಾಮಾನ್ಯನಿಗೆ ಈ ನದಿ ಸ್ವಚ್ಛಗೊಳಿಸುವುದು ದೊಡ್ಡ ಕೆಲಸವೇನಲ್ಲ.

**ನೀವು ಇದನ್ನು ಮಾಡಿ ಮುಗಿಸುವಿರೆಂದು ನಂಬಿ,**
**ಮುಂಗಡ ಧನ್ಯವಾದಗಳೊಂದಿಗೆ...**
**ಇಂತಿ /–**
**ನಿಮ್ಮ ವಿಶ್ವಾಸಿ**

**– ಕರುನಾಡ ಕಂದ**

## ಮೇ 20ರ ಸಾಧನಾ ಸಮಾವೇಶ ಯಶಸ್ವಿಗೊಳಿಸಿ : ಸಚಿವ ಶಿವರಾಜ ತಂಗಡಗಿ ಕರೆ

**ವಿಜಯನಗರ /ಕೂಡ್ಲಿಗಿ :** ಕಾಂಗ್ರೆಸ್ ನೇತೃತ್ವದಲ್ಲಿ ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದು , ಎರಡು ವರ್ಷಗಳ ಮೈಲುಗಲ್ಲು ದಾಡಿದ ಹಿನ್ನಲೆಯಲ್ಲಿ ಮೇ 20 ರಂದು ಜಿಲ್ಲಾಡಳಿತದ ಮುಂದಾಳತ್ವದಲ್ಲಿ , ಬೃಹತ್ ಸಾಧನಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಸರ್ಕಾರದ ವಿವಿಧ ಯೋಜನೆಗಳಿಂದ ಪ್ರಯೋಜನ ಪಡೆದ ಫಲಾನುಭವಿಗಳು, ವಿವಿಧ ಇಲಾಖೆಗಳಿಂದ ಅನುಕೂಲ ಪಡೆದವರೆಲ್ಲರೂ ಎಲ್ಲಾ ಹಂತದ ಅಧಿಕಾರಿಗಳು, ಸರ್ವ ಜನಪ್ರತಿನಿಧಿಗಳು , ಪಕ್ಷದ ಮುಖಂಡರೆಲ್ಲರೂ ಹಾಗೂ ಎಲ್ಲಾ ಹಂತದ ಪ್ರತಿಯೋರ್ವ ಕಾರ್ಯಕರ್ತರು ಸಮಾವೇಶದಲ್ಲಿ ಸಕ್ರಿಯವಾಗಿ ಪಾಲ್ಗೊಂಡು , ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ , ಶಿವರಾಜ ತಂಗಡಗಿಯವರು ಕರೆ ನೀಡಿದರು. ಅವರು ಮೇ 14ರಂದು ಕೂಡ್ಲಿಗಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯನ್ನುದ್ದೇಶಿಸಿ ಮಾತನಾಡುತಿಡುದಂತೆ ನಡೆದ ಸರ್ಕಾರಕ್ಕೆ ಈಗ ಎರಡು ವರ್ಷ ಗತಿಸಿದ್ದು , ಸರ್ಕಾರ ಪಂಚ ಗ್ಯಾರಂಟಿಗಳನ್ನು ನೀಡಿ ನುಡಿದಂತೆ ನಡೆದಿದೆ ಎಂದರು.

ಮೇ 20ರಂದು ಹೊಸಪೇಟೆಯ ಮುನ್ಸಿಪಲ್ ಮೈದಾನದಲ್ಲಿ ಜರುಗುವ ಬೃಹತ್ ಸಾಧನಾ ಸಮಾವೇಶದಲ್ಲಿ ಒಂದು ಲಕ್ಷ ಫಲಾನುಭವಿಗಳಿಗೆ , ಸಿ.ಎಂ. ಸಿದ್ಧರಾಮಯ್ಯ ರವರು ಹಕ್ಕು ಪತ್ರ ವಿತರಿಸಲಿದ್ದಾರೆ, ಡಿ.ಸಿ.ಎಂ ಡಿ.ಕೆ. ಶಿವಕುಮಾರ್ ಸೇರಿದಂತೆ ಸಂಪೂರ್ಣ ಮಂತ್ರಿಮಂಡಲ ಉಪಸ್ಥಿತರಿರುತ್ತಾರೆ. ಆಗಮಿಸುವವರಿಗೆ ಅಗತ್ಯವಾಗಿ ಸಾರಿಗೆ ಬಸ್ ವ್ಯವಸ್ಥೆ ವ್ಯವಸ್ಥೆ ಮಾಡಿದ್ದು , ಜನರನ್ನು ಅತ್ಯಂತ ಸುರಕ್ಷಿತವಾಗಿ ಕರೆದೊಯ್ಯುಲಾಗುವುದು, ಎಲ್ಲರಿಗೂ ಊಟೋಪಚಾರ ವ್ಯವಸ್ಥೆ ಮಾಡಲಾಗಿರುತ್ತದೆ , ಭಾಗವಹಿಸುವವರೆಲ್ಲರನ್ನೂ ಸುರಕ್ಷಿತವಾಗಿ ಕರೆದೊಯ್ಯುವುದು ಮರಳಿ ಕರೆತರುವ ನಿಟ್ಟನಲ್ಲಿ ಆಯಾ ಕ್ಷೇತ್ರಗಳ ಶಾಸಕರ ನೇತೃತ್ವದಲ್ಲಿ , ತಹಶೀಲ್ದಾರರು, ತಾ.ಪಂ ಇಒ ಒಳಗೊಂಡಂತೆ ತಾಲೂಕಿನ ಎಲ್ಲಾ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳನ್ನೊಳಗೊಂಡ ತಂಡ , ನಿಯಮಾನುಸಾರ ಅಗತ್ಯ ಜವಾಬ್ದಾರಿಗಳನ್ನು ನಿರ್ವಹಿಸಲಿದೆ ಸರ್ವರೂ ಸಮಾವೇಶದಲ್ಲಿ ಭಾಗಿಯಾಗಿ ಸಮಾವೇಶ ಯಶಸ್ವಿಗೊಳಿಸಬೇಕೆಂದರು. ಕೂಡ್ಲಿಗಿ ಪಟ್ಟಣ ಸೇರಿದಂತೆ ಕ್ಷೇತ್ರಕ್ಕೆ ಒಟ್ಟು 276 ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ. ಆಯಾ ಬಸ್ಸುಗಳಲ್ಲಿ ಬೆಳಗಿನ ಉಪಹಾರ, ನೀರು, ಇತರೆ ಸೌಲಭ್ಯಗಳನ್ನು , ಸಮರ್ಪಕವಾಗಿ ನಿಭಾಯಿಸುವಂತೆ ಅಗತ್ಯ ಕ್ರಮ ಜರುಗಿಸಿ ವ್ಯವಸ್ಥೆ ಮಾಡಲಾಗಿದೆ, ಇದರಂತೆ ಎಲ್ಲಾ ತಾಲೂಕುಗಳಿಂದ ಆಗಮಿಸಿದ ಬಸ್ಸುಗಳಿಗೆ ನಿಲುಗಡೆಗಾಗಿ ಸ್ಥಳ ನಿಗದಿಗೊಳಿಸಿ ಸುವ್ಯವಸ್ಥೆ ಮಾಡಲಾಗಿದ್ದು , ಯಾವುದೇ ಗೊಂದಲಗಳು ಸೃಷ್ಟಿಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ತಹಶೀಲ್ದಾರರಾದ ವಿ.ಕೆ.ನೇತ್ರಾವತಿರವರು, ತಾಲೂಕು ವ್ಯಾಪ್ತಿಯ ಅಗತ್ಯ ಮಾಹಿತಿ ವಿವರಗಳನ್ನು ಸಚಿವರಿಗೆ ನೀಡಿದರು. ತಾ. ಪಂ ಇಒ ಕೆ. ನರಸಪ್ಪ, ಕೊಟ್ಟೂರು ತಹಶೀಲ್ದಾರ ಅಮರೇಶ, ಕೊಟ್ಟೂರು ತಾ. ಪಂ ಇಒ ಡಾ. ಬಿ. ಆನಂದ್ ಸೇರಿದಂತೆ ಎಲ್ಲಾ ಇಲಾಖೆಗಳ , ತಾಲೂಕು ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು. ಪಟ್ಟಣ ಪಂಚಾಯ್ತಿ ಅಧ್ಯಕ್ಷ ಕಾವಲ್ಲಿ ಶಿವಪ್ಪನಾಯಕ ಸೇರಿದಂತೆ , ಪ. ಪಂ ಸದಸ್ಯರು. ತಾಲೂಕಿನೆಲ್ಲೆಡೆಗಳಿಂದ ಆಗಮಿಸಿದ್ದ ಜನಪ್ರತಿನಿಧಿಗಳು ,ಹಾಗೂ ಕಾಂಗ್ರೆಸ್ ಪಕ್ಷದ ನೂರಾರು ಮುಖಂಡರು, ಕಾರ್ಯಕರ್ತರು ವಿವಿಧ ಇಲಾಖೆಗಳ ಸಿಬ್ಬಂದಿಯವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ವರದಿ : ಗುರುರಾಜ್ ಎಲ್, ಕಲ್ಲಹಳ್ಳಿ ಟಿ**



### ಅಧಿಕಾರಿಗಳ ವಿರುದ್ಧ ದೂರಿದ ಮುಖಂಡರು

**ಅಧಿಕಾರಿಗಳು ಇಲಾಖೆಗಳಲ್ಲಿ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಕಂದಗಲ್ಲು ಗ್ರಾಮದ ಸಾವಜ್ಜಿ ರಾಜೇಂದ್ರ ಪ್ರಸಾದ್ ದೂರಿದರು. ಅದಕ್ಕೆ ಉತ್ತರಿಸಿದ ಸಚಿವ ಶಿವರಾಜ್ ತಂಗಡಗಿ, ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ಸಾರ್ವಜನಿಕರನ್ನು ಪ್ರೀತಿ, ವಿಶ್ವಾಸಗಳೊಡನೆ ಮಾತನಾಡಿಸಬೇಕಿದೆ, ಎಲ್ಲವೂ ಆನ್‌ಲೈನ್ ಮೂಲಕ ಕಾರ್ಯನಿರ್ವಹಿಸುವ ಬಗ್ಗೆ , ಅವರಿಗೆ ಸೌಜನ್ಯದಿಂದ ಮನವರಿಕೆ ಮಾಡಿಕೊಡಬೇಕಿದೆ ಇನ್ನೊಮ್ಮೆ ಈ ಬಗ್ಗೆ ಸಮರ್ಪಕವಾಗಿ ವಿಚಾರಿಸಿ, ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.**

**ಇದೇ ಸಮಯದಲ್ಲಿ ದಲಿತ ಮುಖಂಡರಾದ ಬಯಲು ತುಂಬರಗುದ್ದಿ ದುರುಗೇಶ ರವರು ಮೀಸಲಾತಿ ಹೋರಾಟ ಸಂಬಂಧಿಸಿದಂತೆ ಇಲಾಖೆಯಿಂದ ಸ್ಪಂದನೆ ದೊರಕುತ್ತಿಲ್ಲ ಎಂದು ದೂರಿದರು. ಕಾನೂನು ಪದವೀಧರರೋರ್ವರು ಸಭೆಯಲ್ಲಿ ಎದ್ದು ನಿಂತು ಸಮಾಜ ಕಲ್ಯಾಣ ಇಲಾಖಾಧಿಕಾರಿಗಳು ತಮಗೆ ಸಮರ್ಪಕವಾಗಿ ಸ್ಪಂದಿಸುತ್ತಿಲ್ಲ ಎಂದು ದೂರಿದರು. ಸಚಿವರು ಮಾತನಾಡಿ ಇಲಾಖೆಯ ನಿಯಮಾವಳಿಯಂತೆ , ಇಲಾಖಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ, ತಪ್ಪು ಗ್ರಹಿಕೆ ಬೇಡ ತಾಂತ್ರಿಕ ಅಡಚಣೆ ಕಾರಣದಿಂದ ವಿಳಂಬವಾಗಿದ್ದರೆ ಸಹಿಸಿಕೊಂಡು ಸ್ಪಂದಿಸಬೇಕಿದೆ , ಹೊರತು ಪಡಿಸಿದಂತೆ ಅನಗತ್ಯ ವಿಳಂಬವಾಗಿದ್ದಲ್ಲಿ ತಮ್ಮ ಗಮನಕ್ಕೆ ಉಚಿತವಾಗಿ ದೂರು ನೀಡಿ. ಮೇಲಾಧಿಕಾರಿಗಳ ಗಮನಕ್ಕೆ ತನ್ನಿ , ಅಥವಾ ಸ್ಥಳೀಯ ಶಾಸಕರಲ್ಲಿ ದೂರು ನೀಡಿ ಎಂದರು.**

ಕರುನಾಡ ಕಂದ
ಸಂಪುಟ 04 | ಸಂಚಿಕೆ 14
ದಿನಾಂಕ: 16-05-2025 ಪುಟಗಳು:16

# ಎಲ್ಲಾ ವ್ಯವಹಾರಗಳನ್ನು ಕುಟುಂಬದೊಂದಿಗೆ ಪಂಚಿಕೊಳ್ಳಿ, ಇಲ್ಲವಾದಲ್ಲಿ ಆಗುವುದು ನಷ್ಟ



ಇದು ಸುಮಾರು 12 ವರ್ಷಗಳ ಹಿಂದೆ ನಡೆದ ಒಂದು ಘಟನೆ, ನನಗೆ ಪರಿಚಿತವಾದ ಒಂದು ಕುಟುಂಬ, ಆ ಕುಟುಂಬದ ಯಜಮಾನರ ಹೆಸರು ಪ್ರಕಾಶ್ ರಾವ್ ( ಹೆಸರು ಬದಲಿಸಿದೆ ), ಅವರು ಉದ್ಯಮಿಯಾಗಿದ್ದರು ಅನೇಕ ಊರುಗಳಲ್ಲಿ ಒಂದೆರಡು ವರ್ಷ ಉಳಿದುಕೊಳ್ಳುತ್ತಿದ್ದರು ಹಾಗೂ ಆಸ್ತಿಯನ್ನೂ ಅದೇ ಊರಿನಲ್ಲಿ ಮಾಡುತ್ತಿದ್ದರು, ಎಲ್ಲಾ ಊರುಗಳಲ್ಲೂ ನೆಲೆಸುವಾಗ ತಮ್ಮ ಕುಟುಂಬವನ್ನೂ ತನ್ನೊಂದಿಗೆ ಕರೆದುಕೊಂಡು ಹೋಗಿ ನೆಲೆಸುತ್ತಿದ್ದರು, ಸುಂದರವಾದ ಕುಟುಂಬ, ಇಬ್ಬರು ಗಂಡು ಮಕ್ಕಳು ಮತ್ತು ಓರ್ವ ಹೆಣ್ಣು ಮಗಳು ಹೊಂದಿದ್ದರು, ಕಟ್ಟಕಡೆಯದಾಗಿ ಮಂಗಳೂರಿಗೆ ( ಹೆಸರು ಬದಲಿಸಿದೆ ) ಬಂದು ನೆಲೆಸಿದರು, ಮಕ್ಕಳೆಲ್ಲಾ ಯೌವನದಲ್ಲಿದ್ದರು, ಹೇಗೋ ಹೆಣ್ಣು ಮಗಳ ಮದುವೆ ಆಯಿತು, ಪ್ರಕಾಶ್ ರಾವ್ ರವರಿಗೆ ಹೋದ ಕಡೆಯಲ್ಲೆಲ್ಲಾ ಚಿನ್ನ ಖರೀದಿಸುವ ಉತ್ಸಾಹ ಹಾಗೂ ಖರೀದಿ ಮಾಡಿದ ಚಿನ್ನವನ್ನು ಅನೇಕ ಸೊಸೈಟಿ ಬ್ಯಾಂಕ್ ಗಳ ಲಾಕರ್ ಗಳಲ್ಲಿ ಇಡುತ್ತಿದ್ದರು ಆದರೆ ಈ ವಿಷಯಗಳನ್ನು ತನ್ನ ಕುಟುಂಬದೊಂದಿಗೆ ಹಂಚಿಕೊಳ್ಳುತ್ತಿರಲಿಲ್ಲ ಯಾವ ದಾಖಲೆಗಳನ್ನೂ ಮನೆಯಲ್ಲಿ ಇಡುತ್ತಿರಲಿಲ್ಲ, ಎಲ್ಲವೂ ಅಂದರೆ ಪಾಸ್ ಬುಕ್, ಆಸ್ತಿ ಪತ್ರಗಳು ಮತ್ತು ಇತರೆ ದಾಖಲೆಗಳನ್ನೂ ಸಹ ಸೊಸೈಟಿ ಬ್ಯಾಂಕ್ ಗಳ ಲಾಖರ್ ಗಳಲ್ಲಿ ಇಡುತ್ತಿದ್ದರು, ತನ್ನ ಹೆಂಡತಿ ಮಕ್ಕಳ ಮೇಲೆ ಅಗಾಧವಾದ ಪ್ರೀತಿ ಇತ್ತು ಆದರೆ ಹಣಕಾಸಿನ ವಿಷಯವನ್ನು ಗೌಪ್ಯವಾಗಿ ಇಡುತ್ತಿದ್ದರು ಹೀಗೆ ಎಲ್ಲವೂ ಚೆನ್ನಾಗಿಯೇ ಇತ್ತು ಒಂದು ದಿನ ತನ್ನ ಕಿರಿಯ ಮಗನ ಪ್ರೇಮ ವಿಚಾರವೂ ತಿಳಿಯಿತು ಇದರಿಂದ ಪ್ರಕಾಶ್ ರಾವ್ ತುಂಬಾ ನೊಂದಿದ್ದರು, ಒಂದು ದಿನ ಆ ಕಿರಿಯ ಮಗ ಪ್ರೀತಿಸುತ್ತಿದ್ದ ಯುವತಿಯನ್ನು ಮದುವೆಯಾಗಿ ಕರೆದುಕೊಂಡು ಬಂದನು ಆಗಲೂ ಸ್ವಲ್ಪವೂ ಬೇಸರ ಮಾಡಿಕೊಳ್ಳದೆ ಅವರನ್ನು ಸ್ವಾಗತಿಸಿದರು, ಎಲ್ಲಾ ಸರಿಹೋಯಿತು ಎನ್ನುವಾಗ ಪ್ರಕಾಶ್ ರಾವ್ ರವರಿಗೆ ಎದೆ ನೋವು ಕಾಣಿಸಿಕೊಂಡಿತು ಕೂಡಲೇ ಆಸ್ಪತ್ರೆಗೆ ಕರೆದುಕೊಂಡು ಹೋದರು ಆದರೂ ಅವರ ಪ್ರಾಣ ಉಳಿಯಲಿಲ್ಲ ನಿಧನರಾದರು. ಹೆಂಡತಿ ಮಕ್ಕಳಿಗೆ ಹಲವು ಲಾಕರ್ ಗಳನ್ನೂ ಪತ್ತೆ ಹಚ್ಚಲು ಸಾಧ್ಯವಾಗಲಿಲ್ಲ ಇಂದಿಗೂ ಪ್ರಕಾಶ್ ರಾವ್ ರವರು ಸಂಪಾದನೆ ಮಾಡಿ ಖರೀದಿಸಿದ ಚಿನ್ನದ ಒಡವೆಗಳು ಇಟ್ಟಿದ್ದ ಲಾಕರ್ ಗಳು ಪತ್ತೆ ಮಾಡಲು ಸಾಧ್ಯವಾಗಲಿಲ್ಲ.



ಕಿರಣ್.ಕೆ.ಟಿ ವಕೀಲರು
ಅಂಕಣ
ನಿಮ್ಮ ಬದುಕಿಗೆ ಕಾನೂನು ಕವಚ

ಇತ್ತೀಚಿಗೆ ನನಗೆ ಪರಿಚಯವಿದ್ದ ವ್ಯಕ್ತಿ ಒಬ್ಬರು ಹೇಳಿದ ಒಂದು ಘಟನೆ, ತನ್ನ ತಂದೆಯವರು ನಿಧನರಾಗಿ ಸುಮಾರು ಒಂದು ವರ್ಷ ಕಳೆದ ನಂತರ ಅವರು ನೀಡಿದ್ದ ಸಾಲದ ವಿಷಯಗಳು ತಿಳಿಯುತ್ತದೆ ಹಾಗೂ ಸಾಲದ ಆಧಾರವಾಗಿ ಪಡೆಯಲಾಗಿದ್ದ ಮುಂಗಡ ಚೆಕ್ ಸಿಕ್ಕಿರುತ್ತವೆ, ಮುಂಗಡ ಚೆಕ್ ಭರ್ತಿ ಆಗಿದ್ದ ಕಾರಣ ಅವುಗಳು ವಾಯಿದೆ ಕಳೆದುಕೊಂಡಿವೆ ಆದ ಕಾರಣ ಸಾಲ ಮರುಪಾವತಿಗಾಗಿ ಚೆಕ್ ಬಳಸಲು ಆಗುವುದಿಲ್ಲ ಹಾಗೂ ಕಾನೂನು ಪ್ರಕ್ರಿಯೆ ಮಾಡಿ ಹಣ ವಸೂಲು ಮಾಡಲು ಸಾಧ್ಯವಾಗುವುದಿಲ್ಲ ಹೀಗೆ ಈ ಕುಟುಂಬದವರು ಸಾಲ ಮರುಪಾವತಿ ಮಾಡಿಕೊಳ್ಳಲಾಗದೆ ನಷ್ಟ ಅನುಭವಿಸಿದರು.

ಇದು ಕೇವಲ ಎರಡು ಉದಾಹರಣೆ ಅಷ್ಟೇ, ಇಂಥ ಘಟನೆಗಳು ಕಣ್ಣಿಗೆ ಕಾಣದ ಹಾಗೆ ಎಷ್ಟೋ ನಡೆದು ಹೋಗಿವೆ, ಆದ ಕಾರಣ ತಾನು ಎಷ್ಟೇ ಸಂಪಾದನೆ ಮಾಡಿದರೂ, ಎಲ್ಲೇ ಹಣ ಹೂಡಿಕೆ ಮಾಡಿದರೂ ಹಾಗೂ ಬ್ಯಾಂಕ್ ಲಾಕರ್ ನ ವಿಷಯಗಳನ್ನು ತನ್ನ ಕುಟುಂಬದೊಂದಿಗೆ ಹಂಚಿಕೊಳ್ಳುವುದು ಒಳ್ಳೆಯದು ಅಥವಾ ಯಾವುದಾದರೂ ರೀತಿಯಲ್ಲಿ ತಾನು ಇಲ್ಲವಾದ ಸಮಯದಲ್ಲಿ ಎಲ್ಲಾ ಮಾಹಿತಿಯು ಕುಟುಂಬದವರಿಗೆ ಸಿಗುವಂತೆ ಮಾಡುವುದು ಒಳಿತು.

## ಗೋಪಿನಾಥಂ ರಸ್ತೆಯ ಮರು ಡಾಂಬರೀಕರಣಕ್ಕೆ ಶಾಸಕ ಎಂ.ಆರ್.ಮಂಜುನಾಥ್ ರಿಂದ ಭೂಮಿ ಪೂಜೆ



ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಗೋಪಿನಾಥಂ ಗಡಿ ಗ್ರಾಮದ 4.2 ಕಿಲೋಮೀಟರ್ ರಸ್ತೆಯ ಮರು ಡಾಂಬರೀಕರಣಕ್ಕೆ ರಾಜ್ಯ ಹೆದ್ದಾರಿ ನಿರ್ವಹಣೆ ಯೋಜನೆ ಅಡಿಯಲ್ಲಿ ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಕಾಮಗಾರಿ ಪ್ರಾರಂಭಿಸಲು ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಶಾಸಕರು ,

ಹಲವಾರು ವರ್ಷಗಳಿಂದ ರಸ್ತೆ ಅಭಿವೃದ್ಧಿಯಾಗದೆ ಗಡಿ ಗ್ರಾಮವು ಬಹು ಬೇಡಿಕೆಯ ಗ್ರಾಮಸ್ಥರ ಒತ್ತಾಯದ ಮೇರೆಗೆ ಒಂದು ಕೋಟಿ ವೆಚ್ಚದಲ್ಲಿ ಮೊದಲ ಹಂತದಲ್ಲಿ ರಸ್ತೆಯ ಮರು ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಲಾಗಿದೆ ಉಳಿದಿರುವ ಕಾಮಗಾರಿಗಳನ್ನು ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ತಂದು ಗಡಿ ಗ್ರಾಮದ ವಿವಿಧ ಗ್ರಾಮಗಳಿಗೂ ವಿಸ್ತರಿಸಿ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದು ತಿಳಿಸಿದರು.

ನಂತರ ಗೋಪಿನಾಥಂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವಂತಹ ಕೆರೆ, ಕಟ್ಟೆ ಕಾಲುವೆ, ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲನೆ ನಡೆಸಿದರು. ಇದಲ್ಲದೆ ಗೋಪಿನಾಥಂ ಗ್ರಾಮದಲ್ಲಿ ನೂತನ ಆಸ್ಪತ್ರೆ ಸ್ಥಾಪನೆ ಸರ್ವೇ ನಂ 51/1 ರಲ್ಲಿ ಒಟ್ಟು 5.50 ಎಕರೆ ಇದ್ದು ಇದರಲ್ಲಿ ಸುಮಾರು 2ಎಕರೆ ಜಾಗದಲ್ಲಿ ಅಸ್ಪತ್ರೆ ಸ್ಥಾಪನೆ ಮಾಡಲು ಸ್ಥಳ ನಿಗದಿ ಮಾಡಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಸಣ್ಣ ನೀರಾವರಿ ಇಲಾಖೆ ಏಇಇ ಅಭಿಲಾಷ್, ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾದ ನಾಗರಾಜ್ ರೆಡ್ಡಿ, ಸದಸ್ಯರಾದ ಸೋಮುನಾಯಕ, ಮಾಜಿ ಗ್ರಾಂ.ಪಂ. ಅಧ್ಯಕ್ಷರಾದ ಗೋವಿಂದರಾಜು, ಮಾಜಿ ತಾಲ್ಲೂಕು ಪಂಚಾಯಿತಿ ಸದಸ್ಯರಾದ ರಾಜ, ಗ್ರಾಂ.ಪಂ. ಅಭಿವೃದ್ಧಿ ಅಧಿಕಾರಿ ರಾಜ್ ಕುಮಾರ್, ಮುಖಂಡರುಗಳಾದ ಜಯರಾಮ್ ರೆಡ್ಡಿ, ಪೆರುಮಾಳ್, ಡಿಕೆ ರಾಜು, ಡಿ ಆರ್ ಮಾದೇಶ್, ಜಯರಾಮು, ವೆಂಕಟೇಶ್, ಸುರೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

**ವರದಿ :ಉಸ್ಮಾನ್ ಖಾನ್**


## ಕರುನಾಡ ಕಂದ ವರದಿಯ ಫಲಶೃತಿ

## ಎಚ್ಚೆತ್ತ ಜೆಸ್ಕಾಂ ,ಗ್ರಾಮ ಪಂಚಾಯತಿ :ಸಾರ್ವಜನಿಕರ ಮೆಚ್ಚುಗೆ




ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕಿನ ಟಿ ಕಲ್ಲಹಳ್ಳಿ ಗ್ರಾಮದ ಒಂದನೇ ವಾರ್ಡಿನಲ್ಲಿ ವಿದ್ಯುತ್ ಕಂಬಗಳ ಬದಲಾವಣೆ ಕುರಿತು “ವಿದ್ಯುತ್ ಇಲಾಖೆಯ ನಿರ್ಲಕ್ಷ್ಯತನ” ತಲೆಬರಹದ ಅಡಿಯಲ್ಲಿ ಕರುನಾಡ ಕಂದ. ಕಾಮ್ ನಲ್ಲಿ 16-ಏಪ್ರಿಲ್ -2025 ರಂದು ಪ್ರಕಟವಾದ ವರದಿಯ ಫಲ ಶ್ರುತಿಯಾಗಿ ಮೇ 10.2025 ರಂದು ಜೆಸ್ಕಾಂ ಇಲಾಖೆಯವರು ಗಮನಹರಿಸಿ ಮನೆಯ ಮೇಲೆ ಹಾದು ಹೋಗಿರುವ ವಿದ್ಯುತ್ ವೈರುಗಳನ್ನು ಹಾಗೂ ಜೋತು ಬಿದ್ದಿರುವ ವೈರುಗಳನ್ನು ಸರಿಪಡಿಸಿ ಹಾಗೂ ಮನೆಚಾವಣಿ ಮೇಲೆ ವಿದ್ಯುತ್ ವೈರು ಎರಡು ಮೂರು ಬಾರಿ ವಿದ್ಯುತ್ ಮನೆಯ ಮೇಲೆ ಬಿದ್ದಿದ್ದರೂ ಗಮನಹರಿಸಿದ ಜೆಸ್ಕಾಂ ಇಲಾಖೆಯವರು ಇಂದು ಅಲ್ಲಿನ ಕಂಬವನ್ನು ಬದಲಾಯಿಸಿ ಹಾಗೂ ಜೋತು ಬಿದ್ದಿರುವ ವೈರುಗಳನ್ನು ಬದಲಾಯಿಸಿದ್ದಾರೆ ಹಾಗೂ ಅಲ್ಲಿನ ಮನೆಯ ಛಾವಣಿ ಮೇಲೆ ಒಂದು ಕೋಲನ್ನು ನೆಟ್ಟು ಅಡ್ಡಲಾಗಿ ವಿದ್ಯುತ್ ಪರಿಕರಕಗಳನ್ನು ತಾತ್ಕಾಲಿಕವಾಗಿ ಮೇಲೆ ಎತ್ತಿ ಕಟ್ಟಿಕೊಂಡಿದ್ದಾರೆ ಆ ಪರಿಕರಗಳನ್ನು ತೆಗೆದು ಕಂಬವನ್ನು ಬೇರೆ ಕಡೆ ಸ್ಥಳಾಂತರಿಸಿದ್ದಾರೆ, ಅಪಾಯವನ್ನು ತಪ್ಪಿಸಿದ್ದರಿಂದ ಗ್ರಾಮದ ಜನರು ಜೆಸ್ಕಾಂ ಇಲಾಖೆಗೆ ಹಾಗೂ ಗ್ರಾಮ ಪಂಚಾಯತಿ ಅಧಿಕಾರಿಗಳಿಗೆ ಪ್ರಶಂಸೆಯನ್ನೂ ವ್ಯಕ್ತಪಡಿಸಿದ್ದಾರೆ.

**ವರದಿ : ಗುರುರಾಜ್ ಎಲ್, ಕಲ್ಲಹಳ್ಳಿ ಟಿ**



ಕರುನಾಡ ಕಂದ
ಸಂಪುಟ 04 । ಸಂಚಿಕೆ 14
ದಿನಾಂಕ: 16-05-2025 ಪುಟಗಳು:16

# ಆಪರೇಷನ್ ಸಿಂಧೂರ : ನೊಂದ ಹೆಣ್ಣುಮಕ್ಕಳಿಗೆ ಸಿಕ್ಕ ಗೌರವ




ಭಯೋತ್ಪಾದನೆ ಎಂಬುದು ಜಗತ್ತಿಗೆ ಕಂಟಕ, ಇದನ್ನು ಮಟ್ಟ ಹಾಕಲು ಎಲ್ಲಾ ರಾಷ್ಟ್ರಗಳು ಒಗ್ಗಟ್ಟಾಗಿ ಶ್ರಮ ವಹಿಸಬೇಕು. ಪಹಲ್ಗಾಮ್ ನಲ್ಲಿನ ಉಗ್ರರ ದಾಳಿಗೆ ನಮ್ಮ ಹೆಮ್ಮೆಯ ಭಾರತೀಯ ಸೇನೆ ತಕ್ಕ ಉತ್ತರ ನೀಡಿರುವುದು ಹೆಮ್ಮೆಯ ವಿಷಯ, ಒಟ್ಟಾರೆಯಾಗಿ ಆಪರೇಷನ್ ಸಿಂಧೂರ ಪಹಲ್ಗಾಮ್ ನಲ್ಲಿನ ಉಗ್ರರ ದಾಳಿಗೆ ಬಲಿಯಾದವರ ಮಡದಿಯರಿಗೆ ನೀಡಿದ ಗೌರವವಾಗಿದೆ. ಪಾಕಿಸ್ತಾನ ಹಾರಿಸಿದ ನೂರಾರು ಡ್ರೋಣ್ ಗಳನ್ನು ಹೊಡೆದುರುಳಿಸಿದ ನಮ್ಮ ವಾಯು ರಕ್ಷಣಾ ವ್ಯವಸ್ಥೆ ಮತ್ತು ವಾಯು ದಾಳಿಯನ್ನು ತಡೆಗಟ್ಟುವಲ್ಲಿ ಯಶಸ್ವಿ ಆದ ಎಸ್ – 400 ಸುದರ್ಶನ ಚಕ್ರಗಳು ದೇಶಾದ್ಯಂತ ಹೆಚ್ಚಿನ ಗೌರವಕ್ಕೆ ಪಾತ್ರವಾಗಿವೆ. ಇನ್ನು ನಮ್ಮ ಹೆಮ್ಮೆಯ ಸೈನಿಕರ ಶೌರ್ಯ ಪರಾಕ್ರಮಕ್ಕೆ ಭಾರತದಾದ್ಯಂತ ಜೈಕಾರ ಮೊಳಗಿದೆ. ಈ ಆಪರೇಷನ್ ಸಿಂಧೂರದಲ್ಲಿ ಭಾಗಿಯಾದ ಆಕಾಶ್ ಕ್ಷಿಪಣಿಯೂ ಜನರ ಮನೆಮಾತಾಗಿದೆ.

**ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದ ಮೋದಿ**

ಪಾಕಿಸ್ತಾನದಿಂದ ಭಾರತದ ಮೇಲೆ ಯಾವುದೇ ಭಯೋತ್ಪಾದಕ ದಾಳಿಯಾದಲ್ಲಿ ಭಾರತ ಸರಿಯಾದ ಪ್ರತಿಕ್ರಿಯೆ ನೀಡಲಿದೆ, ಪಾಕಿಸ್ತಾನವನ್ನು ನಿರ್ನಾಮ ಮಾಡಲಾಗುವುದು ಎಂಬ ಖಡಕ್ ಎಚ್ಚರಿಕೆಯನ್ನು ಮೋದಿ ನೀಡಿದ್ದಾರೆ, ವಾಯು ನೆಲೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮಾತನಾಡಿದ ಅವರು ನಿಮ್ಮ ನೆಲದಿಂದ ( ಪಾಕಿಸ್ತಾನದಿಂದ ) ಭಯೋತ್ಪಾದನೆ ಮುಂದುವರೆದರೆ ನಿಮ್ಮನ್ನೇ ( ಪಾಕಿಸ್ಥಾನವನ್ನೇ ) ನಿರ್ನಾಮ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

**ಪಾಕಿಸ್ತಾನದ ಸುಳ್ಳನ್ನು ಬಯಲು ಮಾಡಿದ ಸೇನೆಯ ಅಧಿಕಾರಿಗಳು**

ಪಾಕಿಸ್ತಾನವು ಭಾರತದ ವಾಯು ನೆಲೆಗಳ ಮೇಲೆ ದಾಳಿ ಮಾಡಲಾಗಿದೆ ಎಂದು ಮತ್ತು ಸುದರ್ಶನ ಎಸ್ – 400 ಗೆ ಹಾನಿ ಉಂಟುಮಾಡಲಾಗಿದೆ ಎಂದು ಜಗತ್ತಿನ ಮುಂದೆ ಸುಳ್ಳು ಹೇಳಿತ್ತು ಇದಕ್ಕೆ ಪ್ರತಿಯಾಗಿ ಭಾರತದ ಸೇನೆಯ ಅಧಿಕಾರಿಗಳು ಸಾಕ್ಷಿ ಸಮೇತವಾಗಿ ಪಾಕಿಸ್ತಾನದ ಸುಳ್ಳನ್ನು ಬಯಲು ಮಾಡಿದ್ದಾರೆ ಹಾಗೂ ಸುದರ್ಶನ ಎಸ್ – 400 ಗೆ ಯಾವುದೇ ಹಾನಿಯಾಗಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ ಹಾಗೂ ಭಾರತದ ಪ್ರಧಾನಿ ಮೋದಿ ರವರು ಪಾಕಿಸ್ತಾನದ ಸುಳ್ಳನ್ನು ಬಯಲು ಮಾಡಿದ್ದಾರೆ. ನಮ್ಮ ಭಾರತದ ಹಿಂದೂ ಹೆಣ್ಣುಮಕ್ಕಳ ಕುಂಕುಮ ಕಸಿದ ಪಾಕಿಸ್ತಾನದ ಉಗ್ರರ ದಾಳಿಗೆ ಪ್ರತಿಯಾಗಿ ಭಾರತದ ಆಪರೇಷನ್ ಸಿಂಧೂರ ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸಿದೆ ಹಾಗೆಯೇ ಆರ್ಥಿಕ ಬಿಕ್ಕಟ್ಟು ಕೂಡಾ ಪಾಕಿಸ್ತಾನಕ್ಕೆ ಸರಿಯಾದ ಸಂಕಷ್ಟಕ್ಕೆ ಸಿಲುಕುವಂತೆ ಮಾಡಿ ಸಾಲಕ್ಕಾಗಿ ವಿಶ್ವದ ಮುಂದೆ ಕೈಚಾಚುವಂತಾಗಿದೆ.

**ಪಿಓಕೆ ಕಳೆದುಕೊಳ್ಳುವ ಭೀತಿಯಲ್ಲಿದೆ ಪಾಕಿಸ್ತಾನ**

ಆಪರೇಷನ್ ಸಿಂಧೂರದ ಬಳಿಕ, ಭಾರತ ಪಿಓಕೆ ಅಂದರೆ ಪಾಕ್ ಆಕ್ರಮಿತ ಕಾಶ್ಮೀರವನ್ನು ಪಾಕ್ ತೊರೆಯುವಂತೆ ಸೂಚಿಸುವ ಸಾಧ್ಯತೆ ಹೆಚ್ಚಿದ್ದು ಪಿಓಕೆ ಕಳೆದುಕೊಳ್ಳುವ ಭೀತಿ ಪಾಕಿಸ್ತಾನಕ್ಕೆ ಎದುರಾಗಿದೆ ಮತ್ತು ಬಿ.ಎಲ್.ಎ ( ಬಲೂಚ್ ಲಿಬರೇಶನ್ ಆರ್ಮಿ ) ಬಲೂಚಿಸ್ತಾನ್ ಆರ್ಮಿ, ಬಲೂಚಿಸ್ಥಾನಕ್ಕೆ ಸ್ವಾತಂತ್ರ್ಯ ಘೋಷಿಸಿದೆ ಹಾಗೂ ಬಲೂಚಿಸ್ಥಾನದ ಧ್ವಜವನ್ನು ಸರ್ಕಾರಿ ಕಛೇರಿಗಳ ಮೇಲೆ ಹಾರಿಸಲಾಗಿದೆ ಹಾಗೂ ಪಾಕಿಸ್ತಾನದ ಅಧಿಕಾರಿಗಳನ್ನು ಬಲೂಚಿಸ್ಥಾನವನ್ನು ತೊರೆಯಲು ಸೂಚಿಸಿದೆ. ಒಟ್ಟಾರೆಯಾಗಿ ಪಾಕಿಸ್ತಾನದ ಭಯೋತ್ಪಾದನಾ ಕೃತ್ಯದಿಂದ ತನಗೆ ತಾನೇ ಮುಳ್ಳಾಗತೊಡಗಿದೆ ಮತ್ತು ಪಾಕಿಸ್ತಾನ ನಾಲ್ಕು ಭಾಗಗಳಾಗಿ ವಿಭಜನೆ ಆಗುವ ಸಾಧ್ಯತೆ ಅಂತೂ ಇದೆ.

**“ ಆಪರೇಷನ್ ಸಿಂಧೂರ ಯಶಸ್ಸಿಗೆ ಕಾರಣವಾದ ಭಾರತದ ಸೇನೆ ಮತ್ತು ನಮ್ಮ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಯವರಿಗೆ ಇಡೀ ದೇಶವೇ ಗೌರವ ಸೂಚಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಹಾಗೂ ಭಯೋತ್ಪದನೆ ವಿರುದ್ಧ ಭಾರತದ ದಿಟ್ಟ ಹೆಜ್ಜೆ ಭಯೋತ್ಪಧನೆ ವಿರುದ್ಧದ ಹೋರಾಟಕ್ಕೆ ಜಗತ್ತಿಗೆ ಒಂದು ಮಾರ್ಗ ಸೂಚಿಯಾಗಿದೆ ”.**



**ಕಿರಣ್.ಕೆ.ಟಿ**
**ವಕೀಲರು,**
**ತುಮಕೂರು**

# ಮರ್ಕಟಗಳ ಕಾಟ, ಅಧಿಕಾರಿಗಳ ಜೂಟಾಟ ರೈತರಿಗೆ ಪ್ರಾಣ ಸಂಕಟ ...!?

**ಬೀದರ್ / ಬಸವಕಲ್ಯಾಣ :** ಮುಡಬಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಬಗದುರಿ ಗ್ರಾಮದಲ್ಲಿ ರೈತರು ಬೆಳೆದ ಬೆಳೆಗಳನ್ನು ಮಂಗಗಳು ಸರ್ವನಾಶ ಮಾಡುತ್ತಿವೆ, ಸದ್ಯ ಗ್ರಾಮದಲ್ಲಿ ರೈತರು ತಮ್ಮ ತಮ್ಮ ಜಮೀನುಗಳಲ್ಲಿ ತಮ್ಮ ಉಪ ಜೀವನಕ್ಕಾಗಿ ಕೆಲವರು ಗೋಧಿ, ಖಿಪಲಿ, ಜೋಳ, ಶೇಂಗಾ, ಕಲ್ಲಂಗಡಿ ಸೇರಿದಂತೆ ಹತ್ತು ಹಲವು ತರಕಾರಿ ಬೆಳೆಗಳನ್ನು ಬೆಳೆದಿರುತ್ತಾರೆ. ಆದರೆ ರೈತರು ಬೆಳೆದ ಬೆಳೆ ಅವರುಗಳ ಕೈಗೆ ಸಿಗದಂತಾಗಿದೆ, ಏಕೆಂದರೆ ಸುಮಾರು 500 ರಿಂದ 1000 ಸಾವಿರ ಮಂಗಗಳು ತಲಾ 40 ರಿಂದ 50ರ ಗುಂಪುಗಳನ್ನಾಗಿ ಮಾಡಿಕೊಂಡು ರೈತರ ಜಮೀನುಗಳಿಗೆ ನುಗ್ಗಿ ಬೆಳೆ ಸರ್ವನಾಶ ಮಾಡುತ್ತಿರುವುದನ್ನು ಕಂಡು ರೈತರು ಬೇಸತ್ತು ಬಸವಕಲ್ಯಾಣ ನಗರದ ಉಪ ವಲಯ ಅರಣ್ಯಾಧಿಕಾರಿಗಳ ಕಛೇರಿಗೆ ಭೇಟಿ ಮಾಡಿ ಪತ್ರದ ಮುಖಾಂತರ ತಮ್ಮ ಅಳಲು ತೋಡಿಕೊಂಡಿದ್ದರು. ತದ ನಂತರ ಪುನಃ ಎರಡು ತಿಂಗಳಾದ ಮೇಲೆ ಮತ್ತೆ ಸುಮಾರು 40–50 ಜನ ರೈತರು ಬಸವಕಲ್ಯಾಣ ನಗರದ ಅರಣ್ಯಾಧಿಕಾರಿಗಳ ಕಛೇರಿಗೆ ಭೇಟಿ ಕೊಟ್ಟು ನಮ್ಮ ಸಮಸ್ಯೆ ಕುರಿತು ನೀಡಿದ ಮನವಿ ಏನಾಯಿತೆಂದು ಕೇಳಿದರೆ, ಅಲ್ಲಿನ ಅರಣ್ಯಾಧಿಕಾರಿಗಳು ಹೇಳುವುದೇನೆಂದರೆ, ತಮ್ಮ ಸಂಬಂಧಪಟ್ಟ ಗ್ರಾಮ ಪಂಚಾಯತಿ ಕಛೇರಿಗೆ ಸೂಚಿಸಿದ್ದೇವೆ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಂದ ನಮಗೆ ಪತ್ರ ಬರಬೇಕು ಪತ್ರದಲ್ಲಿ ಮಂಗಗಳನ್ನು ಹಿಡಿಯುವವರನ್ನು ಕರೆಯಿಸಿ ನಾವು ನಮ್ಮ ಪಂಚಾಯತಿ ಕಡೆಯಿಂದ ಹಣ ಕೊಡಿಸುತ್ತೇವೆಂದು ಬರೆಸಿಕೊಂಡು ಬನ್ನಿ ‘ ನಾವು ಅಷ್ಟೊಂದು ಮಂಗಗಳನ್ನು ಹಿಡಿಯಲು ಸಾಧ್ಯವಿಲ್ಲ, ನಾವು ನಿಮಗೆ ಮಂಗಗಳು ಹಿಡಿಯುವವರ ದೂರವಾಣಿ ಸಂಖ್ಯೆ ಕೊಡುತ್ತೇವೆ ನೀವೇ ಅವರೊಂದಿಗೆ ಮಾತನಾಡಿ ಕರೆಯಿಸಿಕೊಳ್ಳಬೇಕು, ಅದಲ್ಲದೇ ಅವರು ಬಂದ ಮೇಲೆ ಅವರ ಖರ್ಚು ವೆಚ್ಚ





ನೀವೇ ಭರಿಸಬೇಕು’ ಎಂದು ಅರಣ್ಯಾಧಿಕಾರಿಗಳು ರೈತರಿಗೆ ಉಚಿತ ಸಲಹೆಗಳನ್ನು ಹೇಳಿದಾಗ, ರೈತರು ಪುನಃ ಗ್ರಾಮ ಪಂಚಾಯತಿ ಕಛೇರಿಗೆ ಹೋಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಭೇಟಿಯಾಗಿ ಅಲ್ಲೂ ಸಹ ಪತ್ರ ಕೊಟ್ಟರು ಅವರುಗಳು ಸಹ ನಮ್ಮ ಕಡೆಯಿಂದ ಯಾವುದೇ ಅನುದಾನ ಇರುವುದಿಲ್ಲ, ಇದು ನಮಗೆ ಸಂಬಂಧ ಪಟ್ಟ ವಿಷಯ ಅಲ್ಲ ಎಂದು ಅಲ್ಲಿನ ಗ್ರಾಮ ಪಂಚಾಯತಿ ಅಧಿಕಾರಿಗಳು ಹೇಳಿದರು, ನಂತರ ಬಸವಕಲ್ಯಾಣ ತಾಲೂಕು ಕಾರ್ಯನಿವಾಹಕ ಅಧಿಕಾರಿಗಳು ಸಹ, ಇದು ನಮಗೆ ಸಂಬಂಧಪಟ್ಟಿದ್ದಲ್ಲ ಎಂದು ಹಾರಿಕೆಯ ಉತ್ತರ ಕೊಟ್ಟಿರುತ್ತಾರೆ.

ಇಷ್ಟಾದ ನಂತರ ಗ್ರಾಮದ ರೈತರುಗಳು ಬೇಸತ್ತು ಏನೂ ದಿಕ್ಕು ತೋಚದೆ ತಾಲೂಕು ದಂಡಾಧಿಕಾರಿಗಳ ಬಳಿ ಹೋಗೋಣ ಅಲ್ಲಿ ನಮ್ಮ ರೈತರ ಕಷ್ಟಕ್ಕೆ ಪರಿಹಾರ ದೊರಕುತ್ತದೆಂದು ತಾಲೂಕಿನ ದಂಡಾಧಿಕಾರಿಗಳಿಗೆ ನಂಬಿ ಹೋದರು ಆದರೇ ಅಲ್ಲಿಯೂ ಸಹ ರೈತರಿಗೆ ಮೋಸವಾಗುತ್ತದೆ. ಹಿರಿಯರು ಹೇಳುವ ಗಾದೆ “ ನೆಚ್ಚಿದ ಎಮ್ಮೆ ಕೋಣ ಈಯಿತು “ ಎನ್ನುವ ಹಾಗಾಯಿತು ರೈತರ ಸಮಸ್ಯೆ, ಅಲ್ಲಿನ ದಂಡಾಧಿಕಾರಿಗಳು ಸಹ ಇದು ನಮಗೆ ಸಂಬಂಧಪಟ್ಟದ್ದಲ್ಲ ನೀವು ಬೀದರಿಗೆ ಹೋಗಿ ಅರಣ್ಯ ಸಚಿವರಿಗೆ ಭೇಟಿ ಮಾಡಿ ಎನ್ನುವುದರ ಮೂಲಕ ಮೆತ್ತಗೆ ಮಾತನಾಡಿ ರೈತರ ಕಣ್ಣೀರು ಒರೆಸಿದಂತೆ ಮಾಡಿ ಸಾಗ ಹಾಕಿದರು.

ಹೀಗೆ ಗ್ರಾಮದ ರೈತರುಗಳು ಸಂಬಂಧಪಟ್ಟ ಅಧಿಕಾರಿಗಳ ಬೇಜವಾಬ್ದಾರಿತನದಿಂದ ಬೇಸತ್ತು ದಾರಿ ತೋಚದೆ ಪರದಾಡುವಂತಾಗಿದೆ ಎಂದು ಸ್ಥಳೀಯ ರೈತರುಗಳಾದ ಶ್ರೀ ಸೂರ್ಯಕಾಂತ ಬಿರಾದಾರ, ಶ್ರೀ ಧನಶೆಟ್ಟಿ ರಾಜೋಳೆ, ಶ್ರೀ ಶಿವಾನಂದ ಬಿರಾದಾರ, ಶ್ರೀ ಶಂಕರ ರಾಜೋಳೆ, ಶ್ರೀ ಜಗದೇವ ಪಾಟೀಲ ಶ್ರೀ, ಸುದೇವ ಮಹಾಗಾಂವ, ಶ್ರೀ ಶಾಂತಕುಮಾರ ಸಿಂಗ್ರೆ, ಶ್ರೀ ಮಹಾರುದ್ರ ಬಿರಾದಾರ, ಶ್ರೀ ಪರಮೇಶ್ವರ ಬಿರಾದಾರ, ಶ್ರೀ ಚಂದ್ರಕಾಂತ ಸ್ವಾಮಿ, ಶ್ರೀ ರವಿ ಮೂಲಗೆ, ಶ್ರೀ ಸಂಜುಕುಮಾರ ಎಸ್. ಬಿರಾದಾರ, ಶ್ರೀ ಭೀಮ ಬಿರಾದಾರ, ಶ್ರೀ ಪ್ರಶಾಂತ ಬಿರಾದಾರ, ಚನ್ನವೀರ ಮಹಾಗಾಂವ, ಶರಣಬಸಪ್ಪ ಬಿರಾದಾರ, ಗ್ರಾಮ ಪಂಚಾಯತ ಸದಸ್ಯರಾದ ಶ್ರೀ ವೆಂಕಟರಾವ ಬಿರಾದಾರ ಹಾಗೂ ಭೀಮಶಾ ಮಂದಿರಕ ಸೇರಿದಂತೆ ಮತ್ತಿತರರು ಪತ್ರಿಕಾ ಪ್ರಕಟಣೆಯಲ್ಲಿ ತಮ್ಮ ಸಮಸ್ಯೆಯನ್ನು ಹಂಚಿಕೊಂಡಿದ್ದಾರೆ.

**ವರದಿ : ಶ್ರೀನಿವಾಸ ಬಿರಾದಾರ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 14
ದಿನಾಂಕ: 16-05-2025 ಪುಟಗಳು:16

# ಗಾಂಧಿ ಮತ್ತು ಅಂಬೇಡ್ಕರ್-ಜಿ.ಎಲ್.ನಾಗೇಶ್

'ಗಾಂಧೀಜಿ ತಾವು, ಮೇಲ್ಜಾತಿಯ ಶ್ರೀಮಂತ ಕುಟುಂಬದಲ್ಲಿ ಹುಟ್ಟಿದವರು, ಆದರೆ ತಾವು ಹೊಟ್ಟೆಗೆ ಬಟ್ಟೆಗೆ ಇಲ್ಲದವರ ತರಹ ಅರೆ ನಗ್ನರಾಗಿರ್ತೀರಲ್ಲ; ಯಾಕೆ?' ಎಂದು ಕೇಳಿದಕ್ಕೆ ಗಾಂಧೀಜಿ- 'ಹೌದು... ನಾನು ಮೇಲ್ಜಾತಿಯ ಶ್ರೀಮಂತ ಕುಟುಂಬದಲ್ಲಿ ಹುಟ್ಟಿದವನು. ನಾನು ಶ್ರೀಮಂತ ನಿಜ! ಆದರೆ ನನ್ನ ದೇಶದ ಕೋಟ್ಯಾಂತರ ದೀನ ದಲಿತ ಜನಗಳು ಹೊಟ್ಟೆಗೆ ಬಟ್ಟೆಗೆ ಇಲ್ಲದೆ ನರಳಾಡುತ್ತಿರುವುದನ್ನು ಕಂಡು ನನ್ನ ಶ್ರೀಮಂತಿಕೆಯ ಉಡುಗೆ ತೊಡುಗೆ ಎಲ್ಲವನ್ನೂ ತೊರೆದು ಈಗ ನಾನು ಈ ರೀತಿ ಇರಲು ನಿರ್ಧರಿಸಿದ್ದೇನೆ' ಎಂದು ಹೇಳಿದರು ಗಾಂಧೀಜಿ. ಇದು... ಗಾಂಧಿವಾದ!

'ಅಂಬೇಡ್ಕರ್... ತಮ್ಮ ಜನಗಳು ಹೊಟ್ಟೆಗೆ ಬಟ್ಟೆಗಿಲ್ಲದೆ ಪರದಾಡುತ್ತಿದ್ದಾರೆ, ಆದ-'ರೆ ತಾವು ಈ ರೀತಿ ಸೂಟು ಬೂಟು ಹಾಕೊಂಡು ದೊಡ್ಡ ಶ್ರೀಮಂತನಂತೆ ಇರ್ತೀರಾ...? 'ಎಂದು ಕೇಳಿದಕ್ಕೆ ಅಂಬೇಡ್ಕರ್- 'ದುಡಿದು ತಿನ್ನಲಾಗದ ದುಷ್ಟರು ಸೃಷ್ಟಿಸಿರುವ ಜಾತಿ ಧರ್ಮ ಮೇಲು ಕೀಳು ವರ್ಣ ಅಸ್ಪೃಶ್ಯತೆ... ಎಂಬ ಇತ್ಯಾದಿ ಅನಿಷ್ಟ ಅಜ್ಞಾನದ ಅಂಧಕಾರದಲ್ಲಿ ಮುಳುಗಿ ಹೋಗಿರುವ ನನ್ನ ಜನಗಳಿಗೆ ಹೊಟ್ಟೆಗೆ ತಿನ್ನಲು ಸರಿಯಾದ ಆಹಾರ ಇಲ್ಲ. ಕುಡಿಯಲು ನೀರಿಲ್ಲ. ತೊಡಲು ಬಟ್ಟೆ ಇಲ್ಲ. ಆದರೂ ಸಹ ನಾನು ಈ ರೀತಿ ಸೂಟು ಬೂಟು ಹಾಕಿಕೊಂಡು ಟ್ರಿಮ್ ಆಗಿ ಇರ್ತೇನೆ! ಇದು ಯಾಕೆ ಹೀಗೆ ಅಂತ ಗೊತ್ತಾ? ಹೊಟ್ಟೆಗೆ ಬಟ್ಟೆಗೆ ಸಿಗದೇ ಇದ್ದರೂ ಕಷ್ಟಪಟ್ಟು ಓದಿ ಜ್ಞಾನ ಸಂಪಾದಿಸಿ ನನ್ನ ಹಾಗೆ ನನ್ನವರು ಸಹ ಸೂಟು ಬೂಟು ಹಾಕೊಂಡು ಹೀರೋ ರೀತಿ ಬಾಳಿ ಬದುಕಲಿ; ನನ್ನ ಬದುಕೇ, ನನ್ನ ಜನಗಳಿಗೆ ರೋಲ್ ಮಾಡಲ್ ಆಗಲಿ ಎಂಬ ಉದ್ದೇಶದಿಂದ ನಾನು ಈ ರೀತಿ ಸೂಟು ಬೂಟು ಹಾಕೊಂಡು ಹೀರೋ ರೀತಿ ಮಿಂಚುತ್ತಿರುತ್ತೇನೆ'ಎಂದು ಅಂಬೇಡ್ಕರ್ ಹೇಳಿದರು... ಇದು ಅಂಬೇಡ್ಕರ್ ವಾದ.

ಬೆತ್ತಲೆ ಇರುವವರನ್ನು ಬೆತ್ತಲಾಗಿಯೇ ಇರಿ, ಬೆತ್ತಲಾಗಿರುವುದು ತಪ್ಪೇನಿಲ್ಲ ಎಂದು ಹೇಳುವುದು ಗಾಂಧೀವಾದವಾಗಿದೆ. ಅಜ್ಞಾನದ ಕಗ್ಗತ್ತಲೆಯಲ್ಲಿ ಮುಳುಗಿ ಬೆತ್ತಲಾಗಿರುವವರನ್ನು ಜ್ಞಾನವೆಂಬ ಬೆಳಕಿನತ್ತ ಕೊಂಡೊಯ್ದು ಸೂಟು ಬೂಟು ಹಾಕಿಕೊಂಡು ಹೀರೋ ರೀತಿ ಬಾಳಿ ಬದುಕುವುದು ಹೇಗೆ ಎಂದು ಕಲಿಸುವುದು ಅಂಬೇಡ್ಕರ್ ವಾದವಾಗಿದೆ ಇದುವೇ ಅಂಬೇಡ್ಕರ್ ಮತ್ತು ಗಾಂಧಿಗಿರುವ ವ್ಯತ್ಯಾಸವಾಗಿದೆ...!

**ನನ್ನ ದೃಷ್ಟಿಯಲ್ಲಿ ಗಾಂಧಿ...**

ಡಿಯರ್ ಫ್ರೆಂಡ್ಸ್ ಗಾಂಧಿ ಬಗ್ಗೆ ಯಾರಿಗೆ ತಾನೆ ಗೊತ್ತಿಲ್ಲ? ಎಲ್ಲರಿಗೂ ಗೊತ್ತಿದೆ. ಗಾಂಧಿ... ಈ ಗಾಂಧಿ ಅಂದರೆ ಯಾರು ಅಂತ ಕೇಳೀರಾ? ಇನ್ಯಾರು ಸ್ವಾಮಿ, ಅದೇ... ರಾಷ್ಟ್ರನಾಯಕ-ರಾಷ್ಟ್ರಪಿತ ಮಹಾತ್ಮಾ ಗಾಂಧಿ...

**ಗಾಂಧೀಜಿ!**

ಮಹಾತ್ಮ ಗಾಂಧಿ ಯಾರು ಎಂದು ಕೇಳಿದರೆ ಅಕ್ಷರ ಜ್ಞಾನವುಳ್ಳ ಪ್ರತಿಯೊಬ್ಬ ನಾಗರಿಕನೇಕೆ, ಹಳ್ಳಿಯಲ್ಲಿ ದನ ಮೇಯಿಸುವ ಗಮಾರ ಸಹ ಹೇಳುತ್ತಾನೆ-

'ಮಹಾತ್ಮ ಗಾಂಧಿ ಬಡವರ ಬಂಧು, ನಿಸ್ವಾರ್ಥ ಮನಸ್ಸಿನ ನಾಯಕ; ಪ್ರಪಂಚದ ಹಿತಚಿಂತಕ, ಸ್ವಾತಂತ್ರ ಹೋರಾಟಗಾರ, ಸ್ವಾತಂತ್ರ ಸಂಗ್ರಾಮದ ಹೀರೋ... ಇತ್ಯಾದಿ' ಎಂದು. ಹೌದು.. ಇದು ನಿಜ! ಆದರೆ ನನಗೊಂದು ಚಿಕ್ಕ ಡೌಟು...'ಹಾಂ.. ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಬಗ್ಗೆ ಡೌಟಾ? ಇವನಿಗೆ ತಲೆ ಕೆಟ್ಟಿಲ್ಲ ತಾನೇ!?' ಅಂದುಕೊಳ್ಳಬೇಡಿ. ನನ್ನ ತಲೆ ಸರಿಯಾಗಿಯೇ ಇದೆ. ಆದರೂ ಸಹ ಇಲ್ಲಿ ನನ್ನದೊಂದು ವಿಭಿನ್ನ ವಿಚಾರ. ಇದನ್ನು ಕೇಳಿ ನೀವು ವಿಚಿತ್ರ ಅಂದುಕೊಳ್ಳುತ್ತೀರೋ, ವಿಸ್ಮಯ ಪಟ್ಕಳ್ತೀರೋ... ನೀವೇನು ಅಂದುಕೊಳ್ಳುತ್ತೀರೊ ಅಂತ ನನಗೆ ಗೊತ್ತಿಲ್ಲ.

ಪ್ರಿಯ ಓದುಗ ಬಂಧುಗಳೇ, ಈಗ ನಾನು ಹೇಳಲಿರುವುದನ್ನು (ಓದಿ) ಕೇಳಿ ವಿಚಿತ್ರ ತಲೆಹರಟೆ ಅಂದುಕೊಳ್ಳದೆ ನೀವೂ ಸಹ ನನ್ನ ಹಾಗೆ ಸ್ವಲ್ಪ ಸಮಯ ವಿಭಿನ್ನವಾಗಿ ವಿಚಾರ ಮಾಡಿ ಸತ್ಯ ಕಂಡುಹಿಡಿಯಲು ಪ್ರಯತ್ನಿಸಿ; ಒಂದು ವೇಳೆ ಇಲ್ಲಿ ನಾನೇ ಎಲ್ಲಾದರೂ ಎಡವಟ್ಟು ಮಾಡಿಕೊಂಡು ಮಹಾತ್ಮಗಾಂಧಿ ಬಗ್ಗೆ ಅಪಾರ್ಥ ಮಾಡಿಕೊಂಡಿದ್ದರೆ ನನ್ನನ್ನು ಬುದ್ಧಿ ಹೇಳಿ ತಿದ್ದಲು ಪ್ರಯತ್ನಿಸಿ, ಇಲ್ಲ ನನಗೇಕೆ ಬೇಕು ಊರ ಉಸಾಬರಿ ಅಂದುಕೊಂಡು ಮರೆತುಬಿಡಿ. ನಾನು ಈ ಬಗ್ಗೆ ಕೇರ್ ಮಾಡಲ್ಲ. ಯಾಕೆ ಅಂದರೆ ನಾನೊಬ್ಬ ವಿಭಿನ್ನ ವಿಚಾರವಾದಿ!

**ಮಹಾತ್ಮಾ ಗಾಂಧಿ ಸ್ವಾತಂತ್ರ ಸಂಗ್ರಾಮದ ನಿಜವಾದ ರಿಯಲ್ ಹೀರೋನಾ?**

ಮಹಾತ್ಮ ಗಾಂಧಿ ನನ್ನ ದೃಷ್ಟಿಯಲ್ಲಿ ನಿಜವಾದ ಹೀರೋ ಅಲ್ಲ. ಆ್ಯಂಟಿ ಹೀರೋ ಅವನು! ಹೀರೋ ರೀತಿ ಮುಖವಾಡ ಧರಿಸಿದ ವಿಲನ್ ಅವನು!! ಒಂದು ವೇಳೆ ನಿಸ್ವಾರ್ಥ ಮನಸ್ಸಿನ ನಿಜವಾದ ರಾಷ್ಟ್ರ ನಾಯಕನಾಗಿದ್ದರೆ ನನ್ನ ದೃಷ್ಟಿಯಲ್ಲಿ ಗಾಂಧೀಜಿ ಸ್ವಾರ್ಥಿ ಆಗುತ್ತಿರಲಿಲ್ಲ... ಏನು ಮಾತು ಅಂತ ಆಡ್ತೀಯಾ ಈಡಿಯಟ್! ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಸ್ವಾರ್ಥಿನಾ? 'ಹೌದು... ಗಾಂಧಿ ನಿಸ್ವಾರ್ಥಿ ಅಲ್ಲ! ಗಾಂಧಿ ಸಹ ಕೆಲ ಸಂದರ್ಭಗಳಲ್ಲಿ ಸ್ವಾರ್ಥಿಯಾಗಿದ್ದರು. ಅದು ಹೇಗೆ ಅಂದರೆ... ನಮ್ಮ ದೇಶ ಸ್ವಾತಂತ್ರ್ಯಕ್ಕಾಗಿ ಗಾಂಧಿ ಒಬ್ಬರೇ ಹೋರಾಡಿಲ್ಲ. ಹಲವು ಜನ ದೇಶಾಭಿಮಾನಿಗಳು ನಮ್ಮ ದೇಶ ಸ್ವಾತಂತ್ರ್ಯಕ್ಕಾಗಿ ಪ್ರಾಣವನ್ನೇ ಮುಡುಪಾಗಿಟ್ಟು ರಕ್ತದ ಅಭಿಷೇಕ ಮಾಡಿ ನಮಗೆ ಸ್ವಾತಂತ್ರ್ಯ ತಂದುಕೊಟ್ಟವರಿದ್ದಾರೆ. ಆದರೆ ಇವತ್ತಿನ ಇತಿಹಾಸದಲ್ಲಿ ಮಹಾತ್ಮಗಾಂಧಿ ಅವರಂಥ ಕೇವಲ ಮಹಾ ಪುರುಷರ ಹೆಸರುಗಳು ಮಾತ್ರ ಇವೆ. ಇನ್ನುಳಿದ ವೀರ ಮಹಾಪುರುಷರ ಹೆಸರುಗಳು ಇತಿಹಾಸದಲ್ಲಿ ಯಾಕಿಲ್ಲ? ಸ್ವಾತಂತ್ರದ ಪೂರ್ವದಲ್ಲಿ ಗಾಂಧಿ ವೇಷ ಬೇರೆ ರೀತಿಯಾಗಿತ್ತು, ಸ್ವಾತಂತ್ರ ಸಂಗ್ರಾಮದ ಮುಂದಾಳತ್ವ ವಹಿಸಿಕೊಂಡಾಗ ಗೆಟಪ್ ಯಾಕೆ ಚೇಂಜ್ ಆಯಿತು?

ನಾವು ಭಾರತದ ಸ್ವಾತಂತ್ರ ಹೋರಾಟಗಾರರು ನಾವೆಲ್ಲರೂ ಒಂದೇ, ನಮ್ಮೆಲ್ಲರ ಗುರಿ ಒಂದೇ, ಅದಕ್ಕಾಗಿ ನಾವೆಲ್ಲರೂ ಒಂದೇ ರೀತಿಯಾದ ಸಮವಸ್ತ್ರ ಉಡುಗೆ-ತೊಡಗೆಯನ್ನು ತೊಟ್ಟು ಹೋರಾಟ ಮಾಡೋಣ ಬನ್ನಿ ಎಂದು ಹೇಳಬೇಕಿತ್ತು. ಒಂದು ವೇಳೆ ಹಾಗೆ ಹೇಳಿದರೆ, ಎಲ್ಲರೂ ಸಮವಸ್ತ್ರ ತೊಟ್ಟು ಒಂದೇ ಗೆಟಪ್ ನಲ್ಲಿದ್ದರೆ ಸ್ವಾತಂತ್ರ ಸಂಗ್ರಾಮದ ಹೀರೋ ಯಾರು ಅಂತ ಗುರುತಿಸಲು ಸ್ವಲ್ಪ ಕಷ್ಟ; ನನ್ನ ಈ ವಿಭಿನ್ನ ವೇಶ ನೋಡಿದ



ತಕ್ಷಣ ಇವನೇ ನಾಯಕ ಅಂತ ಗುರುತಿಸಲಿ'ಎಂದು ಗಾಂಧಿ ಆ ರೀತಿ ವೇಷ ಬದಲಾಯಿಸಿದ್ದರೇನೋ ಅಲ್ವಾ...? ಸೋ.. ಅದೇನೇ ಇರಲಿ ಬಿಡಿ! ಮಹಾತ್ಮಾ ಗಾಂಧೀಜಿ ನಿಸ್ವಾರ್ಥಿಯಾಗಿದ್ದರೆ, ದುಂಡು ಮೇಜಿನ ಸಭೆಯಲ್ಲಿ ಗಾಂಧೀಜಿ ಮತ್ತು ಅಂಬೇಡ್ಕರ್ ಮಧ್ಯೆ ಯಾಕೆ ಮನಸ್ತಾಪ ಉಂಟಾಗುತ್ತಿತ್ತು? ಅಂಬೇಡ್ಕರ್ ದಲಿತರಿಗೆ ಒಂದು ಪ್ರತ್ಯೇಕ ಮತದಾನದ ಹಕ್ಕು ಬೇಕೆಂದು ಕೇಳಿದಾಗೇಕೆ, ಅಂಬೇಡ್ಕರ್ ಎಂಬ ಮಹಾ ಮೇಧಾವಿ ವಿರುದ್ಧ (ಗಾಂಧಿ) ಯಾಕೆ ಮಾತನಾಡಿದರು? ಮತ್ತು ಉಪವಾಸ ಸತ್ಯಾಗ್ರಹ ಯಾಕೆ ಮಾಡಿದರು? ನಿಷ್ಕಪಟ ಮನಸಿನ ಗಾಂಧಿ ದೊಡ್ಡ ಮನಸ್ಸು ಮಾಡಿ ಅಂಬೇಡ್ಕರ್ ಬೇಡಿಕೆಗೆ ಒಪ್ಪಿಕೊಂಡು ಮಾನ್ಯ ಮಾಡಬೇಕಿತ್ತು. ಯಾಕೆ ಮಾಡಲಿಲ್ಲ?ಮಹಾತ್ಮ ಗಾಂಧೀಜಿಯ ಆ ಉಪವಾಸ ಸತ್ಯಾಗ್ರಹದ ಮಹಾ ಅಸ್ತ್ರ ಕೇವಲ ರಾಜಕೀಯ ಕುತಂತ್ರ ಎಂದು ತಿಳಿಯಬೇಕಾದರೆ ಇತಿಹಾಸದ ಪುಟಗಳನ್ನು ತಿರುವಿ ನಿಷ್ಕಪಟ ಮನಸಿನಿಂದ ವಿಭಿನ್ನವಾಗಿ ವಿಚಾರಮಾಡಿ ನೋಡಿದಾಗ ಸತ್ಯ ನಿಮಗೂ ತಿಳಿಯುತ್ತದೆ. ಮಹಾತ್ಮ ಗಾಂಧೀಜಿಗೆ ಬಡವರ ಬಗ್ಗೆ ಒಳ್ಳೆ ಅಭಿಪ್ರಾಯ-ಅಭಿಮಾನ ಅನ್ನುವುದುದಿತ್ತೇ? ಎಂದು ಕೇಳಿದರೆ ಹೌದಿತ್ತು; ತುಂಬ... ತುಂಬಾನೇ ಇತ್ತು ಅಂತ ಹೇಳುತ್ತೆ ಇತಿಹಾಸ. 'ಹೊಲೆಯ-ಮಾದಿಗ, ಅಸ್ಪೃಶ್ಯರೆಂದು ಯಾಕೆ ನಿಂದಿಸುತ್ತೀರ! ಇವರು ಹೊಲೆಯ-ಮಾದಿಗರಲ್ಲ. ಇವರು ದೇವರ ಮಕ್ಕಳು ಹರಿಜನ - ಗಿರಿಜನ ಎಂದು ಕರೆದ ಆ ಪುಣ್ಯಾತ್ಮ. ಹರಿಜನ-ಗಿರಿಜನ... ದೇವರ ಮಕ್ಕಳು! ಅಯ್ಯೋ ಎಂಥ ಅವಮಾನ! ಹೀಗೆ ಕರೆದ ಗಾಂಧೀಜಿಗೆ ನನ್ನಂಥ ಸ್ವಾಭಿಮಾನಿ ಬಹುಜನ ಭಾರತೀಯರ ಧಿಕ್ಕಾರವಿದೆ...!

**ಹರಿಜನ ಶಬ್ದದ ಅರ್ಥ ಮತ್ತು ಇತಿಹಾಸ(?)**

"ಅಸ್ಪೃಶ್ಯರು... ಹೊಲೆಯ ಮಾದಿಗರು'ಎಂದು ಯಾಕೆ ನಿಂದಿಸುತ್ತೀರ? ಅವರು ಹೊಲೆ-ಮಾದಿಗರಲ್ಲ. ಅವರು ದೇವರ ಮಕ್ಕಳು, ಹರಿಜನರು. ಅವರನ್ನು ಹರಿಜನ ಎಂದು ಕರೆಯಿ-ರಿ"ಎಂದು ಹೇಳಿದ್ದು ಸಾಲದೆಂಬಂತೆ 'ಹರಿಜನ್ ಸೇವಕ್ ಸಂಘ' ಎಂಬ ಸಂಘ ಒಂದನ್ನು ಹುಟ್ಟು ಹಾಕಿದರು ಮೋಹನ್ ದಾಸ್ ಕರಮ ಚಂದ್ರ ಗಾಂಧಿ ಎಂಬ ಪುಣ್ಯಾತ್ಮ.

**"ಹೊಲೆಯ-ಮಾದಿಗರು ಹೇಗೆ**

ಹರಿಜನರಾಗುತ್ತಾರೆ? ಹರಿಜನ ಶಬ್ದದ ಅರ್ಥ ಮತ್ತು ಅದರ ಇತಿಹಾಸ ನಿಮಗೆ ಗೊತ್ತಿರುವುದೇ ಗಾಂಧಿ!?"ಎಂದು ಅಂಬೇಡ್ಕರ್ ಕೇಳಿದಾಗ ಗಾಂಧೀಜಿ- "ಅದೇಕೆ ಈ ರೀತಿ ಕೇಳುತ್ತಿದ್ದೀರಾ? ಹರಿ ಅಂದ್ರೆ ದೇವರು. ಹರಿಜನ ಅಂದ್ರೆ ದೇವರ ಮಕ್ಕಳು. ಹೊಲೆಯ ಮಾದಿಗರನ್ನು ಹರಿ-ಜನ ಎಂದು ಕರೆಯುವುದರಲ್ಲಿ ತಪ್ಪೇನಿದೆ ಅಂಬೇಡ್ಕರ್?" "ಬರೀ ತಪ್ಪಷ್ಟೇ ಅಲ್ಲ; ಇದರಲ್ಲಿ ದೊಡ್ಡ ಷಡ್ಯಂತ್ರವೇ ಅಡಗಿದೆ ಮಿಸ್ಟರ್ ಗಾಂಧಿ! ಹೊಲೆಯ ಮಾದಿಗರು ದೇವರ ಮಕ್ಕಳಾದರೆ ಇನ್ನುಳಿದ ಬ್ರಾಹ್ಮಣ- ಬನಿಯಾಗಳು ಯಾರ ಮಕ್ಕಳು !?" ಅಂಬೇಡ್ಕರ್ ಪ್ರಶ್ನೆಗೆ ಗಾಂಧೀಜಿ ಉತ್ತರಿಸಲು ತಡವರಿಸಿದರು. ಅಂಬೇಡ್ಕರ್ ಮುಂದುವರಿಯುತ್ತಾ ಈ ರೀತಿ ಹೇಳಿದರು- "ಹೊಲೆಯ ಮಾದಿಗರು ಹರಿಜನರಲ್ಲ. ಹೊಲೆಯ ಮಾದಿಗರನ್ನು ಹರಿಜನ ಎಂದು ಕರೆದ ಮೋಹನ ದಾಸ್ ಕರ್ಮ್ ಚಂದ್ರ ಗಾಂಧಿಯ ವಂಶಸ್ಥರಾದ ಬ್ರಾಹ್ಮಣ ಬನಿಯಾ ಎಂಬ ಸವರ್ಣೀಯರೆಲ್ಲರೂ ಒಂದು ರೀತಿ ನಿಜವಾದ ಹರಿಜನರು! ಮೇಲ್ವರ್ಗದ ಸವರ್ಣೀಯ-ರಿಗೆ ಮತ್ತು ಅವರ ದೇವರುಗಳಿಗೆ ಹೊಲೆ ಮಾದಿಗರಿಂದ ಮೈಲಿಗೆಯಾಗುತ್ತದೆ, ಹೊಲೆಯ ಮಾದಿಗರಿಗೆ ದೇವಾಲಯದಲ್ಲಿ ಪ್ರವೇಶವಿಲ್ಲ ಅಂದಮೇಲೆ ಹೊಲೆಯ ಮಾದಿಗರು, ಹ-ರಿಜನರು- ದೇವರ ಮಕ್ಕಳು ಆಗಲು ಹೇಗೆ ಸಾಧ್ಯ..?" "ಅಂಬೇಡ್ಕರ್... ನೀವು ನನ್ನನ್ನು ಅಪಾರ್ಥ ಮಾಡಿಕೊಳ್ಳುತ್ತಿದ್ದೀರ?" "ಅಪಾರ್ಥ ಅಲ್ಲ ಗಾಂಧಿ! ನಾನು ನಿಮ್ಮನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದೇನೆ; ತಾವೊಬ್ಬ ಸಮಯಸಾಧಕ ಷಡ್ಯಂತ್ರಕಾರಿ ಬನಿಯ ಅಂತ." "ವಿದ್ಯಾವಂತರಾದ ತಾವುಗಳು ಈ ರೀತಿ ಆವೇಶಕ್ಕೆ ಒಳಗಾಗಿ ಮಾತಾಡಬಾರದು ಅಂಬೇಡ್ಕರ್. ನಾನು ಷಡ್ಯಂತ್ರಕಾರಿ ಸಮಯಸಾಧಕ ಬನಿಯನಾ? ಅದ್ಹೇಗೆ ಹೇಳ್ತೀರ ಅಂಬೇಡ್ಕರ್?" "ಇನ್ನೇನು ಮತ್ತೆ! ಈ ದೇಶದ ಮೂಲನಿವಾಸಿಗಳನ್ನು ದುಷ್ಟ ಪಾಪಿಗಳು, ಕೀಳು ಕುಲದವರು, ಅಸ್ಪೃಶ್ಯರು ಎಂದೆನೆಲ್ಲಾ ಬೊಗಳುತ್ತಾ ಅನ್ಯಾಯ- ಅತ್ಯಾಚಾರ, ಶೋಷಣೆ ಮಾಡಿದ್ದು ಸಾಲದು ಎಂಬಂತೆ ಮತ್ತೆ ಈಗ ಹರಿಜನ ಎಂದು ಕರೆದು ಈ ರೀತಿ ಅಪಮಾನ ಮಾಡುತ್ತಿದ್ದೀರಲ್ಲ ಗಾಂಧಿ, ಇದಕ್ಕೇನಾ ತಾವು ಮಹಾತ್ಮಾ... ಮಹಾತ್ಮ ಗಾಂಧೀಜಿ ಎಂದು ಕರೆಸಿಕೊಳ್ಳುತ್ತಿರುವುದು?! " "ಕ್ಷಮಿಸಿ ಅಂಬೇಡ್ಕರ್, ತಮ್ಮ ಮಾತುಗಳು ನನಗೆ ಅರ್ಥ-'ವಾಗುತ್ತಿಲ್ಲ." "ಅರ್ಥವಾಗುತ್ತಿಲ್ಲ ಅಂದ್ರೆ ಈಗ ಅರ್ಥ ಆಗುವ ಹಾಗೆ ಹೇಳುತ್ತೇನೆ ಕೇಳಿ ಗಾಂಧಿ"ಎಂದು ಹೇಳಿ ಮತ್ತೆ ಈ ರೀತಿ ಹೇಳತೊಡಗಿದ್ದರು ಅಂಬೇಡ್ಕರ್-"ಜಂಬೂದ್ವೀಪ, ಅಸುರರಾಷ್ಟ್ರ, ರಾಕ್ಷಸರ ನಾಡು, ದೈತ್ಯರ ಬೀಡು ಎಂದು ಕರೆಯಲ್ಪಡುತ್ತಿದ್ದ ಇಂದಿನ ಭಾರತ ಆ ಒಂದು ಕಾಲದಲ್ಲಿ ನಾಗರಿಕತೆಯ ಉತ್ತುಂಗದ ಶಿಖರದಲ್ಲಿತ್ತು. ಇಡೀ ಪ್ರಪಂಚಕ್ಕೆ ನಾಗ-ರಿಕತೆಯ ಪಾಠ ಕಲಿಸಿದ ನಾಗರಿಕತೆ ಇಂದಿನ ಭಾರತದ ಮೂಲನಿವಾಸಿಗಳಾದ ಶೂದ್ರರು, ಹೊಲೆಯ-ಮಾದಿಗರು... ಇತ್ಯಾದಿ ಕೀಳು ಜಾತಿ - ಕೆಳಜಾತಿಯವರೆನಿಸಿಕೊಂಡವರದಾಗಿತ್ತು. ವಿದೇಶಿ ಪಾಪಿಗಳ ಆಗಮನದಿಂದಾಗಿ ಮೂಲನಿವಾಸಿ ಭಾರತೀಯರ ಮೇಲೆ ಅನ್ಯಾಯ ಅತ್ಯಾಚಾರ ನಡೆಯಿತು. ಮೂಲನಿವಾಸಿ ಭಾರತೀಯರನ್ನು 6000 ಗಿಂತಲೂ ಅಧಿಕ

ಕರುನಾಡ ಕಂದ
ಸಂಪುಟ 04 । ಸಂಚಿಕೆ 14
ದಿನಾಂಕ: 16–05–2025 ಪುಟಗಳು:16

ಜಾತಿಗಳಲ್ಲಿ ವಿಂಗಡಿಸಿ ದೇವರು–ಧರ್ಮ, ಮೇಲು–ಕೀಳು ಎಂಬ ಸರಪಳಿಯಲ್ಲಿ ಬಂಧಿಸಿ, ವರ್ಣ, ಅಸ್ಪೃಶ್ಯತೆ, ವೇದ, ಪುರಾಣ,ಉಪನಿಷತ್ತು,ಇಂದ್ರಲೋಕ, ಬ್ರಹ್ಮಲೋಕ, ಸ್ವರ್ಗ–ನರಕ... ಮನಸಿಗೆ ಬಂದಿದ್ದೆಲ್ಲವನ್ನೂ ರಚಿಸಿ ಅಮಾಯಕ ಮುಗ್ಧ ಜನಗಳಿಗೆ ಮಂಕುಬೂದಿ ಎರಚಿ ಮರಳು ಮಾಡಿದರು. ಬ್ರಾಹ್ಮಣರಲ್ಲಿ ಸತಿಸಹಗಮನ ಪದ್ಧತಿ, ಬಹುಪತ್ನಿತ್ವ,ಬಾಲ್ಯ ವಿವಾಹದಂಥ ಅನಿಷ್ಟ ಪದ್ಧತಿಗಳನ್ನು ಜಾರಿಗೆ ತಂದು, ವಿಧವಾವಿವಾಹ ನಿಷೇಧಿಸಿ ಜಾತಿಪದ್ಧತಿ ಅಳಿಸದಂತೆ ನೋಡಿಕೊಂಡರು. ಗಂಡ ಸತ್ತಾಗ ವಿಧವೆ ಹೆಣ್ಣನ್ನು ಬೆಂಕಿಗೆ ಆಹುತಿ ನೀಡಿ ವಿಕೃತವಾಗಿ ಮೆರೆದರು. ನಂತರದ ದಿನಗಳಲ್ಲಿ ಗಂಡ ಸತ್ತವಿಧವೆಯನ್ನು ಪಾಪಿ ಮುಂಡೇ ಎಂಬ ಪಟ್ಟ ಕಟ್ಟಿ, ತಲೆ ಬೋಳಿಸಿ, ಬಿಳಿ ಸೀರೆ ತೊಡಿಸಿ ವಿರೂಪಗೊಳಿಸಿ ಕೊನೆಗೆ– “ನಿನ್ನ ಪತಿ ಇನ್ನು ಬದುಕಿಲ್ಲ. ಚಿಂತೆ ಪಡಬೇಕಾಗಿಲ್ಲ. ಪತಿ ಇಲ್ಲ ಅಂದ್ರೆ ಏನಂತೆ; ಪತಿಯೇ ಪರಮೇಶ್ವರ... ಇನ್ನುಳಿದ ಈ ನಿನ್ನ ಬದುಕು ಪರಮೇಶ್ವರಿನಿಗಾಗಿ ಮೀಸಲಿಡು, ದೇವರ ಸೇವೆಯಲ್ಲಿ ಸುಖವನ್ನು ಕಾಣು. ಸ್ವರ್ಗವನ್ನು ಸೇರು...”ಎಂದೆನೆಲ್ಲವನ್ನೂ ಹೇಳುತ್ತಾ ಗಂಡನನ್ನು ಕಳೆದುಕೊಂಡ ವಿಧವೆ ಹೆಣ್ಣನ್ನು ದೇವರ ಸೇವೆಗೆಂದು ಅರ್ಪಿಸಿದರು... ಕ್ಷಮಿಸಿ, ದೇವರ ಸೇವೆಗೆಂದು ಹೇಳಿದರೆ ಆತ್ಮವಂಚನೆ ಮಾಡಿಕೊಂಡು ಸುಳ್ಳು ಹೇಳಿದ ಹಾಗೆ ಆಗುತ್ತದೆ. ದೇವರ ಸೇವೆಗೆಂದಲ್ಲ; ದೇವರ ಗುಡಿಯಲ್ಲಿರುವ ಡೊಳ್ಳುಹೊಟ್ಟೆಯ, ಜುಟ್ಟು ತಲೆಯ, ವಿಕೃತ ಮನಸುಳ್ಳ ಪಂಡಿತ ಪೂಜಾರಿಯ ಸೇವೆಗೆಂದು ವಿಧವೆ ಹೆಣ್ಣನ್ನು ಅರ್ಪಿಸಿದರು. ಬೆಳಗಿನ ಜಾವ ಬೇಗ ಎದ್ದು ದೇವಸ್ಥಾನದ ಕಸಗೂಡಿಸಿ, ಹೊಳೆಯಿಂದ ನೀರು ತಂದು ದೇವಸ್ಥಾನ ಶುಚಿಗೊಳಿಸಬೇಕು. ದೇವರ ಪ್ರಸಾದ ತಿಂದು ಜೀವನ ಸಾಗಿಸಬೇಕು. ದೇವಸ್ಥಾನದ ಪಂಡಿತ ಪೂಜಾರಿ ಬಯಸಿದಾಗ ಶಾರೀರಿಕ ಸೇವೆ ನೀಡಬೇಕು, ಒಂದು ವೇಳೆ ಅದಕ್ಕೆ ನಿರಾಕರಿಸಿದರೆ, ಪ್ರತಿಭಟಿಸಿದರೆ “ನರಕ ಸೇರ್ತೀಯ, ಮುಂದಿನ ಜನ್ಮದಲ್ಲಿ ಶೂದ್ರ, ಅಸ್ಪೃಶ್ಯ ಹೊಲೆಯ ಮಾದಿಗಳಾಗಿ ಹುಟ್ಟುತ್ತಿಯ!”– ಎಂದು ಧಾರ್ಮಿಕ ಭಯೋತ್ಪಾದನೆ ನಡೆಸಲಾಗುತ್ತಿತ್ತು.

ಧಾರ್ಮಿಕ ಭಯೋತ್ಪಾದನೆಗೆ ಹೆದರದ ಹೆಣ್ಣು ಪೂಜಾರಿಯ ಜೊತೆಗೆ ಮನಸ್ಸಿಲ್ಲದಿದ್ದರೂ ಕೂಡಾ ಹಾಸಿಗೆ ಹಂಚಿಕೊಳ್ಳುತ್ತಿದ್ದಳು. ದೇವರ ಸೇವೆಗೆಂದು ನೇಮಕಗೊಂಡ ಬ್ರಾಹ್ಮಣ– ಬನಿಯಾ ಜಾತಿಯ ವಿಧವೆ ಮತ್ತು ಪೂಜಾರಿಯ ಅನೈತಿಕ ಸಂಬಂಧದಿಂದಾಗಿ ಜನಸಿದ ಮಕ್ಕಳನ್ನು ಹರಿಜನರು– ದೇವರ ಮಕ್ಕಳು ಎಂದು ಕರೆದರು. ಗಾಂಧೀಜಿ... ಇದು ಹರಿಜನ ಶಬ್ದದ ಅರ್ಥ ಮತ್ತು ನಿಜ ಇತಿಹಾಸ! ಕೇವಲ ನೀವು ಮತ್ತು ನಿಮ್ಮ ವಂಶಸ್ಥರೆಲ್ಲರೂ ದೇವರ ಮಕ್ಕಳು, ಹರಿಜನ–ಗಿರಿ–ಜನ... ಏನೆಲ್ಲಾ! ನನ್ನ ಬಡಜನರು ಯಾರೂ ಸಹ ದೇವರು ಮಕ್ಕಳಲ್ಲ. ಅವರು ತಮ್ಮ–ತಮ್ಮ ತಂದೆತಾಯಿಗಳ ಮಕ್ಕಳು ಮತ್ತು ಮಾನವ ಜನಾಂಗದವರು ನೀವು ಮತ್ತು ನಿಮ್ಮವರು ನಮ್ಮವರನ್ನು ಹರಿಜನ ಗಿರಿಜನ ಎಂದು ಕರೆಯಕೂಡದು ಗಾಂಧೀ!”ಎಂದು ಅಂಬೇಡ್ಕರ್ ಗುಡುಗಿದರು.


**ಭೀಮ ಘರ್ಜನೆಯ ಮುಂದೆ ನರಿಬುದ್ಧಿ ಗಾಂಧಿ**
**ಮಾತಾಡಲು ತಡವರಿಸಿದರು.**
**ಅಂಬೇಡ್ಕರ್ ಎಂಬ ಹುಲಿ ಅಲ್ಲಿಂದ ತೆರಳಿತ್ತು.**

(ವಿ.ಸೂ. ಈ ಬರಹಕ್ಕೆ ಆಧಾರ ಬಹುಜನ ಸಾಹಿತ್ಯ.ಈ ಬರಹ ಕಲ್ಪನೆಯ ಬರಹ ಅಲ್ಲ. ಸತ್ಯ ಘಟನೆಯ ಆಧಾರದ ಮೇಲೆ ಬಹುಜನ ಜಾಗೃತಿಗಾಗಿ ಇದನ್ನು ಬರೆಯಲಾಗಿದೆ. ಇದರಲ್ಲಿ ಯಾವುದೇ ರೀತಿಯ ದುರುದ್ದೇಶ ಇರುವುದಿಲ್ಲ.)



**ಜಿ. ಎಲ್. ನಾಗೇಶ್,**
ಧನ್ನೂರ (ಆರ್)-585330
ಬಸವಕಲ್ಯಾಣ
ತಾಲೂಕು
ಬೀದರ್ ಜಿಲ್ಲೆ
-585330
ಮೊಬೈಲ್
ನಂ.9945686234

# ಗೌರಿಬಿದನೂರಿನಲ್ಲಿ ಅದ್ದೂರಿ ಬಸವ ಜಯಂತಿ ಆಚರಣೆ







ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನಲ್ಲಿ ಅದ್ದೂ-ರಿಯಾಗಿ ಜಗಜ್ಯೋತಿ ಶ್ರೀಬಸವೇಶ್ವರ ಜಯಂತೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ “ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣದ ಜೊತೆಗೆ ನಮ್ಮ ಧರ್ಮ , ಸಂಸ್ಕಾರವನ್ನು ಕಲಿಸಬೇಕು” ಎಂದು ಶ್ರೀ ಕ್ಷೇತ್ರ ಸಿದ್ದರಬೆಟ್ಟದ ಶ್ರೀ ವೀರಭದ್ರ ಶಿವಾಚಾರ್ಯ ಮಹಾ ಸ್ವಾಮೀಜಿ ಕರೆ ನೀಡಿದರು.

ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣದ ಜೊತೆಗೆ ನಮ್ಮ ಧರ್ಮ , ಸಂಸ್ಕೃತಿ, ಸಂಸ್ಕಾರವನ್ನು ಕಲಿಸುವಲ್ಲಿ ಹೆಚ್ಚಿನ ಒತ್ತು ನೀಡಬೇಕು ಎಂದು ಶ್ರೀ ಕ್ಷೇತ್ರ ಸಿದ್ದರಬೆಟ್ಟದ ಶ್ರೀ ವೀರಭದ್ರ ಶಿವಾಚಾರ್ಯ ಮಹಾಸ್ವಾಮೀಜಿಗಳು ಕರೆ ನೀಡಿದರು.

ನಗರದ ಡಾ. ಎಚ್. ಎನ್. ಕಲಾಭವನದಲ್ಲಿ ಬಸವ ಜಯಂತೋತ್ಸವ ಆಚರಣಾ ಸಮಿತಿ ಮತ್ತು ವೀರಶೈವ ಸೇವಾ ಸಮಿತಿ ಮತ್ತು ಇತರೆ ಅಂಗ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಶ್ರೀ ಬಸವೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಚನ ನೀಡಿದ ಅವರು, ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ವೀರಶೈವ ಲಿಂಗಾಯತ ಸಮುದಾಯವನ್ನು ಬಸವಾದಿ ಶರಣರು 12ನೇ ಶತಮಾನದಲ್ಲಿ ಮುನ್ನೆಲೆಗೆ ತಂದರು ಎಂದ ಅವರು, ಪೋಷಕರು ತಮ್ಮ ಮಕ್ಕಳನ್ನು ಆಚಾರವಂತರನ್ನಾಗಿಸಿದಾಗ ಅವರ ಮುಂದಿನ ಬದುಕು ಉಜ್ವಲ ಭವಿಷ್ಯತ್ತಿನ ಜೊತೆಗೆ ಬದುಕು ಹಸನಾಗಲು ಸಾಧ್ಯವಾಗುತ್ತದೆ ಎಂದು ನುಡಿದರು.

ಬಸವ ಜಯಂತೋತ್ಸವಗಳು ಕೇವಲ ಆಚರಣೆಗೆ ಮಾತ್ರ ಸೀಮಿತವಾಗದೆ ಬಸವಣ್ಣನವರ ವಚನಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಮಾನವೀಯತೆಯ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಿ ಎಂದು ಹೇಳಿದರು.

ಶಾಸಕ ಕೆ. ಎಚ್. ಪುಟ್ಟಸ್ವಾಮಿಗೌಡ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಾತಿ ಪದ್ದತಿ, ಮೇಲು ಕೀಳು ಮನೋಭಾವನೆಯ ಅಂಧಕಾರದಲ್ಲಿದ್ದ ಸಮಾಜಕ್ಕೆ ಸಮಸಮಾಜದ ಬೆಳಕನ್ನು ಚೆಲ್ಲಿದ ಮಹಾ ಮಾನವತಾವಾದಿ ಬಸವಣ್ಣನವರು ಎಂದ ಅವರು, ಬ್ರಾಹ್ಮಣ ಸಮುದಾಯದ ಮಡಿವಂತಿಕೆಯನ್ನು ಬಿಟ್ಟು ವೀರಶೈವ ಲಿಂಗಾಯಿತ ಧರ್ಮಕ್ಕೆ ಪಾದಾರ್ಪಣೆ ಮಾಡಿ ಅನುಭವ ಮಂಟಪದ ಮೂಲಕ ಸಮಸಮಾಜ ನಿರ್ಮಾಣಕ್ಕೆ ಅಂದೇ ನಾಂದಿ ಹಾಡಿದರು ಎಂದು ತಿಳಿಸಿದರು.

**ಅನುಭವ ಮಂಟಪ:**

12ನೇ ಶತಮಾನದಲ್ಲಿ ಇಂದಿನ ಪಾರ್ಲಿಮೆಂಟ್ ಮಾದರಿಯಲ್ಲಿ ಜಾತ್ಯಾತೀತವಾಗಿ ಅನುಭವ ಮಂಟವನ್ನು ಮಾಡಿಕೊಂಡು ತಮ್ಮ ಹಾಗೂ ಶರಣರ ವಚನಗಳ ಮೂಲಕ ಕಂದಾಚಾರ, ಮೂಢನಂಬಿಕೆ ಹಾಗೂ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಶ್ರಮಿಸದ ಬಸವಣ್ಣನವರ ವಚನಗಳು ಸರ್ವಕಾಲಕ್ಕೂ ವಿಶ್ವಕ್ಕೇ ಪ್ರಸ್ತುತವಾಗಿದೆ, ದೇಶ ವಿದೇಶಗಳಲ್ಲೂ ಬಸವಣ್ಣನವರನ್ನು ಪೂಜಿಸಲಾಗುತ್ತಿದೆ, ಪ್ರತಿಯೊಬ್ಬರೂ ಮಾನವೀಯತೆಯನ್ನು ಮೈಗೂಡಿಸಿಕೊಂಡಾಗ ಮಾತ್ರ ಬದುಕು ಮತ್ತು ಭವಿಷ್ಯತ್ತು ಉಜ್ವಲವಾಗಲು ಸಾಧ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕರು ಬಸವಣ್ಣನವರ ವಚನಗಳನ್ನು ಪಠಿಸುವ ಮೂಲಕ ಸಮುದಾಯದವರ ಪ್ರಶಂಸೆಗೆ ಪಾತ್ರರಾದರು. ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಬಸವಾಪುರ ಮಹೇಶ್ ಮಾತನಾಡಿ ಸಮುದಾಯದವರು ಶೈಕ್ಷಣಿಕವಾಗಿ ಅಭಿವೃದ್ಧಿಯಾಗಬೇಕಿದೆ ಎಂದ ಅವರು ಜಿಲ್ಲೆಯಲ್ಲಿ ವೀರಶೈವ ಲಿಂಗಾಯಿತ ಸಮುದಾಯದ ವಿದ್ಯಾರ್ಥಿನಿಯರ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸುವಂತೆ ಅ. ಭಾ. ವೀ. ಮಹಾಸಭಾ ರಾಷ್ಟ್ರೀಯ ಕಾರ್ಯದರ್ಶಿ ಅವರಲ್ಲಿ ಮನವಿ ಮಾಡಿದರು. ನಗರದಲ್ಲಿ ನಿವೇಶನ ರಹಿತರಿಗೆ ನಿವೇಶನ ಸಮುದಾಯಕ್ಕೆ ಪ್ರತ್ಯೇಕ ರುದ್ರಭೂಮಿಯನ್ನು ಮಂಜೂರು ಮಾಡಿಕೊಡುವಂತೆ ಶಾಸಕರಲ್ಲಿ ಮನವಿ ಮಾಡಿಕೊಂಡರು.

ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಟಿ. ವಿ. ಮಹೇಂದ್ರ ಮಾತನಾಡಿ, ನಮ್ಮ ಸಮುದಾಯ ರಾಜಕೀಯವಾಗಿ ಹಿಂದುಳಿದಿದ್ದು, ಶಾಸಕರು ನಮ್ಮ ಸಮುದಾಯಕ್ಕೂ ರಾಜಕೀಯ ಪ್ರಾಶಸ್ಥತೆಯನ್ನು ನೀಡುವಂತೆ ಕೋರಿದರು, ಶೀಘ್ರದಲ್ಲೇ ವಿದ್ಯಾರ್ಥಿಗಳ ಶೈಕ್ಷಣಿಕವಾಗಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಮಹೇಶ್ ಎಸ್. ಪತ್ರಿ, ವೀರಶೈವ ಸೇವಾ ಸಮಿತಿ ಅಧ್ಯಕ್ಷ ಟಿ. ಎಂ. ಚಿಕ್ಕಣ್ಣ, ಅ.ಭಾ.ವೀ.ಮಹಾಸಭಾ ರಾಷ್ಟ್ರೀಯ ಕಾರ್ಯದರ್ಶಿ ಎಚ್. ಎಂ.ರೇಣುಕಾ ಪ್ರಸನ್ನ, ರಾಜ್ಯ ಯುವ ಘಟಕದ ಅಧ್ಯಕ್ಷ ಮನೋಹರ್ ಅಬ್ಬಿಗೆರೆ ಮಾತನಾಡಿದರು.

**ಶೋಭಾ ಯಾತ್ರೆ:**

ಕಾರ್ಯಕ್ರಮಕ್ಕೂ ಮುನ್ನ ನಗರದ ರಾಜಬೀದಿಗಳಲ್ಲಿ ಜಗಜ್ಯೋತಿ ಶ್ರೀ ಬಸವೇಶ್ವರರ ಭಾವಚಿತ್ರದೊಂದಿಗೆ , ಮಹಿಳೆಯರು ಪೂರ್ಣ ಕಳಶಗಳೊಂದಿಗೆ ,ಜಾನಪದ ಕಲಾತಂಡಗಳೊಂದಿಗೆ ಸಮುದಾಯದವರು ಮೆರವಣಿಗೆ ನಡೆಸಿದರು, ಮೆರವಣಿಗೆಯ ಬಸವಣ್ಣನವ ಭಾವುಟಗಳು ರಾರಾಜಿಸುತ್ತಿದ್ದವು. ಮೆರವಣಿಗೆಯಲ್ಲಿ ಸಿದ್ದರಬೆಟ್ಟದ ಶ್ರೀ ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು, ಶಾಸಕ ಕೆ. ಎಚ್. ಪುಟ್ಟಸ್ವಾಮಿಗೌಡ, ತಹಶೀಲ್ದಾರ್ ಮಹೇಶ್ ಎಸ್. ಪತ್ರಿ ರವರುಗಳು ಮೆರವಣಿಗೆಯಲ್ಲಿ ಸಾಗಿ ಬಂದಿದ್ದು ವಿಶೇಷವಾಗಿತ್ತು. ಕಾರ್ಯಕ್ರಮದಲ್ಲಿ ಬಸವ ಜಯಂತೋತ್ಸವ ಸಮಿತಿಯ ಮೃತ್ಯುಂಜಯಣ್ಣ, ಮುದ್ದುವೀರಪ್ಪ, ಬಸವರಾಜು, ಜಿಮ್ ಹರೀಶ್, ರೇವಣ ಸಿದ್ದೇಶ್ವರ, ಬಸವರಾಜು, ರುದ್ರಮ್ಮ, ಆರ್. ಮಂಜುನಾಥ್, ಎನ್.ಆರ್.ರವಿಕುಮಾರ್, ಶಶಿಧರ್, ಡಾ.ಸಿ.ನಾಗರತ್ನ, ಆಶಾ, ಗೌರೀಶ್, ವೀರಶೈವ ಸೇವಾ ಸಮಿತಿ ಕಾರ್ಯದರ್ಶಿ ಶಿವಪ್ರಸಾದ್, ಉಪಾಧ್ಯಕ್ಷ ಉಮಾದೇವಿ, ಖಜಾಂಚಿ ನಂಡುಂಡಪ್ಪ ಹಾಗೂ ನಿರ್ದೇಶಕರುಗಳು ಭಾಗವಹಿಸಿದ್ದರು.

**ವರದಿ ತುಳಸಿ ನಾಯ್ಕ**

ಕರುನಾಡ ಕಂದ
ಸಂಪುಟ 04 | ಸಂಚಿಕೆ 14
ದಿನಾಂಕ: 16-05-2025 ಪುಟಗಳು:16

# ವರುಣ್ ಚಕ್ರವರ್ತಿ ಅವರಿಂದ ಶಿಕ್ಷಣಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಕೆ

ಹಾಸನ ಜಿಲ್ಲೆ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಪೋಕ್ಸೋ ಕಾಯ್ದೆ ಬಗ್ಗೆ ಕಾನೂನು ಅರಿವು ಮೂಡಿಸುವ ಕುರಿತು ವರುಣ್ ಚಕ್ರವರ್ತಿ ಅವರು ಶಿಕ್ಷಣಾಧಿಕಾರಿ ಅವರಿಗೆ ಮನವಿ ಸಲ್ಲಿಸಿದರು.

ಅಪ್ರಾಪ್ತ ಹೆಣ್ಣು ಮಕ್ಕಳ ರಕ್ಷಣೆಗಾಗಿ ರೂಪಿಸಿರುವ ಪೋಕ್ಸೋ ಕಾಯ್ದೆ ಬಗ್ಗೆ ವಿದ್ಯಾರ್ಥಿಗಳು ಅರಿವು ಹೊಂದುವ ಅಗತ್ಯ ಇದೆ ಹೆಣ್ಣು ಮಕ್ಕಳ ಮೇಲೆ ನಿರಂತರವಾಗಿ ನಡೆಯುತ್ತಿರುವ ಅತ್ಯಾಚಾರ, ದೌರ್ಜನ್ಯ ತಡೆಗಟ್ಟಲು 2012ರಲ್ಲಿ ಅಂದಿನ ಕೇಂದ್ರ ಸರ್ಕಾರ ಪೋಕ್ಸೋ ಕಾಯ್ದೆಯನ್ನು ಜಾರಿಗೊಳಿಸಿತು, ಅಪ್ರಾಪ್ತ ಹೆಣ್ಣು ಮಕ್ಕಳ ರಕ್ಷಣೆಗಾಗಿ ಈ ಕಾಯ್ದೆ ರೂಪಿಸಲಾಗಿದೆ ಅಪ್ರಾಪ್ತ ಹೆಣ್ಣು ಮಕ್ಕಳನ್ನು ಚುಡಾಯಿಸುವುದು, ಕೈ ಸನ್ನೆ ಮಾಡುವುದು, ಮುಟ್ಟಿ ಮಾತನಾಡಿಸುವುದು ಸೇರಿದಂತೆ ದುರ್ನಡತೆ ತೋರುವುದು ಪೋಕ್ಸೋ ಕಾಯ್ದೆ ಪ್ರಕಾರ ಅಪರಾಧ. ಈ ನಿಟ್ಟಿನಲ್ಲಿ ಹೆಣ್ಣು ಮಕ್ಕಳಿಗೆ ಅರಿವು ಮೂಡಿಸಬೇಕು, ಬಾಲಕಿಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ ಪೋಕ್ಸೋ ಅಡಿ ಅಂತಹ ಅಪರಾಧಗಳಿಗೆ ಶಿಕ್ಷೆಯಾಗುತ್ತದೆ, ಈ ಬಗ್ಗೆ ಶಾಲೆಗಳಲ್ಲಿ ಹೆಚ್ಚಿನ ಅರಿವು ಮೂಡಿಸಬೇಕು, ಶಾಲಾ ಮತ್ತು ಕಾಲೇಜು ಹಂತದಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ತಿಳುವಳಿಕೆ ಮೂಡಿಸಬೇಕಿದೆ, ಲೈಂಗಿಕ ದೌರ್ಜನ್ಯಕ್ಕೆ ಒಳಗಾದಲ್ಲಿ ಕಾಯ್ದೆ ಅನ್ವಯ ಗುರಿಯಾಗಬೇಕಾಗುತ್ತದೆ, ಜತೆಗೆ ಕುಟುಂಬದ ಮರ್ಯಾದೆ ಹೋಗಲಿದೆ ಈ ಬಗ್ಗೆ ಶಿಕ್ಷಕರು, ಉಪನ್ಯಾಸಕರು ಈ ಬಗ್ಗೆ ಮಕ್ಕಳಿಗೆ ಬುದ್ಧಿವಾದ ಹೇಳಬೇಕು. ಕಾನೂನು ಅರಿವು ನೀಡಿದಲ್ಲಿ ಅಂತಹ ಕೃತ್ಯಕ್ಕೆ ಕಡಿವಾಣ ಹಾಕಬಹುದು ಎನ್ನುವ ಉದ್ದೇಶದಿಂದ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕು ಶಿಕ್ಷಣಾಧಿಕಾರಿಗಳು ಹಾಗೂ ಪೊಲೀಸ್ ಇಲಾಖೆಯ ಮೂಲಕ ಮಕ್ಕಳಿಗೆ ಸುರಕ್ಷತೆಯ ಕುರಿತಂತೆ ಜಾಗೃತಿ ಮೂಡಿಸಬೇಕು ಎಂದು ವಿದ್ಯಾರ್ಥಿ



ಸಂಘಟನೆಯ ಮುಖಂಡರಾದ ವರುಣ್ ಚಕ್ರವರ್ತಿ ಮತ್ತು ಹರೀಶ್ ಅವರು ಮನವಿ ಮಾಡಿದರು.

**ಜವಾಬ್ದಾರಿಯುತ ಇಲಾಖೆಯವರು ಮಕ್ಕಳಿಗೆ ಕಾಯ್ದೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹೆಚ್ಚಾಗಿ ಹಮ್ಮಿಕೊಳ್ಳಬೇಕು.**

1) 18 ವರ್ಷದೊಳಗಿನ ಜಿಲ್ಲೆಯ ಹಾಗೂ ತಾಲೂಕಿನ ಎಲ್ಲಾ ಶಾಲಾ ಮತ್ತು ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಕಾನೂನು ಅರಿವು ಅಗತ್ಯವಿದ್ದು ಪೋಕ್ಸೋ ಪ್ರಕರಣಗಳ ಅರಿವು ಮುಖ್ಯವಾಗಿ ಶಾಲೆಗಳಲ್ಲಿ ಬಾಲಕಿಯರು, ಟೀನೇಜ್ ಪ್ರೆಗ್ನೆನ್ಸಿ ಪ್ರಕರಣಗಳು ಹೆಚ್ಚು ಕಂಡು ಬರುತ್ತಿವೆ. ಆದ್ದರಿಂದ ಎಲ್ಲಾ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳು, ಐ.ಟಿ.ಐ. ಡಿಪ್ಲೋಮೋ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಪೋಕ್ಸೋ ಕುರಿತಂತೆ ಹೆಚ್ಚಿನ ಅರಿವು ಮೂಡಿಸಬೇಕು”.

2) ಈ ಶಾಲೆ ಪ್ರಾಂಶುಪಾಲರಿಗೆ ಮಕ್ಕಳ ರಕ್ಷಣಾ ನೀತಿ ಮತ್ತು ಪೋಕ್ಸೋ ಕಾಯ್ದೆ ಬಗ್ಗೆ ತರಬೇತಿ ಆಯೋಜಿಸಿ, ಶಾಲೆಗಳಲ್ಲಿ ಕಡ್ಡಾಯವಾಗಿ ಪಾಲಿಸಬೇಕಾದ ಕ್ರಮಗಳ ಕುರಿತಂತೆ ತಿಳಿಸಬೇಕು ಹದಿಹರೆಯದ ವಿದ್ಯಾರ್ಥಿಗಳು ಪೋಕ್ಸೋ ಪ್ರಕರಣಗಳಲ್ಲಿ ಸಿಲುಕಲು ಶೇ. 70ರಷ್ಟು ಸೋಷಿಯಲ್ ಮೀಡಿಯಾಗಳ ಬಳಕೆ ಕಾರಣವಾಗಿದ್ದು, ವಿದ್ಯಾರ್ಥಿಗಳಿಗೆ ಸುರಕ್ಷಿತ ರೀತಿಯಲ್ಲಿ ಮೊಬೈಲ್ ಬಳಕೆ ಮಾಡುವ ಬಗ್ಗೆ ಶಾಲಾ ಕಾಲೇಜುಗಳಲ್ಲಿ ಶಿಕ್ಷಕರು ಮತ್ತು ಮನೆಗಳಲ್ಲಿ ಪೋಷಕರು ಜಾಗೃತಿ ಮಾಡಿಸಬೇಕು.

3) ತಾಲ್ಲೂಕಿನ ಎಲ್ಲಾ ಶಾಲೆಗಳಲ್ಲಿ ಕಡ್ಡಾಯವಾಗಿ ಮಕ್ಕಳ ರಕ್ಷಣಾ ನೀತಿ ಬಗ್ಗೆ ತರಬೇತಿ ಆಯೋಜಿಸಿ ಶಿಕ್ಷಕರಿಗೆ ಮಾಹಿತಿ ನೀಡಬೇಕು, ಮಕ್ಕಳ ರಕ್ಷಣಾ ನೀತಿ ಸಮರ್ಪಕವಾಗಿ ಅನುಷ್ಠಾನವಾಗಬೇಕು, ಮಕ್ಕಳ ಹಕ್ಕುಗಳ ಕ್ಲಬ್ ರಚಿಸಬೇಕು, ವಿವಿಧ ಇಲಾಖೆಗಳಲ್ಲಿ ಮಕ್ಕಳಿಗಾಗಿ ರೂಪಿಸಿರುವ ಯೋಜನೆಗಳು ಮತ್ತು ಅನುದಾನದ ಸಂಪೂರ್ಣ ಸದ್ಬಳಕೆ ಆಗಬೇಕು.

5) ಆರೋಗ್ಯ ಇಲಾಖೆಯ ಮೂಲಕ ಎಲ್ಲಾ ಶಾಲಾ ಮಕ್ಕಳ ಆರೋಗ್ಯ ಪರಿಶೀಲನೆ ನಡೆಸಿ, ಅಗತ್ಯವಿದ್ದಲ್ಲಿ ಮಕ್ಕಳಿಗೆ ಹೆಚ್ಚಿನ ಚಿಕಿತ್ಸೆ ನೀಡಬೇಕು. ಹದಿ ಹರೆಯದವರ ಗರ್ಭಧಾರಣೆಯ ಕುರಿತಂತೆ ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಪರಿಶೀಲನೆ ನಡೆಸಿ, ವರದಿಯನ್ನು ಸಂಬಂಧಪಟ್ಟ ಇಲಾಖೆಗೆ ನೀಡದೆ ಇರುವ ಬಗ್ಗೆ ಎಚ್ಚರವಹಿಸಬೇಕು ಮತ್ತು ಭ್ರೂಣ ಲಿಂಗಪತ್ತೆ ನಡೆಯದಂತೆ ಕೂಡಾ ಪರಿಶೀಲಿಸಬೇಕು, ಗ್ರಾಮ ಪಂಚಾಯತ್ ಸೇರಿದಂತೆ ಎಲ್ಲಾ ನಗರ, ಸ್ಥಳೀಯ ಸಂಸ್ಥೆಗಳಲ್ಲಿನ 25% ಅನುದಾನದಲ್ಲಿ 18 ವರ್ಷದೊಳಗಿನ ಮಕ್ಕಳಿಗೂ ಮೀಸಲಿಡಬೇಕು. 5% ವಿಕಲಚೇತನ ಅನುದಾನದಲ್ಲಿ ವಿಕಲಚೇತನ ಮಕ್ಕಳಿಗೆ ಸೌಲಭ್ಯಗಳನ್ನು ನೀಡಿ, 2% ಕ್ರೀಡಾ ಅನುದಾನದಲ್ಲಿ ಮಕ್ಕಳಿಗೆ ಸೌಲಭ್ಯಗಳನ್ನು ನೀಡಬೇಕು, ಹಾಸ್ಟೆಲ್ ವಿದ್ಯಾರ್ಥಿಗಳ ಆರೋಗ್ಯವನ್ನು ಆರೋಗ್ಯ ಇಲಾಖೆ ಮೂಲಕ ಪರೀಕ್ಷಿಸಿ, ಅವರ ಆರೋಗ್ಯಕ್ಕೆ ಒತ್ತು ನೀಡಿ ಮಕ್ಕಳ ಮನೋ ವಿಕಾಸಕ್ಕೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು.

– ಕರುನಾಡ ಕಂದ

# ಖ್ಯಾತಿ ಗಳಿಸಲೋ ಅಥವಾ ಹಣ ಗಳಿಸಲೋ Operation Sindoor ಘೋಷಿಸಲಿಲ್ಲ': ಕ್ಷಮೆ ಕೋರಿದ ನಿರ್ದೇಶಕ




**ಮುಂಬೈ:** ಪಹಲ್ಗಾಮ್ ಉಗ್ರ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸೇನೆ ಪಾಕಿಸ್ತಾನದ ಮೇಲೆ ನಡೆಸಿದ Operation Sindoor ಕಾರ್ಯಾಚರಣೆ ಹೆಸರಲ್ಲೇ ಚಿತ್ರ ನಿರ್ಮಾಣಕ್ಕೆ ಮುಂದಾಗಿದ್ದ ಚಿತ್ರ ನಿರ್ದೇಶಕ ಕೊನೆಗೂ ಕ್ಷಮೆ ಯಾಚಿಸಿದ್ದಾರೆ.

ಹೌದು.. ಆಪರೇಷನ್ ಸಿಂಧೂರ್ ಚಿತ್ರದ ಘೋಷಣೆಯ ನಂತರ, ನಿರ್ದೇಶಕ ಉತ್ತಮ್ ಮಹೇಶ್ವರಿ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ದೇಶದ ರಕ್ಷಣೆಗಾಗಿ ನಡೆಸಿದ ಕಾರ್ಯಾಚರಣೆಯ ಹೆಸರನ್ನೇ ಲಾಭಕ್ಕಾಗಿ ನಿರ್ದೇಶಕರು ಬಳಸಿಕೊಳ್ಳುತ್ತಿದ್ದಾರೆ ಎಂದು ವ್ಯಾಪಕ ಟೀಕೆಗಳು ಬಂದಿತ್ತು. ಇದೀಗ ಈ ಎಲ್ಲ ಟೀಕೆಗಳಿಗೆ ಪ್ರತಿಕ್ರಿಯೆ ನೀಡಿರುವ ನಿರ್ದೇಶಕ ಉತ್ತಮ್ ಮಹೇಶ್ವರಿ ಸಾರ್ವಜನಿಕ ಕ್ಷಮೆಯಾಚಿಸಿದ್ದಾರೆ.

ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ಹೇಳಿಕೆಯಲ್ಲಿ, ಚಿತ್ರದ ಹಿಂದಿನ ಉದ್ದೇಶವು ಯಾರ ಭಾವನೆಗಳನ್ನು ನೋಯಿಸುವುದು ಅಥವಾ ಪ್ರಚೋದಿಸುವುದು ಅಲ್ಲ. ನಮ್ಮ ಭಾರತೀಯ ಸಶಸ್ತ್ರ ಪಡೆಗಳ ಇತ್ತೀಚಿನ ವೀರೋಚಿತ ಪ್ರಯತ್ನಗಳಿಂದ ಪ್ರೇರಿತವಾದ ಆಪರೇಷನ್ ಸಿಂಧೂರ್ ಆಧಾರಿತ ಚಲನಚಿತ್ರವನ್ನು ಇತ್ತೀಚೆಗೆ ಘೋಷಿಸಿದ್ದಕ್ಕಾಗಿ ನನ್ನ ಪ್ರಾಮಾಣಿಕ ಕ್ಷಮೆಯಾಚಿಸುತ್ತೇನೆ.


ಯಾರ ಭಾವನೆಗಳನ್ನು ನೋಯಿಸುವುದು ಅಥವಾ ಪ್ರಚೋದಿಸುವುದು ಎಂದಿಗೂ ನನ್ನ ಉದ್ದೇಶವಾಗಿರಲಿಲ್ಲ. ನಮ್ಮ ಸೈನಿಕರು ಮತ್ತು ನಾಯಕತ್ವದ ಧೈರ್ಯ, ತ್ಯಾಗ ಮತ್ತು ಶಕ್ತಿಯಿಂದ ನಾನು ಪ್ರಭಾವಿತನಾದೆ ಮತ್ತು ಈ ಪ್ರಬಲ ಕಥೆಯನ್ನು ತೆರೆ ಮೇಲೆ ತರಲು ಬಯಸುತ್ತೇನೆ ಎಂದು ಮಹೇಶ್ವರಿ ಸ್ಪಷ್ಟಪಡಿಸಿದ್ದಾರೆ.

ಈ ಚಿತ್ರವನ್ನು ನಾನು ಖ್ಯಾತಿಗಳಿಸಲೋ ಅಥವಾ ಹಣಗಳಿಸಲೆಂದು ಘೋಷಣೆ ಮಾಡಲಿಲ್ಲ. ಈ ಚಿತ್ರ ಸಿನಿಮೀಯ ಉದ್ಯಮಕ್ಕಿಂತ ದೊಡ್ಡದು. ಇದು ಕೇವಲ ಚಲನಚಿತ್ರವಲ್ಲ, ಇದು ಇಡೀ ರಾಷ್ಟ್ರದ ಭಾವನೆ ಮತ್ತು ಜಾಗತಿಕವಾಗಿ ದೇಶದ ಸಾಮಾಜಿಕ ಚಿತ್ರಣವಾಗಿರಲಿದೆ ಎಂದು ಹೇಳಿದರು.

ರಾಷ್ಟ್ರದ ಮೇಲಿನ ಗೌರವ ಮತ್ತು ಪ್ರೀತಿಯಿಂದ ರಚಿಸಲಾಗಿದೆಯೇ ಹೊರತು ಖ್ಯಾತಿ ಅಥವಾ ಹಣಗಳಿಕೆಗಾಗಿ ಅಲ್ಲ. ಆದಾಗ್ಯೂ, ಸಮಯ ಮತ್ತು ಸೂಕ್ಷ್ಮತೆಯು ಕೆಲವರಿಗೆ ಅನಾನುಕೂಲ ಅಥವಾ ನೋವನ್ನು ಉಂಟುಮಾಡಿರಬಹುದು ಎಂದು ನನಗೆ ಅರ್ಥವಾಗಿದೆ. ಅದಕ್ಕಾಗಿ ನಾನು ತೀವ್ರವಾಗಿ ವಿಷಾದಿಸುತ್ತೇನೆ" ಎಂದು ಪೋಸ್ಟ್ ಮಾಡಿದ್ದಾರೆ.

ಕರುನಾಡ ಕಂದ
ಸಂಪುಟ 04 । ಸಂಚಿಕೆ 14
ದಿನಾಂಕ: 16-05-2025 ಪುಟಗಳು:16

# "ಸಾಮಾಜಿಕ ಜಾಲತಾಣ ಬಳಕೆದಾರರೇ... ಎಚ್ಚರ!



ಸೆಕ್ಸ್‌ಟಾರ್ಷನ್ ಅಂದ್ರೆ ಏನು ಅನ್ನುವುದನ್ನು ಸಾಮಾಜಿಕ ಜಾಲತಾಣದಲ್ಲಿ ಇರುವವರೆಲ್ಲಾ ತಿಳಿದುಕೊಳ್ಳಿ... ಲೈಂಗಿಕ ಚಟುವಟಿಕೆಯ ಪುರಾವೆಗಳನ್ನು ಬಹಿರಂಗಪಡಿಸುವುದಾಗಿ ಬೆದರಿಸುವ ಮೂಲಕ ಯಾರೊಂದಿಗಾದರೂ ಹಣ ಅಥವಾ ಲೈಂಗಿಕ ಅನುಕೂಲಗಳನ್ನು ಸುಲಿಗೆ ಮಾಡುವ ಅಭ್ಯಾಸವು ಸೆಕ್ಸ್‌ಟಾರ್ಷನ್ ಆಗಿದೆ.

"ಅವಳು ಮತ್ತು ಇತರ ಏಳು ಮಹಿಳೆಯರು ಲೈಂಗಿಕ ಕಿರುಕುಳಕ್ಕೆ ಬಲಿಯಾದರು" ದಯವಿಟ್ಟು ಪ್ರತಿಯೊಬ್ಬರು ಓದಿ ಬೇರೆಯವರಿಗೆ ತಿಳಿಹೇಳಿ ಜಾಗೃತಿ ಮೂಡಿಸಿ... ನಿಮ್ಮ ಮೊಬೈಲ್ ಗೆ ಮಹಿಳೆಯರಾಗಲಿ ಪುರುಷರಾಗಲಿ ವಾಟ್ಸಾಪ್ ಫೇಸ್ ಬುಕ್ಕು instagram youtube ಫೋಟೋ ಹಾಕುವ ಮುನ್ನ ನಿಗ ವಹಿಸಿ ಮೆಸೇ-ಜಿಂಗ್ ,ಅಪ್ಲಿಕೇಶನ್ ,ಡೇಟಿಂಗ್, ಮಾಧ್ಯಮ, ಅಶ್ಲೀಲ ,ಸೈಟ್ ,ಇತ್ಯಾದಿ ವಿಡಿಯೋ ಆಡಿಯೋ ಚಾಟ್ ಪೋಸ್ಟ್ ನಕಲಿ ಖಾತೆ ಪ್ರೊಫೈಲ್ ಪುಟಗಳು ಜಾಹೀರಾತು ಇತ್ತೀಚಿಗೆ ಸೈಬರ್ ಅಪರಾಧಗಳು ಹೆಚ್ಚುತ್ತಿವೆ. ಅದರಲ್ಲೂ ನಗ್ನ ಫೋಟೋ, ವಿಡಿಯೋ ಇಂತಹ ದಂಧೆಗಳಿಗೆ ಜನರು ಹೆಚ್ಚು ಬಲಿಯಾಗುತ್ತಿದ್ದಾರೆ. ಕೆಲವು ತಿಂಗಳ ಹಿಂದೆ, ಪುಣೆಯ ವೈದ್ಯರೊಬ್ಬರು ಸೆಕ್ಸ್‌ಟಾರ್ಷನ್ ಬಲೆಗೆ ಬಿದ್ದು, ಸಾವಿರಾರು ರೂಪಾಯಿ ಕಳೆದು ಕೊಂಡಿದ್ದಾರೆ.

ವಂಚಕನು ನಿಮ್ಮ ಖಾಸಗಿ ಮತ್ತು ಸೂಕ್ಷ್ಮ ವಿಷಯವನ್ನು ಆನ್‌ಲೈನ್‌ನಲ್ಲಿ ಪ್ರಸಾರ ಮಾಡುವುದಾಗಿ ಬೆದರಿಕೆ ಹಾಕಿದಾಗ ಆನ್‌ಲೈನ್ ಸೆಕ್ಸ್‌ಟಾರ್ಷನ್ ಸಂಭವಿಸುತ್ತದೆ. ನೀವು ಲೈಂಗಿಕ ಸ್ವಭಾವದ ಚಿತ್ರಗಳು, ಲೈಂಗಿಕ ಸಹಾಯ ಅಥವಾ ಹಣವನ್ನು ಒದಗಿಸದಿದ್ದರೆ. ಅಪರಾಧಿಯು ನಿಮ್ಮ ಸ್ನೇಹಿತರು ಅಥವಾ ಸಂಬಂಧಿಕರಿಗೆ ನೀವು ಅವರ ಬೇಡಿಕೆಗಳನ್ನು ಅನುಸರಿಸದ ಹೊರತು ಎಲೆಕ್ಟ್ರಾನಿಕ್ ಸಾಧನಗಳಿಂದ ಅವರು ಪಡೆದ ಮಾಹಿತಿಯನ್ನು ಬಳಸಿಕೊಂಡು ಹಾನಿ ಮಾಡುವುದಾಗಿ ಬೆದರಿಕೆ ಹಾಕಬಹುದು. ಸೆಕ್ಸ್‌ಟಾರ್ಷನ್ ಎನ್ನುವುದು ಆನ್‌ಲೈನ್ ದುರುಪಯೋಗದ ಒಂದು ರೂಪವಾಗಿದೆ, ಇದರಲ್ಲಿ ಸೈಬರ್ ಅಪರಾಧಿಗಳು ತ್ವರಿತ ಸಂದೇಶ ಕಳುಹಿಸುವ ಅಪ್ಲಿಕೇಶನ್‌ಗಳು, SMS, ಆನ್‌ಲೈನ್ ಡೇಟಿಂಗ್ ಅಪ್ಲಿಕೇಶನ್‌ಗಳು, ಸಾಮಾಜಿಕ ಮಾಧ್ಯಮ ವೇದಿಕೆಗಳು, ಅಶ್ಲೀಲ ಸೈಟ್‌ಗಳು ಇತ್ಯಾದಿಗಳಂತಹ ವಿವಿಧ ಚಾನೆಲ್‌ಗಳನ್ನು ಬಳಸಿಕೊಂಡು ಬಳಕೆದಾರರನ್ನು ನಿಕಟ ವೀಡಿಯೊ/ಆಡಿಯೋ ಚಾಟ್‌ಗಳಿಗೆ ಆಮಿಷವೊಡ್ಡುತ್ತಾರೆ ಮತ್ತು ಅವರನ್ನು ನಗ್ನವಾಗಿ ಪೋಸ್ ನೀಡುತ್ತಾರೆ ಅಥವಾ ಅವರಿಂದ ಬಹಿರಂಗಪಡಿಸುವ ಚಿತ್ರಗಳನ್ನು ಪಡೆಯುತ್ತಾರೆ.

ವಂಚಕರು ನಂತರ ಈ ವಿಷಯವನ್ನು ಬಲಿಪಶುಗಳಿಗೆ ಕಿರುಕುಳ ನೀಡಲು, ಮುಜುಗರಪಡಿಸಲು, ಬೆದರಿಕೆ ಹಾಕಲು, ಶೋಷಿಸಲು ಮತ್ತು ಬ್ಲ್ಯಾಕ್‌ಮೇಲ್ ಮಾಡಲು ಬಳಸುತ್ತಾರೆ. ಬಳಕೆದಾರರು ಅಂತಹ ಸೇವೆಗಳಿಗೆ ಹಣ ಪಾವತಿಸಿದಾಗ ಮತ್ತು ನಗ್ನವಾಗಿ ಪೋಸ್ ನೀಡಿದಾಗ ಅಥವಾ ವೀಡಿಯೊ ಕರೆಗಳಲ್ಲಿ ರಾಜಿ ಮಾಡಿಕೊಳ್ಳುವ ಸ್ಥಾನದಲ್ಲಿದ್ದಾಗ, ನಕಲಿ ಖಾತೆ/ಪ್ರೊಫೈಲ್‌ಗೆ ಸ್ನೇಹಿತರ ವಿನಂತಿಗಳನ್ನು ಸ್ವೀಕರಿಸಿದಾಗ ಅಥವಾ ಕಳುಹಿಸಿದಾಗ ಮತ್ತು ವೀಡಿಯೊ ಚಾಟ್‌ಗಳಲ್ಲಿ ನಗ್ನವಾಗಿ ಪೋಸ್ ನೀಡುವ ಮೂಲಕ ನಿಕಟ ಸಂವಹನದಲ್ಲಿ ತೊಡಗಿದಾಗ, ಬಹಿರಂಗಪಡಿಸುವ ಚಿತ್ರಗಳನ್ನು ಕಳುಹಿಸಿದಾಗ, ಇತ್ಯಾದಿ. ವಂಚಕನು ವೀಡಿಯೊವನ್ನು ರೆಕಾರ್ಡ್ ಮಾಡುತ್ತಾನೆ/ ಸ್ಕ್ರೀನ್‌ಶಾಟ್ ತೆಗೆದುಕೊಳ್ಳುತ್ತಾನೆ/ಚಿತ್ರಗಳನ್ನು ತೆಗೆದುಕೊಳ್ಳುತ್ತಾನೆ/ಬಹಿರಂಗಪಡಿಸುವ ಚಿತ್ರಗಳನ್ನು ಬಳಸುತ್ತಾನೆ/ಕಳುಹಿಸಿದ ಚಿತ್ರಗಳನ್ನು ಮಾರ್ಫ್ ಮಾಡುತ್ತಾನೆ ವಂಚಕನು ಬಲಿಪಶುವನ್ನು ಬ್ಲ್ಯಾಕ್‌ಮೇಲ್ ಮಾಡಲು ಪ್ರಾರಂಭಿಸುತ್ತಾನೆ, ಇದು ಸೆಕ್ಸ್‌ಟೋರ್ಶನ್‌ಗೆ ಕಾರಣವಾಗುತ್ತದೆ.

ಅಶ್ಲೀಲ ಸೈಟ್‌ಗಳ ಬಳಕೆದಾರರು ಸಹ ಸೆಕ್ಸ್‌ಟೋರ್ಶನ್‌ಗೆ ಬಲಿಯಾಗಬಹುದು, ಏಕೆಂದರೆ ಅವರ ಚಾಟ್‌ಗಳು/ವಿಡಿಯೋ ಕರೆಗಳನ್ನು ವಂಚಕರು ಬ್ಲ್ಯಾಕ್‌ಮೇಲಿಂಗ್‌ಗೆ ಬಳಸುತ್ತಾರೆ. ಯಾವುದೇ ರೀತಿಯ ಸೈಬರ್ ಅಪರಾಧ ಇದ್ದರೆ, ನೀವು ಸೈಬರ್ ಅಪರಾಧ ವಿಭಾಗದಲ್ಲಿ ಎಫ್‌ಐಆರ್ ದಾಖಲಿಸಬಹುದು. 'ಭಾರತದ ಗೃಹ ಸಚಿವಾಲಯ'ಕ್ಕೆ ಆನ್ ಲೈನ್‌ನಲ್ಲಿ ದೂರು ಸಲ್ಲಿಸಬಹುದು. ಇದರಿಂದ ಬೇಗ ಸಮಸ್ಯೆಯಿಂದ ಪರಿಹಾರ ಸಿಗುತ್ತೆ.

**-ನವೀನ ಹೆಚ್ ಎ**

# ಬೈಕ್ ಕಳ್ಳರನ್ನು ವಶಕ್ಕೆ ಪಡೆದ ಕೊಟ್ಟೂರು ಆರಕ್ಷಕರು



ವಿಜಯನಗರ ಜಿಲ್ಲೆ ಕೊಟ್ಟೂರು ಪೊಲೀಸ್ ರವರ ಕಾರ್ಯಾಚರಣೆಯಲ್ಲಿ ಬೈಕ್ ಕಳ್ಳತನ ಮಾಡುತ್ತಿದ್ದ ಆರೋಪಿತನಿಂದ ಅಂದಾಜು 1,00,000/- ರೂಪಾಯಿ ಬೆಲೆ ಬಾಳುವ ಒಟ್ಟು 3 ಬೈಕ್ ಗಳ ಜಪ್ತಿ.

ದಿ. 7 -5 -25 ರಂದು ರಾತ್ರಿ 8.15 ಗಂಟೆಗೆ ಪೊಲೀಸ್ ಠಾಣೆಯಲ್ಲಿ ದಾಖಲಾದ ಗುನ್ನೆ ನಂಬರ್ 13 /2025 ಬಿ .ಎನ್. ಎಸ್ ರೀತ್ಯಾ ಪ್ರಕರಣದಲ್ಲಿ ತನಿಖೆ ಕೈಗೊಂಡು, ಈ ಬಗ್ಗೆ ಆರೋಪಿತರ ಹಾಗೂ ಮಾಲು ಪತ್ತೆಗಾಗಿ ಶ್ರೀ ಮಲ್ಲೇಶ್ ದೊಡ್ಡಮನಿ ಡಿ.ವೈ. ಎಸ್ಪಿ. ಕೂಡ್ಲಿಗಿ ರವರ ಮಾರ್ಗದರ್ಶನದಲ್ಲಿ ಶ್ರೀ ವೆಂಕಟಸ್ವಾಮಿ. ಟಿ ಸಿ .ಪಿ .ಐ ಕೊಟ್ಟೂರು ವೃತ್ತ ರವರ ನೇತೃತ್ವದಲ್ಲಿ ಶ್ರೀಮತಿ ಗೀತಾಂಜಲಿ ಶಿಂಧೆ .ಪಿ.ಎಸ್.ಐ (ಕಾನೂನು ಸುವ್ಯವಸ್ಥೆ), ಕೊಟ್ಟೂರು ಪೊಲೀಸ್ ಠಾಣಾ ಸಿಬ್ಬಂದಿಯವರಾದ ಶ್ರೀ ಬಸವರಾಜ ಹೆಚ್ . ಸಿಪಿಸಿ -. ಶ್ರೀ ವೀರೇಶ್ ಸಿಪಿಸಿ-166, ಶ್ರೀ ಶಶಿಧರ ಸಿಪಿಸಿ-494, ನಾಗಪ್ಪ ಯು . ಹೆಚ್.ಸಿ -256, ಶ್ರೀ ಯರಿಸ್ವಾಮಿ ಪಿಸಿ -211 ಇವರ ನೇತೃತ್ವದಲ್ಲಿ ತಂಡ ರಚಿಸಿದ್ದು, ಸದರಿ ತಂಡದವರ ವಿವಿಧ ಆಯಾಮಗಳಲ್ಲಿ ತನಿಖೆಯನ್ನು ನಡೆಸಿ ಪ್ರಕರಣದ ಆರೋಪಿ ಪತ್ತೆ ಕಾರ್ಯದಲ್ಲಿ ಕಾರ್ಯನಿರತರಾಗಿ ಆರೋಪಿ ಕೆ .ಹನುಮಂತ ತಂದೆ ತಿಂದಪ್ಪ 23 ವರ್ಷ, ಕೊರವಾರ ಜನಾಂಗ ಗಾರೆ ಕೆಲಸ ವಾಸ -ಉಜ್ಜನಿ ಹೊಸ ಪ್ಲಾಟ್ ಉಜ್ಜನಿ ಗ್ರಾಮ ಕೊಟ್ಟೂರು ತಾಲೂಕು, ಈತನನ್ನು ದಿನಾಂಕ 09-05-2025 ರಂದು ಬೆಳಿಗ್ಗೆ 11-45 ರಂದು ಕೊಟ್ಟೂರು ಪಟ್ಟಣದ ಶ್ರೀ ಮರುಳಸಿದ್ದೇಶ್ವರ ಕಲ್ಯಾಣ ಮಂಟಪದ ಹತ್ತಿರ ವಶಕ್ಕೆ ಪಡೆದು ವಿಚಾರಣೆ ಒಳಪಡಿಸಲಾಗಿದೆ.

ಆರೋಪಿತನಿಂದ ಅಂದಾಜು ರೂ. 1 ಲಕ್ಷ ಬೆಲೆಬಾಳುವ ಹೀರೋ ಸ್ಪೆಂಡರ್ ಪ್ಲಸ್ ಕಂಪನಿಯ 3 ಮೋಟಾರ್ ಸೈಕಲ್ ಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ.

ಈ ಕಾರ್ಯಾಚರಣೆಗೆ ಮಾನ್ಯ ಶ್ರೀಹ-ರಿಬಾಬು ಪೊಲೀಸ್ ಅಧೀಕ್ಷಕರು ವಿಜಯನಗರ ಜಿಲ್ಲೆ ಇವರು ಪ್ರಶಂಸೆ ವ್ಯಕ್ತಪಡಿಸಿರುತ್ತಾರೆ.

**ವರದಿಗಾರರು-ಎನ್. ಚಂದ್ರಗೌಡ**

ಕರುನಾಡ ಕಂದ
ಸಂಪುಟ 04 | ಸಂಚಿಕೆ 14
ದಿನಾಂಕ: 16–05–2025 ಪುಟಗಳು:16

# ಸರ್ಕಾರಿ ಪ್ರೌಢಶಾಲೆ ಮುಖ್ಯ ಗುರುಗಳಿಂದ ಹಣ ವಸೂಲಿ



ಕಲ್ಬುರ್ಗಿ ಜಿಲ್ಲೆಯ ಕಾಳಗಿ ತಾಲೂಕಿನ ರಟಕಲ್ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಮುಖ್ಯಗುರುಗಳು ಮಕ್ಕಳಿಂದ ಹಣ ವಸೂಲಿ ಮಾಡುವುದನ್ನು ನೇರಾ ನೇರವಾಗಿ ಭರದಿಂದ ನಡೆಸುತ್ತಿದ್ದಾರೆ.


ಇತ್ತೀಚೆಗೆ 2024 –2025 ನೇ ಶೈಕ್ಷಣಿಕ ಸಾಲಿನ ಹತ್ತನೇ ತರಗತಿಯ ವಿದ್ಯಾರ್ಥಿಗಳ ಹಾಜರಾತಿ ಕಡಿಮೆ ಇದೆ ಎಂದು ಪರೀಕ್ಷೆಗೆ ಕೂಡಿಸದ ಕಾರಣ, ಆ ಮಕ್ಕಳು ಮತ್ತೆ ಸರಕಾರದ ನಿಯಮದಂತೆ ಮಕ್ಕಳು ಮತ್ತೆ ಪರೀಕ್ಷೆ ಬರೆಯಲು ಬಂದಾಗ ಮಕ್ಕಳಿಂದ ಫೀಸ್ ಎಂದು ಕೇಳುವ ಮೂಲಕ ಸಾವಿರಾರು ರೂಪಾಯಿ ಹಣವನ್ನು ಫೋನ್ ಪೇ ಮತ್ತು ಕೈಯಿಂದ ನಗದು ರೂಪದಲ್ಲಿ ತೆಗೆದುಕೊಂಡಿದ್ದಾರೆ ಇದಕ್ಕೆ ಹಣ ಕೊಟ್ಟ ಮಕ್ಕಳು, ಪೋಷಕರೇ ಸಾಕ್ಷಿ ಹಾಗೂ ಇನ್ನುಳಿದ ಮಕ್ಕಳು ಪ್ರತಿದಿನ ಶಾಲೆಗೆ ಫೀಸ್ ಕಟ್ಟಲು ಬಂದಿರುತ್ತಾರೆ, ಆದರೆ ಮುಖ್ಯಗುರುಗಳು ಶಾಲೆಗೆ ಬಂದಿರುವುದಿಲ್ಲ ಫೋನಿನ ಮುಖಾಂತರ ಮಾತನಾಡಿದರೆ ಕಲಬುರಗಿಗೆ ಬಂದು ಫೀಸು ಕಟ್ಟಿ ಎಂದು ಹೇಳಿರುತ್ತಾರೆ ಇದು ಸರಕಾರಿ ಶಾಲೆಯೋ ಅಥವಾ ಅವರ ಖಾಸಗಿ ಶಾಲೆಯೋ ಎಂದು ಅರ್ಥವಾಗುತ್ತಿಲ್ಲ ಮತ್ತು ಸಹ ಶಿಕ್ಷಕರು ಸಹ ಬಂದಿರುವುದಿಲ್ಲ ಇನ್ನೂ ಬಹಳ ವಿದ್ಯಾರ್ಥಿಗಳು ಪರೀಕ್ಷೆಗೆ ಕೂಡುವವ–ರಿದ್ದಾರೆ ಮನಸ್ಸಿಗೆ ಬಂದಂತೆ ಮಾತನಾಡುವ ಶಿಕ್ಷಕರ ವಿರುದ್ಧ ಕ್ರಮ ಜರುಗಿಸಿ ಇವರನ್ನು ಕೂಡಲೇ ಸೇವೆಯಿಂದ ವಜಾಗೊಳಿಸಬೇಕೆಂದು ಅ. ಪ. ರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಕಲ್ಬುರ್ಗಿ ಮತ್ತು ಉಪ ನಿರ್ದೇಶಕರು ಆಡಳಿತ ಕಲಬುರ್ಗಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಚಿಂಚೋಳಿ ರವರಿಗೆ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ ಹಾಗೂ ಈಗಾಗಲೇ ಪರೀಕ್ಷೆಗೆ ಕೂಡದೆ ವಂಚಿತರಾದ ಮಕ್ಕಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಭೇಟಿ ಮಾಡಿ ಮತ್ತೆ ಪರೀಕ್ಷೆಗೆ ಅನುವು ಮಾಡಿಕೊಡಬೇಕು, ಎಷ್ಟೋ ಬಾರಿ ಫೋನಿನ ಮುಖಾಂತರ ಮೇಲಾಧಿಕಾರಿಗಳಿಗೆ ಗಮನಕ್ಕೆ ತಂದರೂ ಯಾರೂ ಸಹ ಆ ಶಿಕ್ಷಕರ ಮೇಲೆ ಕ್ರಮ ತೆಗೆದುಕೊಂಡಿಲ್ಲ ಕೂಡಲೇ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಮುಖ್ಯ ಗುರುಗಳ ವಿರುದ್ಧ ನಿರ್ಧಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು ಇಲ್ಲವಾದರೆ ವಿದ್ಯಾರ್ಥಿಗಳು ಮತ್ತು ಪೋಷಕರಿಂದ ರಾಜ್ಯ ಹೆದ್ದಾರಿ ತಡೆದು ಹೋರಾಟ ಮಾಡಬೇಕಾಗುತ್ತದೆ ಕರ್ನಾಟಕ ರಾಜ್ಯ ಕಲ್ಬುರ್ಗಿ ಜಿಲ್ಲೆಯಲ್ಲಿ ಹಿಂದುಳಿದ ತಾಲೂಕ ವೆಂದರೆ ಅದುವೇ ಚಿಂಚೋಳಿ ತಾಲೂಕು ಈಗಾಗಲೇ 10ನೇ ತರಗತಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಫೇಲಾದ ಕಾರಣ ಈ ಶಾಲೆಯಲ್ಲಿನ ಮುಖ್ಯ ಗುರುಗಳು ಹಾಗೂ ಶಿಕ್ಷಕರನ್ನು ಸೇವೆಯಿಂದ ವಜಾಗೊಳಿಸಬೇಕೆಂದು ವೀರಣ್ಣ ಗಂಗಾಣಿ ರೈತ ತಾಲೂಕಾಧ್ಯಕ್ಷರು ಎಚ್ಚರಗೊಳಿಸುತ್ತೇವೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಎಸ್ ಡಿ ಎಂ ಸಿ ಅಧ್ಯಕ್ಷರಾದ ವೀರೇಶ್ ಬಕಟಗಿ, ಮಾಜಿ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಗೌರಿಶಂಕರ್ ಕಿಣ್ಣಿ, ಚಿಂಚೋಳಿ ಮಂಡಲ ಓಬಿಸಿ ಮೋರ್ಚಾ ಅಧ್ಯಕ್ಷರಾದ ಮಲ್ಲಿಕಾರ್ಜುನ ಮರಗುತಿ, ಮಹಾ ಶಕ್ತಿಕೇಂದ್ರ ರಟಕಲ್ ಗ್ರಾಮದ ಅಧ್ಯಕ್ಷರಾದ ಶರಣು ಸೀಗಿ ಅಪಾರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರ್ಗಿ ರವರಿಗೆ ಮನವಿ ಕೊಡುವ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**–ವರದಿ ಚಂದ್ರಶೇಖರ್ ಆರ್. ಪಾಟೀಲ್**

# ಎಸ್.ಎಲ್.ಟಿ ಶಾಲೆಯ ಅಮೋಘ ಸಾಧನೆ :

## ಸಿ.ಬಿ.ಎಸ್.ಸಿ 100% ಫಲಿತಾಂಶ




**ಯಾದಗಿರಿ/ ಗುರುಮಠಕಲ್:** ಎಸ್ಸೆಸ್ಸೆಲ್ಸಿ ಸಿ.ಬಿ.ಎಸ್.ಸಿ ತರಗತಿಗಳ ಫಲಿತಾಂಶ ಪ್ರಕಟವಾಗಿದ್ದು, ಗಿರಿನಾಡು ಯಾದಗಿರಿ ಜಿಲ್ಲೆಯ ಗುರುಮಠಕಲ್ ನ ಎಸ್. ಎಲ್.ಟಿ ಶಾಲೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಪ್ರಸಕ್ತ 2024–25 ನೇಯ ಸಾಲಿನಲ್ಲಿ ಶಾಲೆ ಶೇ.100 ರಷ್ಟು ಫಲಿತಾಂಶ ದಾಖಲಿಸಿದೆ. ಶಾಲೆಯ ವಿದ್ಯಾರ್ಥಿಗಳಾದ ಅಂಕುಶ್ ರೆಡ್ಡಿ ತಂದೆ ವಿಶ್ವನಾಥರೆಡ್ಡಿ ಶೇ.91%, ರೋಹನ್ ತಂದೆ ವಿನಾಯಕ್ ರಾವ್ ಶೇ.83%, ರಶ್ಮಿಕಾ ತಂದೆ ವಸಂತ ರಾವ್ 81.4%, ಇಷ್ಟಾರ್ಥ ಬೂದಿ ತಂದೆ ಸತ್ಯಾನಂದ ಬೂದಿ 76% ಹಾಗೂ ಬಿಂದುರೆಡ್ಡಿ ತಂದೆ ಶ್ರೀನಿವಾಸ್ ರೆಡ್ಡಿ 75% ರಷ್ಟು ಫಲಿತಾಂಶ ದಾಖಲಿಸಿದ್ದಾರೆ. ಎಸ್. ಎಲ್. ಟಿ ಶಾಲೆಯಲ್ಲಿ ಸಿಬಿಎಸ್ಐ ಅಧ್ಯಯನ ಮಾಡುತ್ತಿದ್ದ 32 ವಿದ್ಯಾರ್ಥಿಗಳಲ್ಲಿ 3 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಆಗಿದ್ದು, 15 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದಾರೆ. ಇನ್ನೂ 14 ವಿದ್ಯಾರ್ಥಿಗಳು ದ್ವಿತೀಯ ದರ್ಜೆ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಸಂಸ್ಥೆಯ ಅಧ್ಯಕ್ಷರು ಶ್ರೀ ಅನ್ವರ ಶೇಕ್ ಮಾತನಾಡಿ ಪೋಷಕರು ನಮ್ಮ ಸಂಸ್ಥೆಯ ಮೇಲೆ ಅಪಾರವಾದ ನಂಬಿಕೆಯನ್ನು ಇಟ್ಟಿದ್ದಾರೆ, ನಮ್ಮ ಬೋಧಕ ವರ್ಗದ ಹೆಚ್ಚಿನ ಪರಿಶ್ರಮದಿಂದ 100 ಪ್ರತಿಶತ ಫಲಿತಾಂಶ ಸಾಧಿಸಲು ಸಾಧ್ಯವಾಗಿದೆ, ನಮ್ಮ ಮೇಲೆ ಭರವಸೆ ಇಟ್ಟಿರುವ ಎಲ್ಲಾ ಪೋಷಕರಿಗೆ ಹಾಗೂ ಎಸ್.ಎಲ್.ಟಿ ಟ್ರಸ್ಟ್ ಅಧ್ಯಕ್ಷರಾದ ಶ್ರೀ ನರೇಂದ್ರ ರಾಥೋಡ್ ಅವರಿಗೆ ಧನ್ಯವಾದಗಳನ್ನು ತಿಳಿಸಿದರು. ಸಾಧನೆಗೈದ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಶಾಲಾ ಮಂಡಳಿವತಿಯಿಂದ ಸನ್ಮಾನಿಸಿ ಮುಂದಿನ ವ್ಯಾಸಂಗಕ್ಕೆ ಶುಭ ಕೋರಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಉಪಾಧ್ಯಕ್ಷರು ನದೀಮ್ ಅಹ್ಮದ್, ಕಾರ್ಯದರ್ಶಿಗಳಾದ ತೌಸಿಫ್ ಅಹಮದ್, ಹಫೀಜ್ ಅಹ್ಮದ್, ವಿದ್ಯಾರ್ಥಿಗಳ ಪೋಷಕರು, ಶಾಲೆಯ ಸಿಬ್ಬಂದಿ ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

**ವರದಿ: ಜಗದೀಶ್ ಕುಮಾರ್ ಭೂಮಾ**



ಶ್ರೀ ಅಣ್ಣಾರಾವ. ಎಸ್. ಪೆದ್ದಿ ಅಧ್ಯಕ್ಷರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಕೋಡ್ಲಿ ತಾ. ಕಾಳಗಿ , ಜಿ. ಕಲಬುರಗಿ ಅವರನ್ನು ಕರುನಾಡ ಕಂದ ಪತ್ರಿಕೆಯೊಂದಿಗೆ ಭೇಟಿ ಮಾಡಿದ ಸಂದರ್ಭ. ವರದಿಗಾರರು : ಚಂದ್ರಶೇಖರ್ ಕೋಡ್ಲಿ

"ಕರುನಾಡ ಕಂದ ಪತ್ರಿಕೆ"
ನ್ಯೂಸ್ ಪೋರ್ಟಲ್
ಹಾಗೂ ಯುಟ್ಯೂಬ್ ಚಾನೆಲ್ ಗೆ
ಪಾರ್ಟ್/ಫುಲ್ ಟೈಮ್ ನಲ್ಲಿ
ಕಾರ್ಯ ನಿರ್ವಹಿಸಲು
ರಾಜ್ಯಾದ್ಯಂತ ಎಲ್ಲಾ ಜಿಲ್ಲೆ, ತಾಲೂಕು
ಮಟ್ಟದಲ್ಲಿ ಸ್ಥಳೀಯ ವರದಿಗಾರರು
ಬೇಕಾಗಿದ್ದಾರೆ.

18 ವರ್ಷದಿಂದ 45 ವರ್ಷದವರೆಗಿನ
ಆಸಕ್ತರು ಸಂಪರ್ಕಿಸಬಹುದು.

TARGET ಇರುವುದಿಲ್ಲ

ಹೆಚ್ಚಿನ ಮಾಹಿತಿಗಾಗಿ ನಿಮ್ಮ ಹೆಸರು,
ತಾಲ್ಲೂಕು ವಾಟ್ಸ್ ಆಪ್ ಮಾಡಿ ಅಥವಾ
ಕರೆ ಮಾಡಿ:

ಬಸವರಾಜ ಬಳಿಗಾರ, ಸಂಪಾದಕರು
Call & WhatsApp:
9986366909
www.karunadakanda.com




KARUNADA KANDA Fourthnightly, Printed by, Published by, owned by KARIBASAPPA BALIGAR and Printed at Nikhil offset Printers Ward No 23, Buddha Circle, Hosalli main Road, Gangavati 583227.Tq-Gangavati, Dist:Koppal, and Published at : # 94,at-Post-Gunnal, Tq-Yalaburga,Dst-Koppal,pin-583237,PH:9986366909, 9742776385 Editor-KARIBASAPPA BALIGAR